**CHRI 2020**

# ಪ್ರತಿಬಂಧದ ಹಿಂದಿನ ಮಾನಕಗಳು
# ಮಹಿಳಾ ಬಂದಿಗಳ ಹಕ್ಕುಗಳನ್ನು ಸುನಿಶ್ಚಿತಗೊಳಿಸುವುದು



## ಉಪಯೋಗಿಸುವವರ ಕೈಪಿಡಿ

CHRI
Commonwealth Human Rights Initiative
working for the *practical* realisation of human rights in the Commonwealth

ಪ್ರಸ್ತುತ ಮಾರ್ಗದರ್ಶಿಯು ಕಾರಾಗೃಹದ ನಿರ್ವಹಣೆಯಲ್ಲಿ ಲಿಂಗ ಸೂಕ್ಷ್ಮತೆಯನ್ನು ಆಧರಿಸಿದ ವಿಧಾನಗಳ ಅಗತ್ಯತೆಗಳನ್ನು ಒತ್ತಿ ಹೇಳುತ್ತದೆ. ಮಹಿಳಾ ಬಂದಿಗಳಿಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಹಕ್ಕುಗಳ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಈ ಕೈಪಿಡಿಯು ಪ್ರಯತ್ನಿಸುತ್ತದೆ.

# ಕಾಮನ್‌ವೆಲ್ತ್ ಮಾನವ ಹಕ್ಕುಗಳ ಉಪಕ್ರಮ

ಕಾಮನ್‌ವೆಲ್ತ್ ಮಾನವ ಹಕ್ಕುಗಳ ಉಪಕ್ರಮ (ಸಿ.ಹೆಚ್.ಆರ್.ಐ.) ಎನ್ನುವ ಸಂಸ್ಥೆ ಒಂದು ಸ್ವತಂತ್ರ, ಲಾಭ ರಹಿತ, ಪಕ್ಷಪಾತ ರಹಿತ, ಅಂತಾರಾಷ್ಟ್ರೀಯ ಸರ್ಕಾರೇತರ ಸಂಸ್ಥೆಯಾಗಿದ್ದು, ಮಾನವ ಹಕ್ಕುಗಳ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಸಂಸ್ಥೆಯಾಗಿದೆ. 1987 ರಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿನ ಕೆಲವು ಪ್ರಮುಖ ವೃತ್ತಿಪರ ಸಂಘಟನೆಗಳು ಸೇರಿ ಸಿ.ಹೆಚ್.ಆರ್.ಐ. ಯನ್ನು ಸ್ಥಾಪಿಸಿದವು. ಅಲ್ಲಿಂದ 53 ಕಾಮನ್‌ವೆಲ್ತ್ ರಾಷ್ಟ್ರಗಳು ತಮ್ಮ ಒಡನಾಟದ ಸಂಘಟನೆಯಲ್ಲಿ ಮಾನವ ಹಕ್ಕುಗಳ ಕುರಿತಾಗಿ ಸಾಕಷ್ಟು ಗಮನ ಹರಿಸದಿದ್ದಾಗ್ಯೂ, ಕಾಮನ್‌ವೆಲ್ತ್ ಮಾನವ ಹಕ್ಕುಗಳ ಉಪಕ್ರಮವು (ಸಿ.ಹೆಚ್.ಆರ್.ಐ.) ತನ್ನ ಸದಸ್ಯ ರಾಷ್ಟ್ರಗಳಿಗೆ ಸಾಮಾನ್ಯ ಕಾನೂನುಗಳ ಆಧಾರವನ್ನು ಒದಗಿಸುತ್ತಾ ಬಂದಿದೆ.

ಮಾನವ ಹಕ್ಕುಗಳ ಪ್ರಗತಿ ಮತ್ತು ಹಿನ್ನಡೆಗಳ ಬಗ್ಗೆ ಸಿ.ಹೆಚ್.ಆರ್.ಐ. ಯು ನಿರಂತರವಾಗಿ ತನ್ನ ವರದಿಗಳು ಮತ್ತು ಕಾಲಕಾಲಕ್ಕೆ ನಡೆಸಿದ ಆವರ್ತಕ ಅನ್ವೇಷಣೆಗಳ ಮೂಲಕ ಕಾಮನ್‌ವೆಲ್ತ್‌ನ ರಾಷ್ಟ್ರಗಳಿಗೆ ತನ್ನ ಕಡೆಗೆ ಗಮನವನ್ನು ಸೆಳೆಯುವಂತೆ ಮಾಡುತ್ತಿದೆ. ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಗಟ್ಟುವ ವಿಧಾನಗಳು ಮತ್ತು ಕ್ರಮಗಳಿಗಾಗಿ ವಕಾಲತ್ತನ್ನು ವಹಿಸುತ್ತಿದೆ. ಮಾತ್ರವಲ್ಲದೆ ಸಿ.ಹೆಚ್.ಆರ್.ಐ. ಯು ಕಾಮನ್‌ವೆಲ್ತ್ ಸೆಕ್ರೇಟರಿಯೇಟ್ ಮತ್ತು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಮಿತಿಯ ಸದಸ್ಯರು, ಮಾಧ್ಯಮದವರು ಹಾಗೂ ನಾಗರಿಕ ಸಮಾಜವನ್ನು ಒಗ್ಗೂಡಿಸುತ್ತದೆ. ಸಿ.ಹೆಚ್.ಆರ್.ಐ. ಯು ಸಾರ್ವಜನಿಕ ಶೈಕ್ಷಣಿಕ ಕಾರ್ಯಕ್ರಮಗಳು, ನೀತಿ, ಸಂವಾದ, ತುಲನಾತ್ಮಕ ಸಂಶೋಧನೆಗಳು, ವಕಾಲತ್ತು ಹಾಗೂ ಮಾಹಿತಿಗಳು ಮತ್ತು ನ್ಯಾಯಕ್ಕೆ ಪ್ರವೇಶಾವಕಾಶದ ಸಮಸ್ಯೆಗಳ ಬಗ್ಗೆ ನೆಟ್‌ವರ್ಕಿಂಗ್ ಮಾಡುತ್ತಿದೆ.

ಸಿ.ಹೆಚ್.ಆರ್.ಐ. ಯು ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ ಮತ್ತು ಕಾಮನ್‌ವೆಲ್ತ್ ಹರಾರೆ ತತ್ವಗಳು ಹಾಗೂ ಇತರೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲಾದ ಮಾನವ ಹಕ್ಕುಗಳ ಮಾನ್ಯತೆ ಪಡೆದ ಸಾಧನಗಳು ಹಾಗೂ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಮಾನವ ಹಕ್ಕುಗಳನ್ನು ಬೆಂಬಲಿಸುವ ದೇಶಿಯ ಸಾಧನಗಳನ್ನು ಉತ್ತೇಜಿಸಲು ಪ್ರಯತ್ನಿಸುತ್ತದೆ.

ಸಿ.ಹೆಚ್.ಆರ್.ಐ. ನ ಪ್ರಧಾನ ಕಛೇರಿಯು ಭಾರತದ ನವದೆಹಲಿಯಲ್ಲಿ ಸ್ಥಾಪಿತಗೊಂಡಿದ್ದು, ಇದರ ಶಾಖಾ ಕಛೇರಿಗಳು ಯು.ಕೆ. ಯ ಲಂಡನ್ ಮತ್ತು ಘಾನಾದ ಅಕ್ರಾದಲ್ಲಿ ಸ್ಥಾಪಿಸಲ್ಪಟ್ಟಿದೆ.


**ಅಂತಾರಾಷ್ಟ್ರೀಯ ಸಲಹಾ ಆಯೋಗ:** ಅಲಿಸನ್ ಡಕ್ಸ್‌ಬರಿ, ಅಧ್ಯಕ್ಷರು, ಸದಸ್ಯರು: ವಜಾಹತ್ ಹಬಿಬುಲ್ಲಾ, ಎಡ್ವರ್ಡ್ ಮಾರ್ಟಿಮೆರ್, ಸ್ಯಾಮ್ ವಕುಡ್‌ಜ್ಞೆಟೋ ಮತ್ತು ಸಂಜಯ್ ಹಜ಼ಾರಿಕಾ.

ಕಾರ್ಯಕಾರಿ ಸಮಿತಿ [ಭಾರತ]: ವಜಾಹತ್ ಹಬಿಬುಲ್ಲಾ, ಅಧ್ಯಕ್ಷರು. ಸದಸ್ಯರು: ಬಿ. ಕೆ. ಚಂದ್ರಶೇಖರ್, ಜಯಂತೋ ಚೌಧರಿ, ಮಜಾ ಧಾರುವಾಲ, ನಿತಿನ್ ದೇಸಾಯ್, ಕಮಲ್ ಕುಮಾರ್, ಪೂನಮ್ ಮುಖರ್ಜಿ, ಜಾಕೋಬ್ ಪುನ್ನೋಸೇ, ವಿನಿತಾ ರೈ, ನಿಧಿ ರಾಜ್ದಾನ್, ಎ. ಪಿ. ಷಾ ಮತ್ತು ಸಂಜಯ್ ಹಜ಼ಾರಿಕಾ.

ಕಾರ್ಯಕಾರಿ ಸಮಿತಿ [ಘಾನಾ]: ಸ್ಯಾಮ್ ಒಕುಡ್‌ಜ್ಞೆಟೊ, ಅಧ್ಯಕ್ಷರು. ಸದಸ್ಯರು: ಅಕೊಟೊ ಆಂಪಾವ್, ಯಶ್‌ಪಾಲ್ ಘಾಯ್, ವಜಾಹತ್ ಹಬೀಬುಲ್ಲಾ, ಕೊಫ಼ಿ ಕ್ವಾಷಿಗಾಹ್, ಜುಲಿಯಟ್ ಟುಆಕ್ಲಿ ಮತ್ತು ಸಂಜಯ್ ಹಜ಼ಾರಿಕಾ.

ಕಾರ್ಯಕಾರಿ ಸಮಿತಿ [ಯುನೈಟೆಡ್ ಕಿಂಗ್‌ಡಮ್]: ಜೊ ಅನ್ನಾ ಎವಾರ್ಟ್–ಜೇಮ್ಸ್, ಅಧ್ಯಕ್ಷರು. ಸದಸ್ಯರು: ರಿಚರ್ಡ್ ಬ್ರೌನೆ, ಪ್ರಲಾಬ್ ಬರುವಾ, ಟೋನಿ ಫ಼ೋರ್ಮೆನ್, ನೆವಿಲ್ ಲಿಂಟನ್, ಸುಜ಼ಾನೆ ಲ್ಯಾಂಬರ್ಟ್ ಮತ್ತು ಸಂಜಯ್ ಹಜ಼ಾರಿಕಾ.

ಸಂಜಯ್ ಹಜ಼ಾರಿಕಾ, ಅಂತಾರಾಷ್ಟ್ರೀಯ ನಿರ್ದೇಶಕರು.

© ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಷಿಯೇಟಿವ್– 2020, ಈ ಮಾರ್ಗದರ್ಶಿಯಲ್ಲಿರುವ ಮಾಹಿತಿಯನ್ನು ಮೂಲ ಆಧಾರಕ್ಕೆ ಸೂಕ್ತ ಕೃತಜ್ಞತೆಗಳೊಂದಿಗೆ ಉಪಯೋಗಿಸಿಕೊಳ್ಳಬಹುದು.



**ಸಿ.ಹೆಚ್.ಆರ್.ಐ. ಯ ಪ್ರಧಾನ ಕಛೇರಿ, ನವದೆಹಲಿ:**
55ಎ, 3ನೇ ಮಹಡಿ, ಸಿದ್ಧಾರ್ಥ ಚೇಂಬರ್ಸ್,
ಕಾಲು ಸರಾಯ್, ನವದೆಹಲಿ 110 017, ಭಾರತ.
Tel: +91 11 4318 0200,
ಫ್ಯಾಕ್ಸ್: +91 11 2686 4688
ಇ–ಮೇಲ್: info@humanrightsinitiative.org

**ಸಿ.ಹೆಚ್.ಆರ್.ಐ. ಲಂಡನ್:**
ಕೊಠಡಿ ಸಂಖ್ಯೆ– 219, ಸ್ಕೂಲ್ ಆಫ್ ಅಡ್ವಾನ್ಸ್ಡ್ ಸ್ಟಡಿ,
ಸೌಥ್ ಬ್ಲಾಕ್, ಸೆನೇಟ್ ಹೌಸ್, ಮಾಲೆಟ್ ಸ್ಟ್ರೀಟ್,
ಲಂಡನ್ WCIE 7HU, ಯುನೈಟೆಡ್ ಕಿಂಗ್‌ಡಂ.
ಇ–ಮೇಲ್: london@humanrightsinitiative.org

**ಸಿ.ಹೆಚ್.ಆರ್.ಐ. ಆಫ್ರಿಕಾ, ಅಕ್ರಾ:**
ಮನೆ ಸಂಖ್ಯೆ– 9, ಸಮೋರಾ ಮಕೆಲ್ ಸ್ಟ್ರೀಟ್,
ಅಸ್ಯೆಲಂ ಡೌನ್,
ಬೆವರ್ಲಿ ಹಿಲ್ಸ್ ಹೋಟೆಲ್ ಎದುರು,
ಟ್ರಸ್ಟ್ ಟವರ್ಸ್, ಆಕ್ರಾ, ಘಾನಾ.
ದೂರವಾಣಿ/ಫ್ಯಾಕ್ಸ್: 233 302971170
ಇ–ಮೇಲ್: chriafrica@
humanrightsinitiative.org

www.humanrightsinitiative.org



ಈ ಮಾರ್ಗದರ್ಶಿಯನ್ನು ರಚಿಸಿದವರು ಮಿಸ್. ಅಂಜು ಅನ್ನಾ ಜಾನ್, ಯೋಜನಾ ಅಧಿಕಾರಿ, ಪರಿಷ್ಕರಿಸಿದವರು ಕುಮಾರಿ ಸುಗಂಧಾ ಶಂಕರ್, ಹಿರಿಯ ಕಾರ್ಯಕ್ರಮ ಅಧಿಕಾರಿ ಮತ್ತು ಕುಮಾರಿ ಮಧುರಿಮಾ ಧನುಕಾ, ಯೋಜನಾ ಮುಖ್ಯಸ್ಥರು, ಕಾರಾಗೃಹ ಸುಧಾರಣಾ ಕಾರ್ಯಕ್ರಮ ಮತ್ತು ವಿನ್ಯಾಸ ಶ್ರೀ. ಗುರನಮ್ ಸಿಂಗ್. ಈ ಮಾರ್ಗದರ್ಶಿ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ಅಂತಿಮಗೊಳಿಸಲು ನಮಗೆ ಸಹಾಯ ಮಾಡಿದ ಕಾರಾಗೃಹ ಸಿಬ್ಬಂದಿ ತರಬೇತಿ ಸಂಸ್ಥೆ, ಕಾರಾಗೃಹ ಮತ್ತು ಸುಧಾರಣಾ ಸೇವೆ, ಮೈಸೂರು ಇಲ್ಲಿನ ಪ್ರಾಂಶುಪಾಲರಾದ ಶ್ರೀ ಮಹೇಶ್ ಕುಮಾರ್ ಎಸ್. ಜಿಗಣಿ ಹಾಗೂ ಸಿಬ್ಬಂದಿವರ್ಗದವರಿಗೆ ಸಿಹೆಚ್‌ಆರ್‌ಐ ಪರವಾಗಿ ಧನ್ಯವಾದಗಳು.

# ಪರಿಚಯ

## ಈ ಕೈಪಿಡಿಯ ಉದ್ದೇಶ

ಕಾರಾಗೃಹಗಳು ಮುಚ್ಚಿದ ಸ್ಥಳಗಳಾಗಿದ್ದು ಅದರೊಳಗೇನು ನಡೆಯುತ್ತಿದೆ ಎಂಬುದು ಹೊರಗಿನ ಪ್ರಪಂಚಕ್ಕೆ ಗೋಚರಿಸುವುದಿಲ್ಲ. ಈ ಗೌಪ್ಯತೆಯ ಕಾರಣ ಕಾರಾಗೃಹ ವಾಸಿಗಳು ಹಿಂಸೆ ಮತ್ತಿತರ ಹಲ್ಲೆಗಳಿಗೆ ಗುರಿಯಾಗುತ್ತಿರುತ್ತಾರೆ. ಜೊತೆಗೆ ಬಂಧನದ ವ್ಯವಸ್ಥೆಯು ಮಹಿಳಾ ಬಂದಿಗಳ ಮೇಲಿನ ದೌರ್ಜನ್ಯವನ್ನು ಉಲ್ಬಣಗೊಳಿಸುತ್ತಿದೆ. ಕಾನೂನಿನಲ್ಲಾಗಲಿ ಅಥವಾ ಸಂಸ್ಕೃತಿಯಲ್ಲಾಗಲಿ ಸಮಾನತೆಯ ಕುರಿತು ನಿರಂತರ ಹೋರಾಟ ನಡೆಯುತ್ತಿದ್ದರೂ ಕೂಡ ಮಹಿಳೆಯರು ಎದುರಿಸುತ್ತಿರುವ ಸವಾಲುಗಳು ಇನ್ನೂ ಕೊನೆಗೊಂಡಿಲ್ಲದಿರುವುದನ್ನು ಕಾಣಬಹುದು. ಚಾರಿತ್ರಿಕವಾಗಿ ನಡೆದುಬಂದಿರುವ ಪುರುಷ ಪ್ರಧಾನ ಆಳ್ವಿಕೆಯು ಮಹಿಳೆಯರ ಮೇಲೆ ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಮನೋವೈಜ್ಞಾನಿಕವಾಗಿ ಪರಿಣಾಮ ಉಂಟುಮಾಡಿದೆ. ಈ ಸವಾಲುಗಳು ಈಗಲೂ ಬಂಧನದಲ್ಲಿರುವ ಮಹಿಳೆಯರ ಮೇಲೂ ಮುಂದುವರೆದಿರುವುದನ್ನು ಕಾಣಬಹುದು.

ಸಾಂಪ್ರದಾಯಿಕವಾಗಿ ಕಾರಾಗೃಹಗಳು ಪುರುಷರಿಗಾಗಿ ನಿರ್ಮಿಸಲ್ಪಟ್ಟ ಕಾರಣ ಅವರ ಅವಶ್ಯಕತೆಗಳಿಗೆ ತಕ್ಕಂತೆ ರೂಪುಗೊಂಡಿದೆ. ಇದರಿಂದ ಕಾರಾಗೃಹದ ಸುಧಾರಣೆ ಹಾಗೂ ಅದಕ್ಕೆ ಸಂಬಂಧಪಟ್ಟ ನಿಯಮಗಳ ರಚನೆಯ ವಿಷಯದಲ್ಲಿ ಮಹಿಳಾ ಬಂದಿಗಳ ಅಗತ್ಯತೆಗಳಿಗೆ ಮಾನ್ಯತೆ ದೊರೆಯುವುದಿಲ್ಲ. ಅಲ್ಲದೆ ಮಹಿಳಾ ಬಂದಿಗಳ ಸಂಖ್ಯೆ ಕಡಿಮೆ ಇರುವುದರಿಂದ ಅವರ ಅಗತ್ಯತೆಗಳಿಗೆ ಹೆಚ್ಚಿನ ಮಹತ್ವ ದೊರೆಯುವುದಿಲ್ಲ. ಭಾರತದಲ್ಲಿ ಮಹಿಳಾ ಬಂದಿಗಳ ಸಂಖ್ಯೆ ಕಡಿಮೆ ಇದ್ದರೂ ಇತ್ತೀಚಿನ ವರ್ಷಗಳಲ್ಲಿ ಅದರ ಸಂಖ್ಯೆ ಹೆಚ್ಚಾಗುತ್ತಿರುವುದು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಬಂದಿಗಳಿಗೆ ಸಂಬಂಧಿಸಿದ ಆಡಳಿತ ವ್ಯವಸ್ಥೆ ಮತ್ತು ಅವರನ್ನು ನೋಡಿಕೊಳ್ಳುವ ರೀತಿಯ ಕುರಿತು ಗಮನಹರಿಸುವ ಅನಿವಾರ್ಯತೆಯಿದೆ.

ಭಾರತದಲ್ಲಿ ಮಹಿಳಾ ಬಂದಿಗಳ ಸಂಖ್ಯೆ ಕಡಿಮೆ ಇರುವ ಕಾರಣ ಅವರನ್ನು ಸಾಮಾನ್ಯವಾಗಿ ಪುರುಷರಿಗೆ ಮೀಸಲಾದ ಕಾರಾಗೃಹದಲ್ಲಿನ ಪ್ರತ್ಯೇಕ ಆವರಣದಲ್ಲಿ ಇರಿಸಲಾಗುತ್ತಿದೆ. ಈ ಆವರಣವು  ಸಾಮಾನ್ಯವಾಗಿ ಚಿಕ್ಕದಾಗಿದ್ದು, ಪುರುಷ ಬಂದಿಗಳ ಅಗತ್ಯತೆಗಳಿಗೆ ಅನುಕೂಲವಾಗಿರುವಂತೆ ನಿರ್ಮಿಸಲಾಗಿರುತ್ತದೆ. ಆದರೆ ಮಹಿಳೆಯರ ಅಗತ್ಯತೆಗಳಿಗೆ ಪೂರಕವಾಗಿರುವಂತಹ ವಾತಾವರಣವನ್ನು ಸೃಷ್ಟಿಸಿರುವುದಿಲ್ಲ. ಆದುದ್ದರಿಂದ ಕಾರಾಗೃಹಗಳ ಅಧಿಕಾರಿಗಳು ಮಹಿಳಾ ಬಂದಿಗಳ ಅಗತ್ಯತೆ ಹಾಗೂ ಅವರ ಹಕ್ಕುಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಸುರಕ್ಷತೆ ಮತ್ತು ಸುಧಾರಣೆಯು ಕಾರಾಗೃಹ ಆಡಳಿತದ ಎರಡು ಮುಖ್ಯ ಮೂಲಾಂಶಗಳಾಗಿವೆ. ಮಹಿಳಾ ಬಂದಿಗಳ ವಿಷಯದಲ್ಲಿ ಹೇಳುವುದಾದರೆ, ಅವರು ಕಾರಾಗೃಹದಲ್ಲಿರುವಾಗ ಯಾವುದೇ ರೀತಿಯ ಶೋಷಣೆಗೆ ಗುರಿಯಾಗದಂತೆ ನಿಗಾವಹಿಸಬೇಕಾಗಿರುವುದು ಮಾತ್ರವಲ್ಲದೆ ಅವರ ಪುನರ್‌ವಸತಿಗೆ ಅಗತ್ಯವಾದ ಕ್ರಮಕೈಗೊಳ್ಳಬೇಕು. ಮಹಿಳಾ ಬಂದಿಗಳಿಗೆ ಜೀವನ ಕೌಶಲ್ಯವನ್ನು ಕಲಿಸುವುದು ಮಾತ್ರವಲ್ಲದೆ, ಕಾರಾಗೃಹದಿಂದ ಬಿಡುಗಡೆ ಹೊಂದಿದ ನಂತರ ಅವರು ತಮ್ಮ ಸ್ವಸಾಮರ್ಥ್ಯದಿಂದ ಶೀಘ್ರವಾಗಿ ಮತ್ತು ಸುಲಭವಾಗಿ ಸಮಾಜದ ಮುಖ್ಯವಾಹಿನಿಯಲ್ಲಿ ಸೇರುವಂತೆ ಅವರನ್ನು ಸಿದ್ದಪಡಿಸಬೇಕು. ಮಹಿಳಾ ಬಂದಿಗಳ ಆರೋಗ್ಯವನ್ನು ಸಹ ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಂದು ಮುಖ್ಯ ವಿಷಯವನ್ನಾಗಿ ಪರಿಗಣಿಸಲಾಗಿದೆ. ಕಾರಾಗೃಹದಲ್ಲಿರುವ ಮಹಿಳೆಯರು ಮತ್ತು ಅವರ ಮಕ್ಕಳ ವಿಷಯ ಹಾಗೂ ಮಹಿಳಾ ಅಪರಾಧಿಗಳಿಗೆ ಕಾರಾಗೃಹ ವ್ಯವಸ್ಥೆಯ ಬದಲಾಗಿ ಪರ್ಯಾಯ ಮಾರ್ಗವನ್ನು, ಸೂಕ್ತ ಕಾನೂನುಗಳನ್ನು, ಯೋಜಿತ ಕಾರ್ಯನೀತಿಗಳನ್ನು, ವಿನೂತನ ಪದ್ಧತಿ ಮತ್ತು ನಿಯಮಗಳನ್ನು ಜಾರಿಗೊಳಿಸಲು ಘನ ಸರ್ಕಾರ, ಅಂತಾರಾಷ್ಟ್ರೀಯ ಸಂಘಟನೆಗಳು, ಸ್ಥಳೀಯ ಸಂಸ್ಥೆಗಳು, ಮಾನವ ಹಕ್ಕು ಸಂಘಟನೆಗಳು ಮತ್ತು ಸರ್ಕಾರೇತರ ಸಂಸ್ಥೆಗಳು ಗಮನ ಹರಿಸಬೇಕಾದ ಅನಿವಾರ್ಯತೆಯಿದೆ.

## ಈ ಮಾರ್ಗದರ್ಶಿಯ (ಕೈಪಿಡಿ) ಕುರಿತು

ಈ ಮಾರ್ಗದರ್ಶಿಯು ಕಾರಾಗೃಹದಲ್ಲಿರುವ ಮಹಿಳೆಯರ ಹಕ್ಕುಗಳ ಬಗ್ಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ನಿಯಮಗಳಲ್ಲಿ ಉಲ್ಲೇಖಿಸಿರುವಂತಹ ಗುಣಮಟ್ಟವನ್ನು ದಾಖಲಿಸುತ್ತದೆ. ಈ ನಿಯಮಗಳು ಸಿವಿಲ್, ಕ್ರಿಮಿನಲ್, ವಿಚಾರಣಾಧೀನ ಮತ್ತು ಅಪರಾಧಿ ಎಂಬುದಾಗಿ ದೃಢಪಟ್ಟಿರುವ, ಸ್ವಾತಂತ್ರ್ಯವನ್ನು ಕಳೆದುಕೊಂಡಿರುವ ಎಲ್ಲಾ ವರ್ಗದ ಮಹಿಳೆಯರಿಗೆ ಅನ್ವಯವಾಗುತ್ತದೆ. ಅವುಗಳೆಂದರೆ:–

- ಮಾದರಿ ಕಾರಾಗೃಹ ಕೈಪಿಡಿ– 2016, ಗೃಹ ಸಚಿವಾಲಯ, ಭಾರತ ಸರ್ಕಾರ.
- ಬಂದಿಗಳನ್ನು ನಿರ್ವಹಿಸಲು ವಿಶ್ವಸಂಸ್ಥೆ ಸೂಚಿಸಿರುವ ಕನಿಷ್ಠ ಗುಣಮಟ್ಟದ ನಿಯಮ [ನೆಲ್ಸನ್ ಮಂಡೇಲಾ ನಿಯಮ]– 2015
- ವಿಶ್ವಸಂಸ್ಥೆಯು ಸೂಚಿಸಿರುವ ಮಹಿಳಾ ಬಂದಿಗಳ ನಿರ್ವಹಣಾ ನಿಯಮ ಮತ್ತು ಮಹಿಳಾ ಅಪರಾಧಿಗಳ ನಿರ್ವಹಣೆಗೆ ಕೈಗೊಳ್ಳಬೇಕಾದ ಅಭಿರಕ್ಷೆರಹಿತ [Non-Custodial] ನಿಯಮಗಳು [ಬ್ಯಾಂಕಾಕ್ ರೂಲ್ಸ್]– 2010

ಕಾರಾಗೃಹದ ಅಧಿಕಾರಿಗಳು ತಮ್ಮ ಅಧಿಕಾರದ ಅವಧಿಯಲ್ಲಿ ಮಹಿಳಾ ಬಂದಿಗಳ ಅಗತ್ಯತೆಗಳನ್ನು ಅರಿತುಕೊಂಡು ಅದಕ್ಕೆ ತಕ್ಕಂತೆ ಕ್ರಮಕೈಗೊಳ್ಳಲು ಪ್ರೇರಣೆ ಮತ್ತು ಮಾಹಿತಿಗಳನ್ನು ನೀಡುವುದು ಈ ಮಾರ್ಗದರ್ಶಿಯ ಮೂಲ ಉದ್ದೇಶವಾಗಿದೆ. ಮಾತ್ರವಲ್ಲದೆ ಕಾರ್ಯನೀತಿ ರಚಿಸುವವರ, ಪ್ರಜಾಪ್ರತಿನಿಧಿಗಳ, ನ್ಯಾಯಾಂಗ ಅಧಿಕಾರಿಗಳ, ಕಾನೂನು ಸೇವೆ ನೀಡುವವರ ಮತ್ತು ಕಾನೂನು ಪಾಲನಾ ಸಿಬ್ಬಂದಿಯವರ ಅನುಕೂಲಕ್ಕೆಂದೇ ರಚಿಸಲಾಗಿದೆ.

ಮಹಿಳಾ ಬಂದಿಗಳಿಗೆ ಸಂಬಂಧಪಟ್ಟಂತೆ ಕನಿಷ್ಠ ಗುಣಮಟ್ಟವನ್ನು ಕಾಯ್ದುಕೊಂಡು ಅದನ್ನು ಆಚರಣೆಗೆ ತರುವುದನ್ನು ಈ ಮಾರ್ಗದರ್ಶಿಯು ಒತ್ತಿಹೇಳುತ್ತದೆ. ಈ ನಿಟ್ಟಿನಲ್ಲಿ ಮಹಿಳಾ ಬಂದಿಗಳ ಅಗತ್ಯತೆಗಳನ್ನು ಅರಿತುಕೊಳ್ಳುವುದು ಪ್ರಾಥಮಿಕ ಹಂತವಾಗಿದೆ. ನಂತರ ಅದಕ್ಕೆ ತಕ್ಕಂತೆ ಸಂಸ್ಥೆಯನ್ನು ರೂಪಿಸುವುದು ಎರಡನೇ ಹಂತವಾಗಿದೆ. ಮಹಿಳೆಯರ ಸುರಕ್ಷತೆ ಮತ್ತು ಸಂರಕ್ಷಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾರ್ಯನಿರ್ವಹಿಸುವಂತೆ ಕಾರಾಗೃಹದ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರನ್ನು ಪ್ರೇರೇಪಿಸುವುದು ಮತ್ತೊಂದು ಹಂತವಾಗಿದೆ.

# I. ಕಾರಾಗೃಹದಲ್ಲಿನ ಮೂಲಭೂತ ಸೌಕರ್ಯಗಳು:



ಸಾಧ್ಯವಾದಷ್ಟು ಮಟ್ಟಿಗೆ ಕಾರಾಗೃಹದಲ್ಲಿ ಪುರುಷರು ಮತ್ತು ಮಹಿಳೆಯರನ್ನು ಪ್ರತ್ಯೇಕವಾಗಿರಿಸಬೇಕು. ಪುರುಷರಿಗೆ ಮತ್ತು ಮಹಿಳೆಯರಿಗಾಗಿ ಇರುವ ಆವರಣದಲ್ಲಿ ಮಹಿಳೆಯರಿಗೆ ಮೀಸಲಾದ ಸ್ಥಳವು ಸಂಪೂರ್ಣವಾಗಿ ಪ್ರತ್ಯೇಕವಾಗಿರಬೇಕು.[1] ಹೊಸ ಕಾರಾಗೃಹಗಳನ್ನು ನಿರ್ಮಿಸುವಾಗ ಮಹಿಳೆಯರ ಅಗತ್ಯತೆಗಳಿಗೆ ವಿಶೇಷ ಗಮನವನ್ನು ನೀಡಬೇಕು. ಮಹಿಳೆಯರ ಪಾಲನೆ, ಪೋಷಣೆ ಮತ್ತಿತರ ಜವಾಬ್ದಾರಿಗಳು, ಮಹಿಳೆಯರ ವೈಯಕ್ತಿಕ ಅಗತ್ಯತೆಗಳು, ಯೋಜನೆಗಳು ಮತ್ತು ಸೇವೆಗಳನ್ನು ಗಣನೆಗೆ ತೆಗೆದುಕೊಂಡು ಅವರನ್ನು ಸಾಧ್ಯವಾದಷ್ಟು ಮಟ್ಟಿಗೆ ಅವರವರ ಮನೆಯ ಹತ್ತಿರದ ಕಾರಾಗೃಹದಲ್ಲಿ ಬಂದಿ ಮಾಡಬೇಕು.[2]

ಮಹಿಳೆಯರನ್ನು ಪ್ರತ್ಯೇಕಿಸಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ ಮತ್ತು ಮಹಿಳೆಯರು ತಮಗೆ ನಿಗಧಿಪಡಿಸಿದ ಕೊಠಡಿ/ಸ್ಥಳಕ್ಕೆ ತೆರಳುವಾಗ ಪುರುಷರಿಗಾಗಿ ಇರುವ ಆವರಣದ ಮೂಲಕ ಹಾದು ಹೋಗಬೇಕಾಗಿದ್ದಲ್ಲಿ, ಅದನ್ನು ತಪ್ಪಿಸಲು ಸೂಕ್ತ ಮಾರ್ಪಾಟುಗಳನ್ನು ಮಾಡಬೇಕಾಗಿದೆ. ಪುರುಷರಿಗೆ ಮತ್ತು ಮಹಿಳೆಯರಿಗೆ ಇರುವ ಸಾಮಾನ್ಯ ಮಾರ್ಗವನ್ನು ಸರಿಪಡಿಸಿ, ಮಹಿಳೆಯರು ಆ ಮಾರ್ಗದಲ್ಲಿ ಹಾದು ಹೋಗದ ರೀತಿಯಲ್ಲಿ ಬದಲಾವಣೆ ಮಾಡಬೇಕಿದೆ.[3]

ಒಬ್ಬ ಮಹಿಳಾ ಬಂದಿಯನ್ನು ಉಪಕಾರಾಗೃಹ ಅಥವಾ ಇನ್ಯಾವುದೇ ಕಾರಾಗೃಹದಲ್ಲಿ ಇರಿಸಬೇಕಾದ ಸಂದರ್ಭ ಒದಗಿಬಂದಲ್ಲಿ ಮತ್ತು ಆ ಕಾರಾಗೃಹದಲ್ಲಿ ಇನ್ಯಾವುದೇ ಮಹಿಳಾ ಬಂದಿ ಅಥವಾ ಮಹಿಳಾ ರಕ್ಷಣಾ ಸಿಬ್ಬಂದಿಗಳು ಇಲ್ಲದಿದ್ದಲ್ಲಿ ಮಹಿಳಾ ಹೋಮ್‌ಗಾರ್ಡ್‌ಗಳನ್ನು ಇದಕ್ಕಾಗಿ ಮೀಸಲು ಇಟ್ಟಿರಬೇಕು. ಅಗತ್ಯವಿದ್ದಲ್ಲಿ ಕಾರಾಗೃಹದ ಅಧಿಕಾರಿಗಳು ಅವರ ಸೇವೆಯನ್ನು ಬಳಸಿಕೊಳ್ಳಬಹುದು.

## ಎ. ಸ್ಥಳಾವಕಾಶ

ಮಹಿಳಾ ಬಂದಿಗಳಿಗಾಗಿ ಇರುವ ಎಲ್ಲಾ ಸ್ಥಳಗಳು ಆರೋಗ್ಯದ ದೃಷ್ಟಿಯಿಂದ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕು. ಸಾಕಷ್ಟು ಗಾಳಿ ಮತ್ತು ಬೆಳಕಿಗೆ ಅವಕಾಶ ಇರಬೇಕು.[4] ಅಲ್ಲದೆ ಬಂದಿಗಳು ಓದುವುದಕ್ಕೆ ಅಥವಾ ಇತರೆ ಕೆಲಸಗಳನ್ನು ಮಾಡಲು ಅನುಕೂಲವಾಗುವ ರೀತಿಯಲ್ಲಿ ಈ ಸ್ಥಳಗಳಲ್ಲಿ ಸಾಕಷ್ಟು ಕೃತಕ ಬೆಳಕಿನ ವ್ಯವಸ್ಥೆಯನ್ನು ಮಾಡಬೇಕು.[5]

ಮಹಿಳಾ ಬಂದಿಗಳಿಗೆ ಮೀಸಲು ಇರುವ ಸ್ಥಳಗಳು ಅವರ ಎಲ್ಲಾ ಅಗತ್ಯತೆಗಳಿಗೆ ತಕ್ಕಂತೆ ವ್ಯವಸ್ಥಿತವಾಗಿ ಇರತಕ್ಕದ್ದು. ಪ್ರತ್ಯೇಕತೆ, ಸುರಕ್ಷತೆ, ಗರ್ಭಿಣಿಯರ ಅಗತ್ಯತೆಗಳು, ಶಿಶು ಜನನ, ಕೌಟುಂಬಿಕ ಆರೈಕೆ, ಆರೋಗ್ಯ ಮತ್ತು ಪುನರ್‌ವಸತಿ,[6] ಪ್ರಸವಪೂರ್ವ ಮತ್ತು ಪ್ರಸವ ನಂತರದ ಅಗತ್ಯತೆಗಳಿಗೆ ತಕ್ಕಂತೆ ಇರಬೇಕು.[7] ಈ ಸೌಕರ್ಯಗಳು ಸಾಧ್ಯವಾದಷ್ಟು ಮಟ್ಟಿಗೆ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಅಡ್ಡಿ ಪಡಿಸದಂತೆ ಇರತಕ್ಕದ್ದು.[8] ಉದಾಹರಣೆಗೆ ಪ್ರತಿಯೊಂದು ಕಾರಾಗೃಹದಲ್ಲಿ ಮಹಿಳೆಯರಿಗೆ ಪ್ರತ್ಯೇಕ ಗ್ರಂಥಾಲಯ ಹಾಗೂ ಓದುವ ಕೊಠಡಿಯನ್ನು (ವಾಚನಾಲಯ) ಹೊಂದಿರಬೇಕು. ಈ ಗ್ರಂಥಾಲಯಗಳು ಮನರಂಜನೆ ಮತ್ತು ಕೌಶಲ್ಯಕ್ಕೆ ಸಂಬಂಧಿಸಿದಂತಹ ಮಾಹಿತಿಯನ್ನು ನೀಡುವ ಪುಸ್ತಕಗಳನ್ನು ಹೊಂದಿರಬೇಕು.[9] ಈ ಸೌಕರ್ಯಗಳನ್ನು ಒದಗಿಸಲು ಆಗದಿದ್ದಲ್ಲಿ, ಸಾಕಷ್ಟು ಸ್ಥಳಾವಕಾಶದ ಅಭಾವವಿದ್ದಲ್ಲಿ ಅಥವಾ ಕಾರಾಗೃಹಗಳು ಪುರಾತನ ಶೈಲಿಯಲ್ಲಿದ್ದರೆ, ಮಹಿಳಾ ಬಂದಿಗಳು ಗ್ರಂಥಾಲಯ, ಆಟದ ಮೈದಾನ, ಪೂಜಾ ಸ್ಥಳ, ದೂರವಾಣಿ ಭೂತ್, ವೀಡಿಯೊ ಸಭಾಂಗಣ, ತೋಟ ಇತ್ಯಾದಿಯನ್ನು ಉಪಯೋಗಿಸಲು ಸೂಕ್ತ ಅವಕಾಶವನ್ನು ಮಾಡಿಕೊಡಬೇಕು.

ನಾಲ್ಕು ರೀತಿಯ ಸ್ಥಳಾವಕಾಶ ಇರಬೇಕು: (ಎ) 20 ಮಹಿಳಾ ಬಂದಿಗಳಿಗೆ ಸ್ಥಳಾವಕಾಶವಿರುವ ಕೊಠಡಿಗಳು (©) ನಾಲ್ಕರಿಂದ ಐದು ಮಹಿಳಾ ಬಂದಿಗಳಿಗೆ ಸಾಕಾಗುವಷ್ಟು [ವಸತಿ ನಿಲಯ] ಸ್ಥಳಾವಕಾಶವಿರುವ ಕೊಠಡಿಗಳು (ಸಿ) ಓದುವ (ವ್ಯಾಸಂಗ) ಮತ್ತು ಅಧ್ಯಯನ ಮಾಡಲಿಚ್ಛಿಸುವ ಮಹಿಳಾ ಬಂದಿಗಳಿಗೆ ಪ್ರತ್ಯೇಕ ಕೊಠಡಿಯ ವ್ಯವಸ್ಥೆ [ಡಿ] ಸುರಕ್ಷತೆ ಮತ್ತು ಶಿಕ್ಷೆಯ ದೃಷ್ಟಿಯಿಂದ ಮಹಿಳಾ ಬಂದಿಗಳನ್ನು ಪ್ರತ್ಯೇಕಿಸುವ ವ್ಯವಸ್ಥೆ.[10] ಓದು (ವ್ಯಾಸಂಗ), ಅಧ್ಯಯನ ಮತ್ತು ಸುರಕ್ಷತೆಗಳಲ್ಲದೆ ಆರೋಗ್ಯದ ಕಾರಣಕ್ಕೆ, ಮಹಿಳಾ ಬಂದಿಯ ಆರೋಗ್ಯ ಅಥವಾ ಹೊಸದಾಗಿ ಕಾರಾಗೃಹಕ್ಕೆ ದಾಖಲಾಗುವ ಬಂದಿಗಳು ಬದಲಾದ ವಾತಾವರಣಕ್ಕೆ ಹೊಂದಿಕೊಳ್ಳುವವರೆಗೂ ಅಥವಾ ಬಂದಿಯೂ ಮಗುವಿಗೆ ಜನ್ಮ ನೀಡಿದ್ದು, ಬಾಣಂತಿ ಮತ್ತು ಶಿಶುವಿನ ಆರೋಗ್ಯ, ಸ್ವಚ್ಛತೆಯ ದೃಷ್ಟಿಯಿಂದ ಪ್ರತ್ಯೇಕ ಕೊಠಡಿಯ ವ್ಯವಸ್ಥೆಯನ್ನು ನೀಡಬಹುದು.[11]

ಮಹಿಳಾ ಬಂದಿಗಳಲ್ಲಿ ಕೆಲವರನ್ನು ಪ್ರತ್ಯೇಕಿಸಬೇಕು– ಕಾರಾಗೃಹಗಳಲ್ಲಿ ಮಹಿಳಾ ಬಂದಿಗಳು ಕಡಿಮೆ ಸಂಖ್ಯೆಯಲ್ಲಿದ್ದರೂ ವಿಚಾರಣಾಧೀನ ಬಂದಿಗಳನ್ನು, ಇತರೆ ಬಂದಿಗಳು, ರೂಢಿಗತ ಅಪರಾಧಿಗಳು, ವೇಶ್ಯೆಯರು ಮತ್ತು ವೇಶ್ಯಾವಟಿಕೆ ನಡೆಸುವವರನ್ನು ಸಾಮಾನ್ಯ ಬಂದಿಗಳಿಂದ ಪ್ರತ್ಯೇಕಿಸಬೇಕು. ಸಿವಿಲ್ ಬಂದಿಗಳು, ಪ್ರತಿಬಂಧಕ ಕಾರಣಕ್ಕೆ ಬಂಧಿಸಲ್ಪಟ್ಟವರನ್ನು ಸಾಧ್ಯವಾದಷ್ಟು ಮಟ್ಟಿಗೆ ಇತರೆ ಬಂದಿಗಳಿಂದ ಮತ್ತು ವಿಚಾರಣಾಧೀನ ಬಂದಿಗಳಿಂದ ಪ್ರತ್ಯೇಕಿಸಬೇಕು.[12]

# II. ಕಾರಾಗೃಹಕ್ಕೆ ಪ್ರವೇಶ ಬರುವಾಗ

ಮಹಿಳಾ ಬಂದಿಗಳು ಮತ್ತು ಅವರ ಮಕ್ಕಳು ಕಾರಾಗೃಹ ಪ್ರವೇಶಿಸುವ ಸಂದರ್ಭದಲ್ಲಿ ಕಾರಾಗೃಹ ಸಿಬ್ಬಂದಿವರ್ಗದವರು ಹೆಚ್ಚಿನ ನಿಗಾವಹಿಸಬೇಕು. ಕಾರಣ ಮಹಿಳೆಯರು ಮತ್ತು ಮಕ್ಕಳು ಈ ಹಂತದಲ್ಲಿ ಹೆಚ್ಚು ಶೋಷಣೆಗೆ ಒಳಗಾಗುವ ಸಾಧ್ಯತೆ ಇರುತ್ತದೆ. ಮಹಿಳಾ ಬಂದಿಗಳು ಕಾರಾಗೃಹವನ್ನು ಪ್ರವೇಶಿಸಿದ ನಂತರ ಅವರು ತಮ್ಮ ಸಂಬಂಧಿಕರು, ಕಾನೂನು ಸಲಹೆಗಾರರು ಮತ್ತಿತರನ್ನು ಸಂಪರ್ಕಿಸುವ ಅವಕಾಶವನ್ನು ಕಲ್ಪಿಸಬೇಕು. ಮಹಿಳಾ ಬಂದಿಗಳಿಗೆ ಕಾರಾಗೃಹದ ಕಾನೂನು, ನಿಯಮ ಮತ್ತು ಕುಂದುಕೊರತೆಗಳ ನಿವಾರಣಾ ವ್ಯವಸ್ಥೆಯ ಬಗ್ಗೆ ಬಂದಿಯು ಅರ್ಥಮಾಡಿಕೊಳ್ಳುವ ಭಾಷೆಯಲ್ಲಿ ಮಾಹಿತಿಯನ್ನು ನೀಡಬೇಕು. ಬಂದಿಯು ವಿದೇಶಿ ವ್ಯಕ್ತಿಯಾಗಿದ್ದಲ್ಲಿ ಅವರ ದೇಶದ ರಾಯಭಾರಿ ಪ್ರತಿನಿಧಿಗಳನ್ನು ಸಂಪರ್ಕಿಸಲು ಅವಕಾಶವನ್ನು ಮಾಡಿಕೊಡಬೇಕು.[13] ಅಲ್ಲದೆ ಮಹಿಳಾ ಬಂದಿಯು ಮಗುವಿನ ಆರೈಕೆಯ ಜವಾಬ್ದಾರಿಯನ್ನು ಹೊತ್ತಿದ್ದರೆ, ಮಗುವಿನ ಅಗತ್ಯಕ್ಕೆ ತಕ್ಕಂತೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕು.[14]

## ಎ. ಮಾಹಿತಿಗಳ ದಾಖಲೆ

ಮಹಿಳಾ ಕಾರಾಗೃಹಗಳು ಮತ್ತು ಅದಕ್ಕೆ ಹೊಂದಿಕೊಂಡಿರುವ ಸ್ಥಳಗಳು, ಮಹಿಳಾ ಬಂದಿಗಳಿಗೆ ಸಂಬಂಧಿಸಿದಂತಹ ಕೆಳಕಂಡ ಅಂಶಗಳನ್ನು ಒಳಗೊಂಡ ಸಂಪೂರ್ಣ ಮಾಹಿತಿಯನ್ನು ಹೊಂದಿರಬೇಕು.

i ಮಹಿಳಾ ಬಂದಿಯ ಗುರುತಿನ ವಿವರ.

ii ಕಾರಾಗೃಹ ವಾಸಕ್ಕೆ ಕಾರಣ ಮತ್ತು ಅದನ್ನು ವಿಧಿಸಿದ ಪ್ರಾಧಿಕಾರದ ಮತ್ತು ಅವರ ಆದೇಶದ ಸಂಪೂರ್ಣ ವಿವರ.

iii ಕಾರಾಗೃಹ ಪ್ರವೇಶಿಸಿದ ದಿನ, ಸಮಯ ಮತ್ತು ಸಂಭವನೀಯ ಬಿಡುಗಡೆಯ ದಿನಾಂಕ.

iv ಬಂದಿಯ ಮಕ್ಕಳ [ಇದ್ದಲ್ಲಿ] ಹೆಸರು, ವಯಸ್ಸು, ಅವರು ಇರುವ ಸ್ಥಳ ಮತ್ತು ಅವರು ಯಾರ ಆರೈಕೆಯಲ್ಲಿದ್ದಾರೆ ಇತ್ಯಾದಿಗಳ ವಿವರ.

v ಈ ಕಾರಾಗೃಹ ಅಥವಾ ಇನ್ನಾವುದೇ ಕಾರಾಗೃಹದಲ್ಲಿರುವ ಪುರುಷ ಸಂಬಂಧಿ ಬಂದಿಯ ವಿವರ.

vi ಬಂದಿಯು ಹೊಂದಿರುವ ವೈಯಕ್ತಿಕ ವಸ್ತುಗಳು.

ಮಹಿಳಾ ಬಂದಿಗಳ ಮಕ್ಕಳಿಗೆ ಸಂಬಂಧಿಸಿದ ಮಾಹಿತಿಯನ್ನು ಒಂದು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ದಾಖಲಿಸಬೇಕು. ಮಕ್ಕಳ ವೈಯಕ್ತಿಕ ವಿಷಯಗಳನ್ನು ಗೌಪ್ಯತೆ ಮತ್ತು ಅವರ ಹಿತದೃಷ್ಟಿಯಿಂದ ಇದು ಅವಶ್ಯಕ.[16] ಸಮುದಾಯದಲ್ಲಿ ವಾಸಿಸುವ ಮಹಿಳಾ ಬಂದಿಗಳ ಮಕ್ಕಳಿಗೆ ಆರೈಕೆ ಮತ್ತು ಸುರಕ್ಷತೆಯ ಅಗತ್ಯವಿರುವ ಕಾರಣ ಕಾರಾಗೃಹದ ಅಧಿಕಾರಿಗಳು ತಕ್ಷಣ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ [CWC] ಯನ್ನು ಸಂಪರ್ಕಿಸಿ ಮಕ್ಕಳ ಪೋಷಕತ್ವವನ್ನು ಖಾತರಿ ಪಡಿಸಿಕೊಳ್ಳಬೇಕು. ಮಕ್ಕಳ ಪಾಲನೆ ಮತ್ತು ಪೋಷಣೆಗೆ ಮಹಿಳಾ ಬಂದಿಯ ಕುಟುಂಬದವರು ಅಥವಾ ಸ್ನೇಹಿತರನ್ನು ಪತ್ತೆಹಚ್ಚಲು ಆಗದಿದ್ದ ಸಂದರ್ಭದಲ್ಲಿ ಹಾಗೂ ಮಕ್ಕಳು ತಾಯಿಯ ಜೊತೆ ಕಾರಾಗೃಹದೊಳಗೆ ಬರಲು ಅವಕಾಶವಿಲ್ಲದಿದ್ದಾಗ ಅಂತಹ ಮಕ್ಕಳನ್ನು ಸೂಕ್ತ ಮಕ್ಕಳ ಪಾಲನಾ ಸಂಸ್ಥೆಗೆ ಸೇರಿಸತಕ್ಕದ್ದು. ಒಬ್ಬ ಮಹಿಳಾ ಬಂದಿಯ ಮಕ್ಕಳು ಒಟ್ಟಿಗೆ ಇರುವಂತೆ ನಿಗಾವಹಿಸಬೇಕು. ಮಕ್ಕಳು ತಮ್ಮ ತಾಯಿಯ ಜೊತೆ ನಿಯಮಿತವಾಗಿ ಕನಿಷ್ಠ ವಾರಕ್ಕೊಮ್ಮೆಯಾದರೂ ಪರಸ್ಪರ ಮಾತನಾಡಿಕೊಳ್ಳುವಂತೆ ಕಾರಾಗೃಹ ಸಿಬ್ಬಂದಿವರ್ಗದವರು ನೋಡಿಕೊಳ್ಳಬೇಕು.[17] ಮಹಿಳಾ ಬಂದಿಯ ಮಗುವು ಕುಟುಂಬ ಅಥವಾ ಸ್ನೇಹಿತರ ರಕ್ಷಣೆಯಲ್ಲಿದ್ದರೆ ಮಹಿಳಾ ಬಂದಿಯು ಒಂದು ವಾರದವರೆಗೆ ಪ್ರತಿ ದಿನ ಕರೆ ಮಾಡುವುದು ತದನಂತರ ಕನಿಷ್ಠ ವಾರಕ್ಕೆರಡು ಬಾರಿ ಕರೆ ಮಾಡುವಂತಹ ವ್ಯವಸ್ಥೆಯು ಇರಬೇಕು. ಮಹಿಳಾ ಬಂದಿಯನ್ನು ಮತ್ತು ಮಗುವನ್ನು ನೋಡಿಕೊಳ್ಳುತ್ತಿರುವವರ ನಡುವಿನ ಈ ಕರೆಯ ಅವಧಿಯು ಸಮಂಜಸವಾಗಿರಬೇಕು. ಅನೇಕ ಕಾರಾಗೃಹಗಳಲ್ಲಿ ಬಂದಿಗಳಿಗೆ ದೂರವಾಣಿ ಸೌಲಭ್ಯ ನೀಡಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಕಾರಾಗೃಹ ಅಧಿಕಾರಿಗಳು ಅವರ ಕಛೇರಿಯ ದೂರವಾಣಿಯನ್ನು ಉಪಯೋಗಿಸಲು ಅನುಮತಿಯನ್ನು ನೀಡಬೇಕು.[18]

ಮಹಿಳಾ ಬಂದಿಯು ಕಾರಾಗೃಹದೊಳಕ್ಕೆ ಪ್ರವೇಶ ಬರುವ ಸಂದರ್ಭದಲ್ಲಿ ಆಕೆಯಿಂದ ಪಡೆದುಕೊಂಡಿರುವ ಅಥವಾ ತದನಂತರ ಪೊಲೀಸರು ಕಳುಹಿಸಿದ ಅಥವಾ ಆಕೆಯ ಸಂಬಂಧಿಕರು/ಸ್ನೇಹಿತರು ನೀಡಿದ ಬಂದಿಯ ಹತ್ತಿರವಿದ್ದಂತಹ ಹಣ, ಒಡವೆ ಮತ್ತು ಬಟ್ಟೆ/ವಸ್ತ್ರಗಳನ್ನು ಕಾರಾಗೃಹದ ಸಹಾಯಕ ಅಧೀಕ್ಷಕರು ಅಥವಾ ಕರ್ತವ್ಯನಿರತ ಅಧಿಕಾರಿಯು ಅದನ್ನು ಪಡೆದುಕೊಳ್ಳಬೇಕು. ಆ ರೀತಿ ಪಡೆದುಕೊಂಡ ವಸ್ತುಗಳ ವಿವರವನ್ನು ಪ್ರವೇಶ ದಸ್ತಾವೇಜು [ಅಡ್ಮಿಷನ್ ರಿಜಿಸ್ಟರ್] ಮತ್ತು ಬಂದಿಯ ವಾರೆಂಟ್‌ನಲ್ಲಿ ಬರೆಯಬೇಕು ಮಾತ್ರವಲ್ಲದೆ ಅದನ್ನು ಅಧೀಕ್ಷಕರ ಸಮ್ಮುಖದಲ್ಲಿ ಬಂದಿಗೆ ಓದಿ ಹೇಳಬೇಕು. ಅಧೀಕ್ಷಕರು ರಿಜಿಸ್ಟರ್ ಮತ್ತು ವಾರೆಂಟ್‌ನಲ್ಲಿ ತಮ್ಮ ಸಹಿ ಹಾಕಬೇಕು. ಬಂದಿಯಿಂದ ಪಡೆದುಕೊಂಡ ವಸ್ತುಗಳನ್ನು ಆಯಾ ರಾಜ್ಯದ ಕಾರಾಗೃಹ ಮ್ಯಾನ್ಯುಯಲ್ ಅಥವಾ ಕೈಪಿಡಿಯಲ್ಲಿ ನಮೂದಿಸಿರುವ ರೀತಿಯಲ್ಲಿ ಸಂರಕ್ಷಿಸಬೇಕು.[19] ಮಹಿಳಾ

ಬಂದಿಯು ಹೆಚ್ಚು ಬೆಲೆ ಬಾಳದ ತಾಳಿ/ಮಂಗಳಸೂತ್ರ, ಬಳೆ ಮತ್ತು ಕಾಲುಂಗುರ ಇತ್ಯಾದಿಯನ್ನು ಉಪಯೋಗಿಸಲು ಅನುಮತಿ ನೀಡಬಹುದು. ಆದರೆ ಈ ಒಡವೆಗಳನ್ನು ಧರಿಸಲು, ಶಿಸ್ತು ಮತ್ತು ಸುರಕ್ಷತೆಯ ದೃಷ್ಟಿಯಿಂದ ಅಧೀಕ್ಷಕರು ಒಪ್ಪಿಗೆ ನೀಡದಿರಬಹುದು.[20]

### ಬಿ. ತಪಾಸಣೆ



ಮಹಿಳಾ ಬಂದಿಗಳನ್ನು ತಪಾಸಣೆಗೆ ಒಳಪಡಿಸುವ ಸಂದರ್ಭದಲ್ಲಿ ಆಕೆಯ ಸುರಕ್ಷತೆ ಮತ್ತು ಗೌರವಕ್ಕೆ ಯಾವುದೇ ರೀತಿಯಲ್ಲಿ ಧಕ್ಕೆ ಉಂಟಾಗಬಾರದು.[21] ಮಹಿಳಾ ವೀಕ್ಷಕರು, ಹಿರಿಯ ಮಹಿಳಾ ಅಧಿಕಾರಿಗಳು/ಸಿಬ್ಬಂದಿಯ ಸಮ್ಮುಖದಲ್ಲಿ ಗೌಪ್ಯತೆ ಮತ್ತು ಗೌರವಕ್ಕೆ ಚ್ಯುತಿ ಬಾರದಂತೆ ತಪಾಸಣೆಯನ್ನು ಒಂದು ಪ್ರತ್ಯೇಕ ಕೊಠಡಿಯಲ್ಲಿ ನಡೆಸಬೇಕು. ತಪಾಸಣೆಯ ಸ್ಥಳದಲ್ಲಿ ಪುರುಷರಿಗೆ ಅವಕಾಶ ಇರಬಾರದು.[22] ತಪಾಸಣಾ ಕಾರ್ಯವನ್ನು ಮಹಿಳಾ ಸಿಬ್ಬಂದಿಯೇ ಮಾಡಬೇಕೇ ಹೊರತು ಯಾವುದೇ ಕಾರಣಕ್ಕೂ ಅದನ್ನು ಮತ್ತೊಬ್ಬ ಮಹಿಳಾ ಬಂದಿಯಿಂದ ಮಾಡಿಸಬಾರದು. ಮಹಿಳಾ ಬಂದಿಯ ಭಾವಚಿತ್ರ, ಪಾದದ ಅಚ್ಚು, ಬೆರಳಚ್ಚು ಮತ್ತು ಅಳತೆಯನ್ನು ಕಾರಾಗೃಹದ ಮಹಿಳಾ ಸಿಬ್ಬಂದಿ ಅಥವಾ ಮಹಿಳಾ ವೀಕ್ಷಕರ ಸಮ್ಮುಖದಲ್ಲೇ ಮಾಡತಕ್ಕದ್ದು.[23]

ತಪಾಸಣೆಗೆ ವಸ್ತ್ರ ಕಳಚುವಿಕೆ, ದೇಹಾಕ್ರಮಣ [ಇನ್ವೇಸಿವ್] ಮಾದರಿಯನ್ನು ಅಳವಡಿಸುವ ಬದಲು ಸ್ಕ್ಯಾನಿಂಗ್ ಅನುಸರಿಸಬಹುದು.[24] ಮಹಿಳಾ ಬಂದಿಯೊಂದಿಗೆ ಇರುವ ಅಥವಾ ಅವರನ್ನು ಕಾಣಲು ಬಂದಿರುವ ಮಕ್ಕಳನ್ನು ತಪಾಸಣೆಗೆ ಒಳಪಡಿಸುವಾಗ ಕಾರಾಗೃಹದ ಸಿಬ್ಬಂದಿವರ್ಗದವರು ವೃತ್ತಿಪರತೆ ಮತ್ತು ಸೂಕ್ಷ್ಮತೆಯನ್ನು ತೋರತಕ್ಕದ್ದು.[25]

ದೇಹ ತಪಾಸಣೆ ನಡೆಸುವ ಮಾದರಿ, ಷರತ್ತುಗಳು ಮತ್ತು ಅದಕ್ಕೆ ಸಂಬಂಧಿಸಿದ ಇತರೆ ವಿಷಯಗಳಿಗೆ ಸೂಕ್ತ ಕಾನೂನು, ನಿಯಮ ಮತ್ತು ಮಾರ್ಗಸೂಚಿಯನ್ನು ರಚಿಸತಕ್ಕದ್ದು.26 ಯಾವ ರೀತಿಯ ತಪಾಸಣೆಗೆ ಅವಕಾಶ ಇದೆ, ತಪಾಸಣೆಯ ವಿವಿಧ ಮಾದರಿ, ವಿವಿಧ ವರ್ಗದ ಬಂದಿಗಳನ್ನು ಯಾವ ಸಂದರ್ಭದಲ್ಲಿ ತಪಾಸಣೆಗೆ ಒಳಪಡಿಸಬಹುದು, ತಪಾಸಣೆಯ ಸ್ಥಳ ಮತ್ತು ಮಾದರಿ ಇತ್ಯಾದಿಗಳ ಬಗ್ಗೆ ರಾಜ್ಯ ಕಾರಾಗೃಹ ಇಲಾಖೆಯು ಸೂಕ್ತ ಮಾರ್ಗಸೂಚಿಯನ್ನು ರಚಿಸಬೇಕು.

### ಸಿ. ಪ್ರವೇಶದ ಸಂದರ್ಭದಲ್ಲಿ ವೈದ್ಯಕೀಯ ತಪಾಸಣೆ

ಮಹಿಳಾ ಬಂದಿಯು ಕಾರಾಗೃಹ ಪ್ರವೇಶಿಸುವ ಮುನ್ನ ಆಕೆಯನ್ನು ಮಹಿಳಾ ವೈದ್ಯಾಧಿಕಾರಿಗಳು ತಪಾಸಣೆ ಮಾಡತಕ್ಕದ್ದು.[27] ಒಂದು ವೇಳೆ ಕಾರಾಗೃಹದಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದಿದ್ದಲ್ಲಿ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಅರೆಕಾಲಿಕ [ಪಾರ್ಟ್‌ಟೈಮ್] ಮಹಿಳಾ ವೈದ್ಯಾಧಿಕಾರಿಗಳ ಸೇವೆಯನ್ನು ಪಡೆಯಬೇಕು.[28] ವೈದ್ಯಕೀಯ ತಪಾಸಣೆಯು ಸಮಗ್ರವಾಗಿದ್ದು, ಕೆಳಕಂಡ ಪರೀಕ್ಷೆಗಳನ್ನು ಒಳಗೊಂಡಿರಬೇಕು:–

a) ಹೆಚ್‌ಐವಿ ಅಥವಾ ಲೈಂಗಿಕ ಸಂಪರ್ಕದ ಕಾರಣ ಇರಬಹುದಾದ ಇನ್ಯಾವುದೇ ಕಾಯಿಲೆ.

b) ಮಾನಸಿಕ ಸ್ವಾಸ್ಥ್ಯದ ಅಗತ್ಯತೆಗಳು. [ಒತ್ತಡ, ಆತ್ಮಹತ್ಯೆ ಪ್ರವೃತ್ತಿ ಮತ್ತು ಸ್ವಯಂ ಹಾನಿ ಮಾಡಿಕೊಳ್ಳುವ ಪ್ರವೃತ್ತಿ].

c) ಗರ್ಭಧಾರಣೆ ಮತ್ತು ಅದಕ್ಕೆ ಸಂಬಂಧಿಸಿದ ಆರೋಗ್ಯದ ವಿಷಯಗಳು.

d) ಕಾರಾಗೃಹವಾಸಿಗಳಲ್ಲಿ ಇರಬಹುದಾದ ಮಾದಕ ವಸ್ತುಗಳ ಸೇವನೆಯ ವಿವರ ಮತ್ತು

e) ಕಾರಾಗೃಹದೊಳಗೆ ಬರುವ ಮುನ್ನ ಎದುರಿಸಿರಬಹುದಾದ ಲೈಂಗಿಕ ಕೃತ್ಯಗಳು ಅಥವಾ ಇನ್ಯಾವುದೇ ರೀತಿಯ ಹಿಂಸಾತ್ಮಕ ಕೃತ್ಯಗಳು.[29]

ಮಹಿಳಾ ಬಂದಿಯು ಕಾರಾಗೃಹ ಪ್ರವೇಶಿಸಿದ ಕೂಡಲೇ ಆಕೆಯ ವೈದ್ಯಕೀಯ ತಪಾಸಣೆಯನ್ನು ನಡೆಸಬೇಕು. [ಕಾರಾಗೃಹ ಪ್ರವೇಶಿಸಿದ ದಿನದ ಕೊನೆಯೊಳಗೆ ತಪಾಸಣೆ ಮುಗಿಸಬೇಕು] ಇದೇ ಮಾದರಿಯನ್ನು ಉಪ–ಕಾರಾಗೃಹಗಳಲ್ಲಿ [ಕಾರಾಗೃಹದ ಆವರಣದಲ್ಲಿ ಮಹಿಳಾ ವೈದ್ಯಾಧಿಕಾರಿ ಇಲ್ಲದ ಇತರೆ ಕಾರಾಗೃಹಗಳಲ್ಲಿ] ಜಿಲ್ಲಾ/ಸ್ಥಳೀಯ ವೈದ್ಯಕೀಯ ಅಧಿಕಾರಿಗಳಿಂದ ಅಥವಾ ಸಿಬ್ಬಂದಿಗಳಿಂದ ವೈದ್ಯಕೀಯ ತಪಾಸಣೆ ಮಾಡಬೇಕು.

ಮಹಿಳಾ ಬಂದಿಯು ಯಾವುದೇ ರೀತಿಯ ಲೈಂಗಿಕ ಕೃತ್ಯಗಳಿಗೆ [ಕಾರಾಗೃಹದೊಳಕ್ಕೆ ಬರುವ ಮುನ್ನ ಮತ್ತು ಕಾರಾಗೃಹದಲ್ಲಿರುವಾಗ] ಒಳಗಾಗಿದ್ದಾರೆಯೇ ಎಂಬುದು ವೈದ್ಯಕೀಯ ತಪಾಸಣೆಯ ಮೂಲಕ ತಿಳಿದುಬಂದಲ್ಲಿ ಆಕೆಗೆ ನ್ಯಾಯಾಂಗದ ಮೂಲಕ ಪರಿಹಾರ ಪಡೆಯುವ ಹಕ್ಕಿನ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ನೀಡಬೇಕು. ಇದಕ್ಕೆ ಅನುಸರಿಸಬೇಕಾದ ವಿಧಾನದ ಬಗೆಗಿನ

ಸಂಪೂರ್ಣ ವಿವರಗಳನ್ನು ಮಹಿಳಾ ಬಂದಿಗೆ ನೀಡಬೇಕು. ಒಂದು ವೇಳೆ ಮಹಿಳಾ ಬಂದಿಯು ನ್ಯಾಯಾಂಗದ ಮೂಲಕ ಪರಿಹಾರ ಪಡೆಯಲು ಇಚ್ಛಿಸಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳಿಗೆ ಕೂಡಲೇ ತಿಳಿಸಿ, ಇದರ ಬಗ್ಗೆ ತನಿಖೆ ಆರಂಭಿಸಲು ಸಕ್ಷಮ ಪ್ರಾಧಿಕಾರಿಗೆ ತಿಳಿಸುವುದು. ಕಾರಾಗೃಹದ ಅಧಿಕಾರಿಗಳು ಮಹಿಳಾ ಬಂದಿಗೆ ಅಗತ್ಯ ಕಾನೂನು ನೆರವಿನ ಸಹಾಯವನ್ನು ನೀಡಬೇಕು. ಮಹಿಳಾ ಬಂದಿಯು ಕಾನೂನು ರೀತಿಯ ನೆರವನ್ನು ಪಡೆದುಕೊಳ್ಳುವರೋ ಅಥವಾ ಇಲ್ಲವೋ, ಕಾರಾಗೃಹ ಅಧಿಕಾರಿಗಳು ಮಾತ್ರ ಆಕೆಗೆ ಅಗತ್ಯವಾದ ನುರಿತ ಮನೋವೈದ್ಯರ ಅಥವಾ ಆಪ್ತಸಮಾಲೋಚಕರ ಸೇವೆ ದೊರೆಯುವಂತಹ ವ್ಯವಸ್ಥೆಯನ್ನು ಮಾಡಬೇಕು.[30]

ಮಹಿಳಾ ಬಂದಿಯು ಗರ್ಭಿಣಿ ಎಂಬ ಸಂದೇಹವಿದ್ದಲ್ಲಿ, ಮಹಿಳಾ ವೈದ್ಯಾಧಿಕಾರಿಗಳು ಈ ವಿಷಯವನ್ನು ಕಾರಾಗೃಹದ ಅಧೀಕ್ಷಕರಿಗೆ ತಿಳಿಸಬೇಕು.[31] ಮಹಿಳಾ ಬಂದಿಯನ್ನು ಸರ್ಕಾರಿ ಜಿಲ್ಲಾ ಆಸ್ಪತ್ರೆಯ ಮಹಿಳಾ ವಿಭಾಗಕ್ಕೆ ಕರೆದೊಯ್ದು ಆಕೆಯ ಆರೋಗ್ಯದ ಸ್ಥಿತಿಗತಿ, ಗರ್ಭಾವಸ್ಥೆ, ಸಂಭವನೀಯ ಪ್ರಸವ ದಿನ ಇತ್ಯಾದಿಯನ್ನು ಖಚಿತಪಡಿಸಿಕೊಳ್ಳಬೇಕು. ಈ ವಿವರಗಳನ್ನು ಒಳಗೊಂಡ ವರದಿಯನ್ನು ಕಾರಾಗೃಹದ ಮುಖ್ಯಸ್ಥರಿಗೆ ಕಳುಹಿಸಬೇಕು.[32] ಮಹಿಳಾ ಬಂದಿಯೊಂದಿಗೆ ಇರುವ ಮಕ್ಕಳು ಸಹ ವೈದ್ಯಕೀಯ ತಪಾಸಣೆಗೆ ಒಳಪಡಬೇಕು. ಮಕ್ಕಳ ಆರೋಗ್ಯದ ಸ್ಥಿತಿಗತಿ, ಅವರ ಅಗತ್ಯತೆಗಳು, ಇತ್ಯಾದಿಗಳನ್ನು ಒಬ್ಬ ಮಕ್ಕಳ ತಜ್ಞರು ಪರೀಕ್ಷಿಸಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರುವ ಸೌಲಭ್ಯಗಳನ್ನು ಆ ಮಕ್ಕಳಿಗೆ ಒದಗಿಸಬೇಕು.[33]

## ಡಿ. ಕಾನೂನು ಸೇವೆಗಳ ಮಾಹಿತಿ

ಹೊಸದಾಗಿ ಪ್ರವೇಶ ಪಡೆದ ಮಹಿಳಾ ಬಂದಿಗಳಿಗೆ ಕಾನೂನು ಸೇವೆಗಳನ್ನು ಪಡೆಯುವ ವಿಧಾನದ ಬಗ್ಗೆ ತಿಳುವಳಿಕೆಯನ್ನು ನೀಡತಕ್ಕದ್ದು. ಈ ಉದ್ದೇಶಕ್ಕಾಗಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು, ಕಾರಾಗೃಹ ವೀಕ್ಷಣೆಗೆ ಬರುವ ತಮ್ಮ ವಕೀಲರು ಅಥವಾ ಸ್ವಯಂ ಸೇವಾ ಕಾರ್ಯಕರ್ತರು ಹೊಸದಾಗಿ ಪ್ರವೇಶ ಪಡೆದಿರುವ ಮಹಿಳಾ ಬಂದಿಗಳನ್ನು ಕೂಡಲೇ ಭೇಟಿ ಮಾಡುವಂತೆ ನಿರ್ದೇಶಿಸಬೇಕು. ಮಹಿಳಾ ಬಂದಿಯು ವಿದೇಶಿಯಾಗಿದ್ದಲ್ಲಿ, ಕಾನೂನು ಸೇವಾ ಪ್ರಾಧಿಕಾರವು ಸಂಬಂಧಪಟ್ಟ ಎಂಬೆಸ್ಸಿ/ಕಾನ್ಸುಲೇಟ್/ಹೈಕಮೀಷನರ್ ರವರನ್ನು ಸಂಪರ್ಕಿಸಿ ಬಂದಿಯ ಕುಟುಂಬದವರಿಗೆ ಮಾಹಿತಿಯನ್ನು ನೀಡುವಂತೆ ತಿಳಿಸಬೇಕು.

## ಇ. ಕುಟುಂಬದವರೊಡನೆ ಸಂಪರ್ಕ



ಹೊಸದಾಗಿ ಸೇರ್ಪಡೆಯಾಗುವ ಎಲ್ಲಾ ಬಂದಿಗಳಿಗೆ ಮೇಲ್ಮನವಿ ಸಲ್ಲಿಸುವ, ಪುನರ್‌ನಿರೀಕ್ಷಣಾ ಅಥವಾ ಜಾಮೀನು ಪಡೆಯುವುದಕ್ಕೆ ತನ್ನ ಬಂಧು–ಬಳಗ, ಸ್ನೇಹಿತರು ಹಾಗೂ ಕಾನೂನು ಸಲಹೆಗಾರರನ್ನು ಭೇಟಿ ಮಾಡುವ ಅಥವಾ ಅವರೊಡನೆ ಮಾತನಾಡುವ ಅವಕಾಶವನ್ನು ಕಲ್ಪಿಸಬೇಕು. ಮಹಿಳಾ ಬಂದಿಯು ತನ್ನ ಸಂಬಂಧಿಕರನ್ನು ಸಂದರ್ಶಿಸುವುದಕ್ಕೆ ಅಥವಾ ಕಾಗದ ಬರೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಕಾರಾಗೃಹದ ಅಧೀಕ್ಷಕರಿಗೆ ಅಗತ್ಯ ಎಂದು ತೋರಿದರೆ, ಮಹಿಳಾ ಬಂದಿಯು ತನ್ನ ಆಸ್ತಿ ಮತ್ತು ಕೌಟುಂಬಿಕ ವ್ಯವಹಾರಗಳನ್ನು ನಿರ್ವಹಿಸಲು ಮತ್ತಷ್ಟು ಕಾಲಾವಕಾಶ ಮಾಡಿಕೊಡಬಹುದು.[34]

## ಎಫ್.ಮೂಲಭೂತ ಅಗತ್ಯತೆಗಳು

**ಬಟ್ಟೆ/ವಸ್ತ್ರ:** ಮಹಿಳಾ ಬಂದಿಗಳಿಗೆ, ವಿಶೇಷವಾಗಿ ಅಪರಾಧಿ ಎಂದು ಖಚಿತವಾದವರಿಗೆ, ಅವರ ಅಗತ್ಯಕ್ಕೆ ತಕ್ಕಂತೆ ಬಟ್ಟೆ/ವಸ್ತ್ರವನ್ನು ನೀಡತಕ್ಕದ್ದು.[35] ಸ್ಥಳದ ಹವಾಮಾನ ಮತ್ತು ಸಂಸ್ಕೃತಿಗೆ ತಕ್ಕಂತೆ[36] ವಸ್ತ್ರದ ಅಗತ್ಯತೆಗಳನ್ನು ರಾಜ್ಯವು ನಿಗಧಿಪಡಿಸಬಹುದು. ವಿಚಾರಣಾಧೀನ ಬಂದಿಗಳಿಗೆ ಅವರ ಕುಟುಂಬದಿಂದ ಸಹಾಯ ದೊರೆಯದಿದ್ದ ಸಮಯದಲ್ಲಿ ಅಂತಹವರಿಗೆ ಅವಶ್ಯಕವಾದ ವಸ್ತ್ರಗಳ ಕಿಟ್ ನೀಡಬೇಕು. ಕಿಟ್‌ನಲ್ಲಿ ಎರಡು ಜೊತೆ ಬಟ್ಟೆ, ಒಳ ಉಡುಪು [ಇದು ಮಹಿಳೆಯ ದೇಹಕ್ಕೆ ತಕ್ಕಂತೆ ಇರಬೇಕು], ಟವೆಲ್, ಹಲ್ಲುಜ್ಜುವ ಬ್ರಷ್, ಹಲ್ಲುಜ್ಜಲು ಪೇಸ್ಟ್, ಸ್ನಾನದ ಸಾಬೂನು, ಕೈತೊಳೆಯುವ ಸಾಬೂನು, ಬಟ್ಟೆ ಒಗೆಯಲು ಸೋಪ್/ಮಾರ್ಜಕ, ಶ್ಯಾಂಪೂ, ಕೂದಲಿಗೆ ಎಣ್ಣೆ, ಬಾಚಣಿಗೆ, ಕುಂಕುಮ ಮತ್ತು ಸ್ಯಾನಿಟರಿ ಪ್ಯಾಡ್[37] ಒಳಗೊಂಡಿರಬೇಕು. ತಾಯಿಯ ಜೊತೆ ಇರುವ ಮಕ್ಕಳಿಗೂ ಅವರ ಸಮುದಾಯದಲ್ಲಿ ಯಾವ ಬಟ್ಟೆ ಧರಿಸುತ್ತಾರೋ ಅದೇ ರೀತಿಯ ಬಟ್ಟೆ ಇತ್ಯಾದಿಗಳನ್ನು ಅವರಿಗೂ ನೀಡಬೇಕು.

**ಹಾಸಿಗೆ:** ಮಹಿಳಾ ಬಂದಿಗಳು ಮಲಗುವುದಕ್ಕೆ ಒಂದು ಸೂಕ್ತ ಸ್ಥಳ ಮತ್ತು ಹಾಸಿಗೆ ಇತ್ಯಾದಿ ನೀಡಬೇಕು. ಬಂದಿಗೆ ಹಾಸಿಗೆ ನೀಡುವಾಗ ಅದನ್ನು ಸ್ವಚ್ಛಗೊಳಿಸಿ ನೀಡಬೇಕಲ್ಲದೆ ಆಗಾಗ್ಗೆ ಅದನ್ನು ಬದಲಿಸುತ್ತಿರಬೇಕು. ಮಹಿಳಾ ಬಂದಿಗಳಿಗೆ ಒಂದು ದಿಂಬು, ದಿಂಬಿಗೆ ಒಂದು ಕವಚ [ಕವರ್] ಮತ್ತು ಸ್ಥಳೀಯ ಹವಾಮಾನಕ್ಕೆ ತಕ್ಕಂತೆ ಉಣ್ಣೆಯ ಕಂಬಳಿ ಒದಗಿಸಬೇಕು.[40] ಮಹಿಳಾ

ಬಂದಿಗಳಿಗೆ ವಿತರಿಸಿರುವ ಹಾಸಿಗೆ, ಬಟ್ಟೆ ಮತ್ತು ಇತರೆ ವಸ್ತುಗಳನ್ನು ಒಬ್ಬ ಮಹಿಳಾ ಅಧಿಕಾರಿಯು ಕನಿಷ್ಠ ವಾರಕ್ಕೊಮ್ಮೆ ಪರೀಕ್ಷಿಸಿ ಅದರ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ನೋಡಿಕೊಳ್ಳಬೇಕು.[41]

# III. ಮೂಲಭೂತ ಸೌಕರ್ಯಗಳು

## ಎ. ನೀರು, ಶೌಚಾಲಯ ಮತ್ತು ನೈರ್ಮಲ್ಯ



**ನೀರು:** ಬಂದಿಗಳಿಗೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಿ ಅದನ್ನು ಆಗಾಗ್ಗೆ ಪರೀಕ್ಷಿಸುತ್ತಿರಬೇಕು. ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಕಾರಾಗೃಹವು ನಿಯಮಿತವಾಗಿ ನೀರು ಸರಬರಾಜು ಮಾಡಬೇಕು. ನೀರಿನ ಕನಿಷ್ಠ ಗುಣಮಟ್ಟವನ್ನು ಖಾತ್ರಿ ಪಡಿಸಿಕೊಳ್ಳಲು ಕಾಲಕಾಲಕ್ಕೆ ನೀರನ್ನು ಪರೀಕ್ಷೆಗೆ ಒಳಪಡಿಸುತ್ತಿರಬೇಕು. ವಿಶೇಷವಾಗಿ ಸ್ನಾನ ಮತ್ತು ಶೌಚಾಲಯಕ್ಕೆ ಬಳಸುವ ನೀರು ಶುದ್ಧವಾಗಿಲ್ಲದಿದ್ದಲ್ಲಿ ಅದರಿಂದ ಋತುಸ್ರಾವ/ಲೈಂಗಿಕ ಅಥವಾ ಸಂತಾನೋತ್ಪತ್ತಿಗೆ ಸಂಬಂಧಿಸಿದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟುಮಾಡಬಹುದು.

**ಸ್ನಾನಗೃಹ ಮತ್ತು ಶೌಚಾಲಯ:** ಕಾರಾಗೃಹದ ಅಗತ್ಯಕ್ಕೆ ಅನುಗುಣವಾಗಿ ಸಾಕಷ್ಟು ಸಂಖ್ಯೆಯಲ್ಲಿ ಸ್ನಾನಗೃಹ ಮತ್ತು ಶೌಚಾಲಯವನ್ನು ಹೊಂದಿರಬೇಕಲ್ಲದೆ ಅದನ್ನು ಸ್ವಚ್ಛವಾಗಿ ಮತ್ತು ಉಪಯೋಗಕ್ಕೆ ಯೋಗ್ಯವಾದ ರೀತಿಯಲ್ಲಿ ಇಟ್ಟುಕೊಂಡಿರಬೇಕು. ಪ್ರತಿಯೊಬ್ಬ ಬಂದಿಗೆ ಹವಾಗುಣದಲ್ಲಿನ ಉಷ್ಣಾಂಶದ ಅಗತ್ಯಕ್ಕೆ ತಕ್ಕಂತೆ ಸ್ನಾನಮಾಡುವ ಅವಕಾಶ ಇರಬೇಕು.[44] ಕಾರಾಗೃಹಗಳು ಬಂದಿಗಳ ಖಾಸಗಿತನ ಮತ್ತು ಮಹಿಳಾ ಬಂದಿಗಳ ಮೂಲಭೂತ ಹಕ್ಕುಗಳನ್ನು ಎತ್ತಿ ಹಿಡಿಯುವಂತಿರಬೇಕು ಹಾಗೂ ಮಹಿಳಾ ಬಂದಿಗಳು ಶೌಚಾಲಯವನ್ನು, ದೈನಂದಿನ ಅಗತ್ಯತೆಗಳು, ಸ್ನಾನ, ಋತು ಚಕ್ರಕ್ಕೆ ಸಂಬಂಧಿಸಿದ ವಸ್ತುಗಳ ಬದಲಾವಣೆ ಇತ್ಯಾದಿಗಳಿಗೆ ಧಕ್ಕೆ ಬಾರದಂತೆ ಇರಬೇಕು. ಈ ಕಾರಣಕ್ಕಾಗಿ ಶೌಚಾಲಯದ ಗೋಡೆಗಳು ಎತ್ತರವಾಗಿದ್ದು ಸರಿಯಾದ ಬಾಗಿಲುಗಳನ್ನು ಹೊಂದಿರಬೇಕು.

**ವಸ್ತ್ರದ ನಿರ್ವಹಣೆ;** ಎಲ್ಲಾ ವಸ್ತ್ರಗಳನ್ನು ಸ್ವಚ್ಛಗೊಳಿಸಿ ಸರಿಯಾದ ರೀತಿಯಲ್ಲಿ ಇಟ್ಟಿರಬೇಕು. ವಸ್ತ್ರಗಳನ್ನು ಎರಡು ತಿಂಗಳಿಗೊಮ್ಮೆ ಕಾರಾಗೃಹದ ವೆಚ್ಚದಲ್ಲಿ ಕ್ರಿಮಿನಾಶಕ ಉಪಯೋಗಿಸಿ [ಸ್ಟೆರಲೈಸ್] ಮಾಡಬೇಕು. ಈ ವೆಚ್ಚವನ್ನು ಯಾವುದೇ ಕಾರಣಕ್ಕೂ ಮಹಿಳಾ ಬಂದಿಗಳಿಂದ ವಸೂಲು ಮಾಡಬಾರದು.[45]

**ನೈರ್ಮಲ್ಯ:** ಕಾರಾಗೃಹ ಹಾಗೂ ಅದರ ಸುತ್ತಮುತ್ತ ಮತ್ತು ವೈಯಕ್ತಿಕ ನೈರ್ಮಲ್ಯ ಯಾವಾಗಲೂ ಮುಖ್ಯವಾದದ್ದು. ಮಹಿಳಾ ಬಂದಿಗಳು ಉಪಯೋಗಿಸುವ ಎಲ್ಲಾ ಸ್ಥಳಗಳಲ್ಲಿ ಸದಾಕಾಲ ಸ್ವಚ್ಛತೆ ಕಾಪಾಡತಕ್ಕದ್ದು[46] ಶೌಚಾಲಯಕ್ಕೆ ಸಂಬಂಧಪಟ್ಟ ಕೆಲಸಗಳನ್ನು ಯಾವುದೇ ಮಹಿಳಾ ಬಂದಿಗಳು ಮಾಡಬಾರದು. ಅದಕ್ಕಾಗಿ ಪ್ರತ್ಯೇಕ ಸಿಬ್ಬಂದಿಯನ್ನು ನೇಮಕ ಮಾಡಬೇಕು[47] ನೈರ್ಮಲ್ಯದ ದೃಷ್ಟಿಯಿಂದ ದೇಹ ಸ್ವಚ್ಛಗೊಳಿಸುವ ಪ್ರಮುಖ ಸ್ಥಳಗಳಲ್ಲಿ ಸಾಬೂನು ಲಭ್ಯವಿರಬೇಕು. ವೈಯಕ್ತಿಕ ನೈರ್ಮಲ್ಯಕ್ಕೆ ಸಂಬಂಧಪಟ್ಟಂತೆ ಒಳ ಉಡುಪುಗಳನ್ನು ಆಗಾಗ್ಗೆ ಬದಲಿಸುತ್ತಿರಬೇಕು ಹಾಗೂ ಒಗೆಯುತ್ತಿರಬೇಕು/ಸ್ವಚ್ಛಗೊಳಿಸುತ್ತಿರಬೇಕು.[48]

**ಋತು ಚಕ್ರಕ್ಕೆ ಸಂಬಂಧಪಟ್ಟ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು:** ಮಹಿಳಾ ಬಂದಿಗಳ ಸ್ಥಳಗಳು ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕು:

[ಎ] ಮಹಿಳಾ ಬಂದಿಗಳ ಬ್ಯಾರಕ್‌ಗಳಲ್ಲಿ ಬಳಸಿದ ಸ್ಯಾನಿಟರಿ ಪ್ಯಾಡ್‌ಗಳನ್ನು ವಿಸರ್ಜಿಸಲು ಮುಚ್ಚಳವಿರುವ ಕಸದ ಬುಟ್ಟಿ ಇರಬೇಕು. ಲಾಕ್‌ಅಪ್ ಸಮಯ ಮತ್ತು ರಾತ್ರಿ ವೇಳೆಯಲ್ಲೂ ಈ ಸೌಲಭ್ಯವಿರಬೇಕು.

[ಬಿ] ಬಳಸಿದ ಒಳ ಉಡುಪುಗಳು ಮತ್ತು ಇತರೆ ಬಟ್ಟೆಯನ್ನು ಸ್ವಚ್ಛಗೊಳಿಸಿ ಅದನ್ನು ಬಿಸಿಲಿನಲ್ಲಿ ಒಣಗಿಸಲು ಸೂಕ್ತ ವ್ಯವಸ್ಥೆಯನ್ನು ಮಾಡಬೇಕು

[ಸಿ] ಋತುಚಕ್ರದ ಸಮಯದಲ್ಲಿ ಉಂಟಾಗುವ ನೋವನ್ನು ಶಮನಗೊಳಿಸಲು ಬಿಸಿನೀರಿನ ಬ್ಯಾಗ್‌ಗಳು ದೊರೆಯುವ ವ್ಯವಸ್ಥೆಯು ಇರಬೇಕು ಮತ್ತು

[ಡಿ] ಬಳಸಿದ ಸ್ಯಾನಿಟರಿ ಪ್ಯಾಡ್‌ಗಳನ್ನು ವಿಸರ್ಜಿಸಲು ಹಳೆಯ ದಿನಪತ್ರಿಕೆ ಲಭ್ಯವಿರಬೇಕು.

ಬಳಸಿದ ಸ್ಯಾನಿಟರಿ ಪ್ಯಾಡ್‌ಗಳನ್ನು ಪ್ರತ್ಯೇಕಿಸುವ ಸಲುವಾಗಿ ಅದನ್ನು ಕಸದ ಬುಟ್ಟಿಯಲ್ಲಿ ಕಲೆಹಾಕಿ, ಹಳೆ ದಿನಪತ್ರಿಕೆಯಲ್ಲಿ ಮುಚ್ಚಿ ಅದರ ಮೇಲೆ ಒಂದು ಕೆಂಪು ಚುಕ್ಕೆ/ಗುರುತು ಮಾಡಬೇಕು. ಸಾಧ್ಯವಿದ್ದಲ್ಲಿ ಅದನ್ನು ಇನ್ಸಿನಿರೇಟಿಂಗ್ [incinerating]

ಸೌಲಭ್ಯಕ್ಕೆ ಅಥವಾ ಆ ಸೌಲಭ್ಯವಿರುವ ಆಸ್ಪತ್ರೆಗೆ ಕಳುಹಿಸಬೇಕು. ಒಂದು ವೇಳೆ ಇನ್ಸಿನಿರೇಟಿಂಗ್ ಯಂತ್ರವನ್ನು ಸ್ಥಾಪಿಸಿದ್ದಲ್ಲಿ, ಅದು ವಿಶ್ವ ಆರೋಗ್ಯ ಸಂಸ್ಥೆ ನಿಗದಿಪಡಿಸಿರುವ ಇನ್ಸಿನಿರೇಟಿಂಗ್ ಮಾನಕಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು.

## ಬಿ. ಪಥ್ಯಾಹಾರ ಮತ್ತು ಅಡುಗೆಮನೆ

### ಪಥ್ಯಾಹಾರ ಪಟ್ಟಿ[50]

ಎ] ಎಲ್ಲಾ ಬಂದಿಗಳಿಗೆ

| ಸಂಖ್ಯೆ | ಪಥ್ಯಾಹಾರದ ವಿವರ | ಪ್ರಮಾಣ |
|---|---|---|
| 1. | ಸಿರಿಧಾನ್ಯಗಳು [ಮಿಲ್ಲೆಟ್ಸ್ ಸೇರಿದಂತೆ] | 600 ಗ್ರಾಂ |
| 2. | ಬೇಳೆ | 100 ಗ್ರಾಂ [ವಾರಕ್ಕೆ ಎರಡು ಬಾರಿ] |
| 3. | ತರಕಾರಿ<br>ಎ. ಹಸಿರು ಎಲೆ [ಸೊಪ್ಪು]<br>ಬಿ. ಬೇರು ಇತ್ಯಾದಿ<br>ಸಿ. ಇತರೆ | 200 ಗ್ರಾಂ |
| 4. | ಮೀನು ಅಥವಾ ಮಾಂಸ ಅಥವಾ<br>ಹಾಲು<br>ತುಪ್ಪ<br>ಕಡಲೇಕಾಯಿ ಎಣ್ಣೆ | 100 ಗ್ರಾಂ<br>500 ಮಿಲಿ ಲೀಟರ್<br>15 ಗ್ರಾಂ<br>100 ಗ್ರಾ |
| 5. | ಹಾಲು<br>ಮೊಸರು | 50 ಮಿಲಿ ಲೀಟರ್<br>100 ಮಿಲಿ ಲೀಟರ್ |
| 6. | ಕಾಳು [ಹುರಿದದ್ದು] | 60 ಗ್ರಾಂ |
| 7. | ಬೆಲ್ಲ | 20 ಗ್ರಾಂ |
| 8. | ಎಣ್ಣೆ | 30 ಗ್ರಾಂ |
| 9. | ಉಪ್ಪು | 30 ಗ್ರಾಂ |
| 10. | ಹುಣಸೆಹಣ್ಣು | 15 ಗ್ರಾಂ |
| 11. | ಜೀರಿಗೆ ಅಥವಾ ತೇಜ್‌ಪಾತಾ | 5 ಗ್ರಾಂ |
| 12. | ಅರಿಶಿನ | 2 ಗ್ರಾಂ |
| 13. | ಕೊತ್ತಂಬರಿ | 5 ಗಾಂ |
| 14. | ಮೆಣಸಿನಕಾಯಿ | 5 ಗ್ರಾಂ |
| 15. | ಈರುಳ್ಳಿ | 25 ಗ್ರಾಂ |
| 16. | ಕಾಫಿ ಅಥವಾ ಟೀ | |
| 17. | ಬಿಳಿ ಸಕ್ಕರೆ | 50 ಗ್ರಾಂ |
| 18. | ಮೆಣಸು | 3 ಗ್ರಾಂ |
| 19. | ಸಾಸಿವೆ | 2 ಗ್ರಾಂ |
| 20. | ಬೆಳ್ಳುಳ್ಳಿ | 2 ಗ್ರಾಂ |
| 21. | ತೆಂಗಿನಕಾಯಿ | 1/20 [ನಂಬರ್ಸ್] |

ಬಿ. ಗರ್ಭಿಣಿ ಮಹಿಳೆ ಮತ್ತು ಹಾಲುಣಿಸುತ್ತಿರುವ ಮಹಿಳಾ ಬಂದಿಗಳಿಗೆ [ಸಾಮಾನ್ಯ ಪಥ್ಯಾಹಾರಕ್ಕೆ ಹೆಚ್ಚುವರಿಯಾಗಿ]

| ಸಂಖ್ಯೆ | ಪಥ್ಯಾಹಾರದ ವಿವರ | ಪ್ರಮಾಣ |
|---|---|---|
| 1. | ಹಾಲು | 250 ಮಿಲಿ ಲೀಟರ್ |
| 2. | ಸಕ್ಕರೆ | 60 ಗ್ರಾಂ |
| 3. | ತರಕಾರಿ | 100 ಗ್ರಾಂ |
| 4. | ಮೀನು/ಮಾಂಸ ಅಥವಾ<br>ಮೊಸರು | 300 ಅಥವಾ 200 ಗ್ರಾಂ<br>50 ಮಿಲಿ ಲೀಟರ್ |

ವೈದ್ಯಕೀಯ ಅಧಿಕಾರಿ ಸೂಚಿಸುವ ಪ್ರಮಾಣದಲ್ಲಿ ಗರ್ಭಿಣಿಯರಿಗೆ ಮತ್ತು ಹಾಲುಣಿಸುತ್ತಿರುವ ತಾಯಂದಿರಿಗೆ ತಾಜಾ ಹಣ್ಣುಗಳನ್ನು ನೀಡತಕ್ಕದ್ದು.

ಹಾಲುಣಿಸುತ್ತಿರುವ ತಾಯಂದಿರಿಗೆ ಹಾಲು/ನೀರು ಬಿಸಿ ಮಾಡಿಕೊಳ್ಳುವ ವ್ಯವಸ್ಥೆ ಮಾಡಿಕೊಡಬೇಕು.

ಸಿ. ಮೂರರಿಂದ ಆರು ವರ್ಷದ ಮಕ್ಕಳಿಗೆ

| ಸಂಖ್ಯೆ | ಪಥ್ಯಾಹಾರ | ಪ್ರಮಾಣ |
|---|---|---|
| 1. | ಸಿರಿಧಾನ್ಯ | 300 ಗ್ರಾಂ |
| 2. | ಬೇಳೆಕಾಳು | 60 ಗ್ರಾಂ |
| 3. | ತರಕಾರಿ<br>ಎ. ಹಸಿರು ಎಲೆ [ಸೊಪ್ಪು]<br>ಬಿ. ಬೇರು ಇತ್ಯಾದಿ<br>ಸಿ. ಇತರೆ | 125 ಗ್ರಾಂ |
| 4. | ಮೀನು ಅಥವಾ ಮಾಂಸ ಅಥವಾ<br>ಮೊಸರು | 150 ಅಥವಾ 100 ಗ್ರಾಂ<br>50 ಮಿಲಿ ಲೀಟರ್ |

ವೈದ್ಯಕೀಯ ಅಧಿಕಾರಿ ಸೂಚಿಸುವ ಪ್ರಮಾಣದಲ್ಲಿ ಮಕ್ಕಳಿಗೆ ತಾಜಾ ಹಣ್ಣುಗಳನ್ನು ನೀಡತಕ್ಕದ್ದು.

**ಅಡುಗೆಮನೆ:** ಒಂದು ನೂರಕ್ಕಿಂತ ಹೆಚ್ಚು ಮಹಿಳೆಯರು ಇದ್ದಲ್ಲಿ ಪ್ರತ್ಯೇಕ ಅಡುಗೆಮನೆ ವ್ಯವಸ್ಥೆ ಇರಬೇಕು. ಆದರೆ ವಾಸ್ತವವಾಗಿ 100ಕ್ಕಿಂತ ಕಡಿಮೆ ಮಹಿಳೆಯರು ಇರುತ್ತಾರೆ. ಆದರೂ ಸಾಧ್ಯವಿದ್ದಲ್ಲಿ ಅವರಿಗೆ ಪ್ರತ್ಯೇಕ ಅಡುಗೆಮನೆಯನ್ನು ನಿರ್ಮಿಸಬಹುದು.

## ಸಿ. ಕುಟುಂಬ ಮತ್ತು ಮಕ್ಕಳೊಡನೆ ಸಂಪರ್ಕ



ಮಹಿಳಾ ಬಂದಿಗಳು, ಅವರ ಕುಟುಂಬಸ್ಥರು ಹಾಗೂ ಮಕ್ಕಳನ್ನು ಸಂಪರ್ಕಿಸಲು ಇಚ್ಛಿಸಿದ್ದಲ್ಲಿ ಕಾರಾಗೃಹದ ಸಿಬ್ಬಂದಿವರ್ಗದವರು ಅದಕ್ಕೆ ಅವಕಾಶವನ್ನು ಕಲ್ಪಿಸಬೇಕು.[51] ಮಹಿಳಾ ಬಂದಿಗಳು ತಮ್ಮ ಕುಟುಂಬಸ್ಥರು, ಮಕ್ಕಳು ಮತ್ತು ಮಕ್ಕಳ ಪೋಷಕರು ಹಾಗೂ ಕಾನೂನು ಪ್ರತಿನಿಧಿಗಳೊಂದಿಗೆ ಸಂಪರ್ಕಿಸಲು ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಬೇಕು. ಕಾರಾಗೃಹವು ನಿಯಮಾನುಸಾರ ಬಂದಿಗಳಿಗೆ ಸಂಪರ್ಕದ (ಭೇಟಿ) ವ್ಯವಸ್ಥೆಯನ್ನು ಕಲ್ಪಿಸಬೇಕು. ಸಂದರ್ಶನ, ದೂರವಾಣಿ, ವಿದ್ಯುನ್ಮಾನ ಸಾಧನ, ವೀಡಿಯೊ ಮತ್ತು ಇತರೆ ಸಂವಹನಾ ಮಾದರಿಯ ಮೂಲಕ ಕಾರಾಗೃಹದೊಳಗೆ ಸಂಪರ್ಕ ಮಾಡಲು ಸೂಕ್ತ ವ್ಯವಸ್ಥೆಯನ್ನು ಮಾಡಬೇಕು. ಮಹಿಳಾ ಬಂದಿಗಳಿಗೆ ಬರುವ ಪತ್ರಗಳ ಸಂಖ್ಯೆಗೆ ಯಾವುದೇ ಮಿತಿ ಇರಬಾರದು. ಅನಕ್ಷರಸ್ಥ ಮತ್ತು ಅರೆಅನಕ್ಷರಸ್ಥ ಬಂದಿಗಳಿಗೆ ಪತ್ರ ಬರೆಯಲು ಸಹಕರಿಸಬೇಕು.

ಪ್ರತಿಯೊಂದು ಮಹಿಳಾ ಕಾರಾಗೃಹದಲ್ಲಿ ಸಂದರ್ಶಕರಿಗಾಗಿ ಒಂದು ನಿರೀಕ್ಷಣಾ ಕೋಣೆ ಇರತಕ್ಕದ್ದು. ಮಕ್ಕಳನ್ನು ಒಳಗೊಂಡ ಸಂದರ್ಶನವು ಸಕಾರಾತ್ಮಕ ವಾತಾವರಣದಲ್ಲಿ ನಡೆಯುವಂತೆ ಹಾಗೂ ತಾಯಿ ಮತ್ತು ಮಕ್ಕಳ ನಡುವೆ ಮುಕ್ತ ವಾತಾವರಣ ಇರುವಂತೆ ಕಾರಾಗೃಹದ ಸಿಬ್ಬಂದಿವರ್ಗದವರು ನೋಡಿಕೊಳ್ಳಬೇಕು. ಸಾಧ್ಯವಾದಷ್ಟು ಮಟ್ಟಿಗೆ ಮಕ್ಕಳನ್ನೊಳಗೊಂಡ ಭೇಟಿ/ಸಂದರ್ಶನವನ್ನು ವಿಸ್ತರಿಸಲು ಉತ್ತೇಜಿಸಬೇಕು.[52]

ಪುರುಷ ಮತ್ತು ಮಹಿಳಾ ಬಂದಿಗಳು ವಿವಾಹ ಅಥವಾ ರಕ್ತಸಂಬಂಧಿಗಳಾಗಿದ್ದು, ಅವರನ್ನು ಒಂದೇ ಕಾರಾಗೃಹದಲ್ಲಿ ಇರಿಸಿದ್ದಲ್ಲಿ ಅಥವಾ ಒಬ್ಬರು ಕೇಂದ್ರ ಕಾರಾಗೃಹ ಹಾಗೂ ಮತ್ತೊಬ್ಬರು ಮಹಿಳೆಯರ ವಿಶೇಷ ಕಾರಾಗೃಹದಲ್ಲಿದ್ದರೆ ಅವರಿಬ್ಬರ ಸಂದರ್ಶನ/ಭೇಟಿಗೆ ಕಾರಾಗೃಹದ ಅಧೀಕ್ಷಕರು ವ್ಯವಸ್ಥೆಯನ್ನು ಮಾಡಬೇಕು.[53] ಒಂದು ವೇಳೆ ಈ ಭೇಟಿಗಾಗಿ ಬಂದಿಯನ್ನು ಕಾರಾಗೃಹದಿಂದ ಹೊರಗೆ ಕಳುಹಿಸಬೇಕಾದಲ್ಲಿ ಆತ ಅಥವಾ ಆಕೆಗೆ ಸೂಕ್ತ ರಕ್ಷಣೆಯನ್ನು ಒದಗಿಸಬೇಕು.[54]

### ಡಿ. ಮನರಂಜನೆ



ಮಹಿಳಾ ಬಂದಿಗಳ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಕಾರಾಗೃಹದಲ್ಲಿ ಅವರಿಗೆ ಸರಳವಾದ ಆಟ, ಭಜನೆ, ಸಂಗೀತ, ನೃತ್ಯ, ನಾಟಕ, ಟಿವಿ, ರೇಡಿಯೋ ಮತ್ತು ಚಿತ್ರಪ್ರದರ್ಶನವನ್ನು ಏರ್ಪಡಿಸಬೇಕು. ಒತ್ತಡ ನಿರ್ವಹಣೆಗಾಗಿ ಮಹಿಳಾ ಬಂದಿಗಳಿಗೆ ಧ್ಯಾನ ಮತ್ತು ಯೋಗ ಮಾಡುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಬೇಕು.[55]

### ಇ. ಕುಂದುಕೊರತೆಯ ನಿವಾರಣೆ

ಮಹಿಳಾ ಬಂದಿಗಳನ್ನು ಪ್ರತ್ಯೇಕಿಸುವ ಸ್ಥಳದಲ್ಲಿ, ಎಲ್ಲರಿಗೂ ಕಾಣುವ ಒಂದು ಜಾಗದಲ್ಲಿ ದೂರು ಪೆಟ್ಟಿಗೆಯನ್ನು ಇಡತಕ್ಕದ್ದು. ಅದನ್ನು ಅಧೀಕ್ಷಕರ ಸಮ್ಮುಖದಲ್ಲಿ ಕನಿಷ್ಠ ವಾರಕ್ಕೆರಡು ಬಾರಿ ತೆರೆಯತಕ್ಕದ್ದು. ನಿಂದನೆಗೆ ಒಳಗಾಗಿದ್ದೇನೆ ಎಂದು ದೂರು ನೀಡುವ ಮಹಿಳಾ ಬಂದಿಗೆ ತಕ್ಷಣ ಸೂಕ್ತ ರಕ್ಷಣೆ, ಸಹಾಯ ಮತ್ತು ಆಪ್ತಸಮಾಲೋಚನಾ ವ್ಯವಸ್ಥೆಯನ್ನು ಕಲ್ಪಿಸಬೇಕು. ಮಹಿಳಾ ಬಂದಿಯು ನೀಡುವ ದೂರನ್ನು ಸಕ್ಷಮ ಅಧಿಕಾರಿಯು ಮತ್ತು ಸ್ವಾಯುತ್ತ ಪ್ರಾಧಿಕಾರಿಗಳು ಗೌಪ್ಯತೆಗೆ ಆದ್ಯತೆ ನೀಡಿ ಅದನ್ನು ತನಿಖೆ ಮಾಡಬೇಕು.

ಮಹಿಳಾ ಬಂದಿಯ ರಕ್ಷಣೆಯ ವಿಷಯದಲ್ಲಿ ಪ್ರತೀಕಾರದ ಅಪಾಯವನ್ನು ಗಣನೆಗೆ ತೆಗೆದುಕೊಳ್ಳಬೇಕು.[56] ಉದ್ಯೋಗದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ [ಪ್ರತಿಬಂಧಕ, ತಡೆಗಟ್ಟುವಿಕೆ ಮತ್ತು ಪರಿಹಾರ] ಅಧಿನಿಯಮ– 2013ರ ಪ್ರಕಾರ ಸ್ಥಾಪನೆಗೊಂಡಿರುವ ಆಂತರಿಕ ದೂರುಗಳ ಸಮಿತಿಗೆ ದೂರು ನೀಡಲು ಬಯಸುವ ಮಹಿಳಾ ಬಂದಿಗಳಿಗೆ ಅದಕ್ಕೆ ಅನುಸರಿಸಬೇಕಾದ ಕ್ರಮದ ಬಗ್ಗೆ ಸಲಹೆ ನೀಡಬೇಕು.[57] ಸಂದರ್ಶಕ ಮಂಡಳಿಯು ಮಹಿಳಾ ಬಂದಿಗಳ ಪರಿಸ್ಥಿತಿ ಮತ್ತು ಅವರನ್ನು ನೋಡಿಕೊಳ್ಳುತ್ತಿರುವುದರ ಬಗ್ಗೆ ಹೆಚ್ಚಿನ ಗಮನಹರಿಸಬೇಕು.[58]

# IV. ವೈದ್ಯಕೀಯ ಮತ್ತು ಮಾನಸಿಕ ಆರೋಗ್ಯ ಪಾಲನೆ

### ಎ. ಲಿಂಗಾಧಾರಿತ ಆರೋಗ್ಯ ಪಾಲನೆ



ಪ್ರತಿಯೊಂದು ಮಹಿಳಾ ಕಾರಾಗೃಹವು 10 ಹಾಸಿಗೆ ಇರುವ ಆಸ್ಪತ್ರೆಯನ್ನು ಹೊಂದಿರಬೇಕು. ಚಿಕಿತ್ಸಾ ವಿಧಾನವನ್ನು ಸೂಕ್ತ ರೀತಿಯಲ್ಲಿ ಆಯೋಜಿಸಿ ಅಭಿವೃದ್ಧಿಪಡಿಸಬೇಕು. ಆಸ್ಪತ್ರೆಯು ಕನಿಷ್ಠ ಒಬ್ಬ ಮಹಿಳಾ ಸ್ತ್ರೀರೋಗಶಾಸ್ತ್ರಜ್ಞೆ ಮತ್ತು ಮನೋವೈದ್ಯಶಾಸ್ತ್ರಜ್ಞರನ್ನು ಹೊಂದಿರಬೇಕು. ಕ್ಷ–ಕಿರಣ, ಇಸಿಜಿ, ಅಲ್ಟ್ರಾಸೌಂಡ್ ಮತ್ತು ಸೋನೋಗ್ರಫಿ ಹಾಗೂ ಇತರೆ ಆಧುನಿಕ ಸಲಕರಣೆಗಳು ಆಸ್ಪತ್ರೆಯಲ್ಲಿ ಲಭ್ಯವಿರಬೇಕು.[59] ಮಹಿಳೆಯರಿಗೆ ಪ್ರತ್ಯೇಕ ಸ್ಥಳ ಹೊಂದಿರುವ ಕಾರಾಗೃಹದ ಆಸ್ಪತ್ರೆಗಳಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ವಾರ್ಡ್ ಇರತಕ್ಕದ್ದು.[60] ಅನಾರೋಗ್ಯ ಪೀಡಿತ ಮಹಿಳಾ ಬಂದಿಗಳನ್ನು ಆಸ್ಪತ್ರೆಗೆ ಹೊಂದಿಕೊಂಡಿರುವ ಪ್ರತ್ಯೇಕ ಸ್ಥಳದಲ್ಲಿ ಅಥವಾ ಕಾರಾಗೃಹದ ಮಹಿಳಾ ವಿಭಾಗದಲ್ಲಿ ಚಿಕಿತ್ಸೆ ನೀಡತಕ್ಕದ್ದು.[61]

ಮಹಿಳಾ ಬಂದಿಗೆ ಕಾರಾಗೃಹದೊಳಗೆ ದೊರೆಯುವ ಚಿಕಿತ್ಸೆಯು ಸರ್ಕಾರಿ ಆರೋಗ್ಯ ಕೇಂದ್ರದಲ್ಲಿ ದೊರೆಯುವ ಕನಿಷ್ಠ ಚಿಕಿತ್ಸೆಗೆ ತಕ್ಕಂತೆ ಇರತಕ್ಕದ್ದು.[62] ಮಹಿಳಾ ಬಂದಿಗಳ ಆರೋಗ್ಯ ಪಾಲನೆಯನ್ನು ಮಹಿಳಾ ವೈದ್ಯರು ಮಾತ್ರ ನೋಡಿಕೊಳ್ಳತಕ್ಕದ್ದು.[63] ತುರ್ತು ಪರಿಸ್ಥಿತಿಯಲ್ಲಿ ಹೊರತುಪಡಿಸಿ, ಮಹಿಳಾ ವೈದ್ಯಕೀಯ ಅಧಿಕಾರಿಗಳು ಮಾತ್ರ ಮಹಿಳಾ ಬಂದಿಗಳ ವೈದ್ಯಕೀಯ ತಪಾಸಣೆ ಮಾಡಬೇಕು. ಒಂದು ವೇಳೆ ಪುರುಷ ವೈದ್ಯಾಧಿಕಾರಿ ತಪಾಸಣೆ ಮಾಡಬೇಕಾದಲ್ಲಿ, ಒಬ್ಬ ಮಹಿಳಾ ಸಿಬ್ಬಂದಿಯ ಸಮ್ಮುಖದಲ್ಲಿಯೇ ಅದನ್ನು ಕೈಗೊಳ್ಳಬೇಕು.[64] ವೈದ್ಯಾಧಿಕಾರಿಗಳ ಸೂಚನೆಯ ಮೇರೆಗೆ, ಚಿಕಿತ್ಸೆಗಾಗಿ ಹೊರ ರೋಗಿ ಮಹಿಳಾ ಬಂದಿಯನ್ನು ಸ್ಥಳೀಯ ಜಿಲ್ಲಾ ಆಸ್ಪತ್ರೆಗೆ ಅಥವಾ ಜಿಲ್ಲೆಯ ಹೊರಗೆ ವಿಶೇಷ ಚಿಕಿತ್ಸೆಗಾಗಿ ಕಳುಹಿಸಬೇಕಾದಲ್ಲಿ, ಪೊಲೀಸ್ ಇಲಾಖೆಯು ಸಾಕಷ್ಟು ವೈದ್ಯಕೀಯ ಸಿಬ್ಬಂದಿಯನ್ನು ವ್ಯವಸ್ಥೆ ಮಾಡಬೇಕು.

ಮಾದಕ ವಸ್ತುಗಳ ಸೇವನೆಯ ಅಭ್ಯಾಸವಿರುವ ಮಹಿಳಾ ಬಂದಿಗಳಿಗೆ ಚಿಕಿತ್ಸೆ ನೀಡುವ ವೈದ್ಯರು ಅವರ ಹಿಂದಿನ ಚರಿತ್ರೆ, ಗರ್ಭಿಣಿಯರು ಮತ್ತು ಮಕ್ಕಳಿರುವ ಮಹಿಳೆಯರ ಅಗತ್ಯತೆಗಳು ಹಾಗೂ ಅವರ ವೈವಿಧ್ಯಮಯ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು.[65]

## ಬಿ. ಮಾನಸಿಕ ಆರೋಗ್ಯ ಪಾಲನೆ

ಮಹಿಳಾ ಬಂದಿಗಳಿಗೆ ವ್ಯಕ್ತಿ ಕೇಂದ್ರಿತ ಮತ್ತು ಲಿಂಗಾಧಾರಿತ ಸೂಕ್ಷ್ಮತೆಗೆ ಅನುಗುಣವಾಗಿ ಮಾನಸಿಕ ಆರೋಗ್ಯ ಪಾಲನೆ ಮತ್ತು ಪುನರ್‌ವಸತಿ ಸೌಲಭ್ಯ ಹೊಂದಿರಬೇಕು. ಸೈಕೋಸೋಮ್ಯಾಟಿಕ್, ಮಾನಸಿಕ ಸ್ವಾಸ್ಥ್ಯದಲ್ಲಿ ಏರುಪೇರು, ಲೈಂಗಿಕ ನಿಂದನೆ ಇತ್ಯಾದಿ ಹಾಗೂ ಇತರೆ ಮಾನಸಿಕ ಅನಾರೋಗ್ಯದಿಂದ ಬಳಲುತ್ತಿರುವ ಮಹಿಳಾ ಬಂದಿಗಳಿಗೆ ಸೂಕ್ತ ಆಪ್ತಸಮಾಲೋಚನೆ ಮತ್ತು ವೈದ್ಯಕೀಯ ಚಿಕಿತ್ಸೆ ದೊರೆಯಬೇಕು. ಮಹಿಳೆಯರು ಯಾವ ಸಂದರ್ಭಗಳಲ್ಲಿ ಯಾವ ರೀತಿಯ ಸಂಕಷ್ಟಗಳಿಗೆ ಒಳಗಾಗುತ್ತಾರೆ ಎಂಬುದರ ಬಗ್ಗೆ ಕಾರಾಗೃಹದ ಸಿಬ್ಬಂದಿಗಳಿಗೆ ತಿಳುವಳಿಕೆ ನೀಡಬೇಕು. ಕಾರಾಗೃಹ ಸಿಬ್ಬಂದಿಯವರಲ್ಲಿ ಈ ತಿಳುವಳಿಕೆ ಇದ್ದಲ್ಲಿ ಸಾಧಾರಣ ಮಾನಸಿಕ ಸಮಸ್ಯೆಗಳನ್ನು ಗ್ರಹಿಸಿ ಅದಕ್ಕೆ ಮಾನಸಿಕ ವೈದ್ಯರ/ತಜ್ಞರ ಮಾರ್ಗದರ್ಶನ ಪಡೆಯಲು ಸಹಕಾರಿಯಾಗುತ್ತದೆ.

ಮಾನಸಿಕ ಆರೋಗ್ಯ ತಜ್ಞರು ಅವರಿಗೆ ಬರುವ ಪ್ರಕರಣಗಳನ್ನು ಅರ್ಥಮಾಡಿಕೊಂಡು, ವಿವೇಚನೆಯಿಂದ ಕಾರ್ಯನಿರ್ವಹಿಸಬೇಕು.[69] ಮಾನಸಿಕ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಮಾನಸಿಕ ತಜ್ಞರು ತೆಗೆದುಕೊಳ್ಳುವ ನಿರ್ಧಾರಗಳನ್ನು ಕಾರಾಗೃಹ ಸಿಬ್ಬಂದಿವರ್ಗದವರು ಕಡೆಗಣಿಸಬಾರದು ಅಥವಾ ಅದನ್ನು ತಿರಸ್ಕರಿಸಬಾರದು[70] ಮಾನಸಿಕ ಕಾಯಿಲೆಗಳಿಗೆ ಚಿಕಿತ್ಸೆ ಅಗತ್ಯವಿರುವ ಮಹಿಳಾ ಬಂದಿಗಳನ್ನು ಕಾರಾಗೃಹಕ್ಕೆ ಸೇರಿಸಿಕೊಳ್ಳಬಾರದು. ಅಂತಹವರನ್ನು ಮಾನಸಿಕ ಆರೋಗ್ಯ ಆಸ್ಪತ್ರೆಗಳಲ್ಲಿ ಮಹಿಳೆಯರ ಪ್ರತ್ಯೇಕ ಸ್ಥಳ ಅಥವಾ ಕೊಠಡಿಯಲ್ಲಿ ಅಥವಾ ಇತರೆ ಮಾನಸಿಕ ಆರೋಗ್ಯ ಘಟಕದಲ್ಲಿ ಮಹಿಳಾ ವೈದ್ಯಕೀಯ ಅಧಿಕಾರಿಯ ಮೇಲ್ವಿಚಾರಣೆಯಲ್ಲಿ ಇಡಬೇಕು.[73]

ಕಾರಾಗೃಹಗಳ ನೀತಿ, ನಿಯಮ ರಚಿಸುವ ಸಂದರ್ಭದಲ್ಲಿ ಸಿಬ್ಬಂದಿಯು ಆಘಾತಕ್ಕೊಳಗಾಗುವಿಕೆಗೆ ಸಂಬಂಧಿಸಿದ ಗುಣಮಟ್ಟದ ತತ್ವಗಳನ್ನು ಅನುಸರಿಸಬೇಕು.[72] ಈ ವಿಷಯಕ್ಕೆ ಸಂಬಂಧಿಸಿದಂತೆ ಗಮನಹರಿಸಬೇಕಾದ ಐದು ಮಾನಕಗಳೆಂದರೆ:–

1. ಸುರಕ್ಷತೆ– ಕಾರಾಗೃಹ ಸಿಬ್ಬಂದಿಯು ಮಹಿಳಾ ಬಂದಿಗಳ ದೈಹಿಕ ಮತ್ತು ಮಾನಸಿಕ ಸುರಕ್ಷತೆಯನ್ನು ಖಾತ್ರಿಪಡಿಸಿಕೊಳ್ಳಬೇಕು.
2. ವಿಶ್ವಾಸಾರ್ಹತೆ– ಕಾರಾಗೃಹ ಸಿಬ್ಬಂದಿಯಿಂದ ಅಪೇಕ್ಷಿಸುವ ನಡವಳಿಗೆ, ಪರಸ್ಪರ ಸಂಬಂಧ ಮತ್ತು ಅಧಿಕಾರ ವ್ಯಾಪ್ತಿ ಖಚಿತವಾಗಿದ್ದು ಅದನ್ನು ಅನುಷ್ಠಾನಗೊಳಿಸಬೇಕು.
3. ಆಯ್ಕೆ– ಮಹಿಳಾ ಬಂದಿಗಳ ಚಿಕಿತ್ಸೆ ಮತ್ತು ಸಹಾಯ ಒಳಗೊಂಡಂತೆ ಅವರ ಅಗತ್ಯ ಮತ್ತು ಪ್ರಾಶಸ್ತ್ಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.
4. ಸಹಭಾಗಿತ್ವ– ಕಾರಾಗೃಹದಲ್ಲಿರುವ ಮಹಿಳೆಯರ ಅನಿಸಿಕೆಗಳನ್ನು ಸ್ವಾಗತಿಸಿ ಅದನ್ನು ಪ್ರೋತ್ಸಾಹಿಸಿ ಅದಕ್ಕೆ ಸೂಕ್ತ ಆದ್ಯತೆ ನೀಡುವುದು.
5. ಸಬಲೀಕರಣ– ಮಹಿಳೆಯರನ್ನು ಸಬಲೀಕರಿಸುವ ಹಾಗೂ ಅವರು ಯಶಸ್ವಿಯಾಗಿ ಸಮುದಾಯಕ್ಕೆ ಮರಳುವ ಉದ್ದೇಶದಿಂದ ಅವರಲ್ಲಿರುವ ಸಾಮರ್ಥ್ಯವನ್ನು ಗುರುತಿಸುವುದು ಹಾಗು ಕೌಶಲ್ಯವನ್ನು ವೃದ್ಧಿಪಡಿಸುವುದು.

## ಸಿ. ಆತ್ಮಹತ್ಯೆ ಮತ್ತು ಸ್ವಹಾನಿ ತಡೆಗಟ್ಟುವುದು

ಕಾರಾಗೃಹ ಇಲಾಖೆಯು ಮಾನಸಿಕ ಆರೋಗ್ಯ ಸೇವೆ ಮತ್ತು ಸಮಾಜ ಕಲ್ಯಾಣ ಸೇವೆಗಳೊಡನೆ ಕೂಡಿ ಮಹಿಳಾ ಬಂದಿಗಳಲ್ಲಿ ಆತ್ಯಹತ್ಯೆ ಮತ್ತು ಸ್ವಹಾನಿ ಮನೋಭಾವವನ್ನು ತಡೆಗಟ್ಟಲು ವಿವಿಧ ಕ್ರಮಗಳನ್ನು ಕೈಗೊಳ್ಳಬೇಕು. ಈ ವಿಷಯದಲ್ಲಿ ಸೂಕ್ಷ್ಮ ಮಹಿಳಾ ಬಂದಿಗಳಿಗೆ ವಿಶೇಷ ಸಹಾಯ ನೀಡಬೇಕು.[73]

## ಡಿ. ರೋಗನಿವಾರಕ ಸೇವೆಗಳು

ಮಹಿಳಾ ಬಂದಿಗಳಿಗೆ ರೋಗನಿವಾರಕದ ಬಗ್ಗೆ ಶಿಕ್ಷಣ ಮತ್ತು ಮಾಹಿತಿ ನೀಡುವ ವ್ಯವಸ್ಥೆಯನ್ನು ಮಾಡಬೇಕು. ವಿಶೇಷವಾಗಿ ಎಚ್‌ಐವಿ, ಲೈಂಗಿಕ ಸಂಪರ್ಕದಿಂದ ಉಂಟಾಗುವ ಕಾಯಿಲೆ ಹಾಗೂ ರಕ್ತಸಂಬಂಧಿ ಕಾಯಿಲೆಗಳ ಬಗ್ಗೆ ಮತ್ತು ಲಿಂಗಾಧಾರಿತ

ಆರೋಗ್ಯದ ಸ್ಥಿತಿಗತಿಗಳ ಬಗ್ಗೆ ಮಹಿಳಾ ಬಂದಿಗಳಲ್ಲಿ ಅರಿವನ್ನು ಉಂಟುಮಾಡಬೇಕು. ವಿಶೇಷವಾಗಿ ಮಹಿಳೆಯರಿಗೆ ಸಂಬಂಧಪಟ್ಟಂತೆ ಪಾಪನಿಕೋಲೌ [Papanicolaou] ಪರೀಕ್ಷೆಗಳು, ಸ್ತನ ಮತ್ತು ಸ್ತ್ರೀರೋಗ, ಕ್ಯಾನ್ಸರ್ ಸ್ಕ್ರೀನಿಂಗ್ ಇತ್ಯಾದಿಗಳನ್ನು ಸಮುದಾಯದಲ್ಲಿರುವ ಸಮವಯಸ್ಕ ಮಹಿಳೆಯರಿಗೆ ದೊರೆಯುವ ರೀತಿಯಲ್ಲಿಯೇ ಮಹಿಳಾ ಬಂದಿಗಳಿಗೂ ನೀಡಬೇಕು.[74] ಈ ಉದ್ದೇಶಕ್ಕಾಗಿ ಕಾರಾಗೃಹದ ಅಧಿಕಾರಿಗಳು ಸ್ಥಳೀಯ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳೊಡನೆ ಸಹಭಾಗಿತ್ವಕ್ಕೆ ಪ್ರಯತ್ನಿಸಬೇಕು.

# V. ಕಾನೂನಿನ ಪ್ರಾತಿನಿಧಿತ್ವ

### ಎ. ಕಾನೂನಿನ ಅರಿವು



ಕಾನೂನಿನ ವಿಷಯಗಳಲ್ಲಿ ಅರಿವು ಉಂಟುಮಾಡುವ ಉದ್ದೇಶದಿಂದ ಕಾರಾಗೃಹದ ಅಧಿಕಾರಿಗಳು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದೊಂದಿಗೆ ಕನಿಷ್ಠ ತಿಂಗಳಿಗೊಮ್ಮೆ ಶಿಬಿರವನ್ನು ನಡೆಸಬೇಕು. ಬಂದಿಗಳಿಗೆ ಅವರ ಹಕ್ಕುಗಳು, ನ್ಯಾಯಾಲಯದ ಕಾರ್ಯಕಲಾಪ ಮತ್ತು ಲಭ್ಯವಿರುವ ಉಚಿತ ಕಾನೂನು ಸೇವೆಗಳನ್ನು ಪಡೆಯಲು ಅನುಸರಿಸಬೇಕಾದ ವಿಧಾನ, ಅರ್ಜಿ ಸಲ್ಲಿಸುವಿಕೆ ಇತ್ಯಾದಿಗಳ ಬಗ್ಗೆ ಈ ಶಿಬಿರಗಳಲ್ಲಿ ತಿಳಿಸಿಕೊಡಬೇಕು.[75] ಜೊತೆಗೆ ಈ ಶಿಬಿರದಲ್ಲಿ ಪೆರೋಲ್, ಫರ್ಲೋ ಮತ್ತು ಅವಧಿ ಮುನ್ನ ಬಿಡುಗಡೆಯ ಬಗ್ಗೆಯೂ ಮಾಹಿತಿಯನ್ನು ನೀಡಬೇಕು. ಇದಕ್ಕೂ ಹೆಚ್ಚುವರಿಯಾಗಿ ಹದಿನೈದು ದಿನಗಳಿಗೊಮ್ಮೆ ಅಥವಾ ವಾರಕ್ಕೊಮ್ಮೆ ನಾರಿ ಬಂದಿ ಸಭೆ [ಮಹಿಳಾ ಬಂದಿಗಳ ಪರಿಷತ್ತು] ಗಳಲ್ಲಿ ಸಹ ಮಹಿಳೆಯರು ಕಾರಾಗೃಹ ವಾಸಕ್ಕೆ ಸಂಬಂಧಪಟ್ಟ ನಿಯಮಗಳ ಬಗ್ಗೆ ತಿಳಿದುಕೊಳ್ಳಬಹುದು.[76]

### ಬಿ. ಮಹಿಳೆಯರಿಗೆ ಮೀಸಲಾದ ಆವರಣದಲ್ಲಿ ಕಾನೂನು ನೆರವು ಶಿಬಿರಗಳು

ಕಾರಾಗೃಹದಲ್ಲಿ ಮಹಿಳೆಯರ ಆವರಣದಲ್ಲಿ ಪ್ರತ್ಯೇಕ ಕಾನೂನು ನೆರವು ಶಿಬಿರಗಳನ್ನು ನಡೆಸಬೇಕು. ನಿಯೋಜಿತ ಸ್ಥಳದಲ್ಲಿ ನಡೆಸುವ ಈ ಶಿಬಿರಗಳಲ್ಲಿ ಮಹಿಳಾ ಬಂದಿಗಳು ಕಾನೂನು ನೆರವು ನೀಡುವ ವಕೀಲರು ಮತ್ತು ಇತರೆ ಕಾನೂನು ಕಾರ್ಯಕರ್ತರಿಂದ ತಮ್ಮ ದೂರು/ಪ್ರಕರಣ/ಕಾನೂನು ಸಮಸ್ಯೆ ಬಗ್ಗೆ ಸಲಹೆ, ಸಹಕಾರ ಪಡೆಯಬಹುದು. ಅವರ ಸಹಾಯಕ್ಕೆ ವಕೀಲರು ಇಲ್ಲದ ಸಂದರ್ಭದಲ್ಲಿ ರಾಜ್ಯ ಸರ್ಕಾರದ ವೆಚ್ಚದಲ್ಲಿ ವಕೀಲರನ್ನು ನೇಮಕ ಮಾಡಬೇಕು. ಕಾನೂನು ನೆರವು ಶಿಬಿರಗಳನ್ನು ಮಹಿಳೆಯರಿಗೆ ಮೀಸಲಾದ ಆವರಣದಲ್ಲಿ ವಾರಕ್ಕೆ ಕನಿಷ್ಠ ಎರಡು ಬಾರಿ ಶಿಬಿರಗಳನ್ನು ನಡೆಸತಕ್ಕದ್ದು.

### ಸಿ. ಕಾಲಕಾಲಕ್ಕೆ ಪ್ರಕರಣಗಳ ಪುನರಾವಲೋಕನ

ಯಾವುದೇ ಮಹಿಳಾ ಬಂದಿ, ವಿಶೇಷವಾಗಿ ಗಂಭೀರ ಆರೋಪವಲ್ಲದ ಮತ್ತು ಪ್ರಥಮವಾಗಿ ಅಪರಾಧ ಎಸಗಿರುವ ವಿಚಾರಣಾಧೀನ ಬಂದಿಗಳು ಅನಾವಶ್ಯಕವಾಗಿ ಕಾರಾಗೃಹದಲ್ಲಿ ಇರಬಾರದೆಂಬ ಉದ್ದೇಶದಿಂದ ಅಂತಹವರ ಪ್ರಕರಣಗಳನ್ನು ಜಿಲ್ಲಾ ವಿಚಾರಣಾ ಬಂದಿಗಳ ಪುನರ್‌ಪರಿಶೀಲನಾ ಸಮಿತಿ [District Under-Trial Review Committee] ಯು ಪುನರಾವಲೋಕನ ಮಾಡಬೇಕು. ಸದರಿ ಸಮಿತಿಯು ತನ್ನ ತ್ರೈಮಾಸಿಕ ಸಭೆಯಲ್ಲಿ ಅಂತಹ ಬಂದಿಗಳನ್ನು Cr.P.C ಸೆಕ್ಷನ್ 437ರ ಅಡಿಯಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಲು [ಅಧಿ–ವಿಚಾರಣಾ ನ್ಯಾಯಾಲಯ] ಟ್ರೈಯಲ್ ಕೋರ್ಟ್‌ಗೆ ಶಿಫಾರಸ್ಸು ಮಾಡಬೇಕು. ಸುಪ್ರೀಂ ಕೋರ್ಟ್, ಆರ್. ಡಿ. ಉಪಾಧ್ಯಾಯ v/s ಸ್ಟೇಟ್ ಆಫ್ ಆಂಧ್ರಪ್ರದೇಶ್ ಮತ್ತು ಇತರರು [ಎಐಆರ್ 2006 ಎಸ್‌ಸಿ 1946] ಪ್ರಕರಣದಲ್ಲಿ ನೀಡಿರುವ ಸೂಚನೆಯಂತೆ ಸಮಿತಿಯು ಇತರೆ ಶಿಫಾರಸ್ಸುಗಳನ್ನು ಮಾಡಬಹುದು.

# VI. ವಿಶೇಷ ಗುಂಪುಗಳ ಅಗತ್ಯತೆಗಳು

### ಎ. ಗರ್ಭಿಣಿ ಮತ್ತು ಹಾಲುಣಿಸುವ ಮಹಿಳೆಯರು

ಗರ್ಭಿಣಿಯನ್ನು ಕಾರಾಗೃಹಕ್ಕೆ ಕಳುಹಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಕಾರಾಗೃಹದ ಮುಖ್ಯಸ್ಥರಿಗೆ ಸೂಕ್ತ ಪ್ರಸವಪೂರ್ವ ಮತ್ತು ಪ್ರಸವದ ನಂತರ ಮಹಿಳೆ ಹಾಗೂ ಮಗುವಿಗೆ ಅಗತ್ಯವಾದ ಕನಿಷ್ಠ ಸೌಕರ್ಯಗಳನ್ನು ಒದಗಿಸುವಂತೆ ಆದೇಶಗಳನ್ನು ನೀಡಬೇಕು.[79] ಈ ಕಾರಣಕ್ಕಾಗಿ ಮಹಿಳಾ ಬಂದಿಯನ್ನು ಸರ್ಕಾರಿ ಆಸ್ಪತ್ರೆಗೆ ಅಥವಾ ಸೌಕರ್ಯವಿರುವಂತಹ ಮತ್ತೊಂದು ಕಾರಾಗೃಹಕ್ಕೆ ವರ್ಗಾಯಿಸುವ ಅಗತ್ಯ ಇರಬಹುದು.

ಪ್ರಸವಪೂರ್ವ ಮತ್ತು ಪ್ರಸವ ನಂತರದ ಪಾಲನೆಯನ್ನು ನುರಿತ ವೈದ್ಯಕೀಯ ಅಧಿಕಾರಿಯ ಸೂಚನೆಯ ಮೇರೆಗೆ ನೀಡತಕ್ಕದ್ದು.[80] ಗರ್ಭಿಣಿ ಮತ್ತು ಹಾಲುಣಿಸುತ್ತಿರುವ ಬಂದಿಗೆ ಅಗತ್ಯಕ್ಕೆ ತಕ್ಕಂತೆ, ಸರಿಯಾದ ಸಮಯದಲ್ಲಿ ಆಹಾರ, ಪೌಷ್ಠಿಕಾಂಶ, ಸ್ವಾಸ್ಥ್ಯ ಪರಿಸರ ಮತ್ತು ನಿಯಮಿತ ವ್ಯಾಯಾಮಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕು.[81] ಅವರಿಗೆ ವಿಶೇಷ ಪಥ್ಯಾಹಾರ ಸೂಚಿಸಬೇಕು.[82] ಗರ್ಭಿಣಿ ಮತ್ತು ಹಾಲುಣಿಸುವವರಿಗೆ ಹೆಚ್ಚಿನ ಪ್ರೋಟೀನ್ ಮತ್ತು ಮಿನರಲ್ ಅವಶ್ಯಕತೆ ಇರುತ್ತದೆ. ಹೆಚ್ಚುವರಿ ಪ್ರೋಟೀನ್‌ನನ್ನು ಸ್ವಲ್ಪ ಪ್ರಮಾಣದ ಸಿರಿಧಾನ್ಯದ ಬದಲಾಗಿ ಹೆಚ್ಚು ಹಾಲು, ಮೀನು, ಮಾಂಸ ಮತ್ತು ಮೊಟ್ಟೆ, ಶಾಕಾಹಾರಿಗಳಾಗಿದ್ದಲ್ಲಿ ಹೆಚ್ಚು ಹಾಲು ಮತ್ತು ಹಾಲಿನ ಉತ್ಪನ್ನಗಳ ಮೂಲಕ ನೀಡಬೇಕು. ಇದರಿಂದ ಅವಶ್ಯಕವಾದ ಹೆಚ್ಚಿನ ಖನಿಜಾಂಶಗಳು ದೊರೆಯುತ್ತದೆ.[83]

ಪ್ರಸವ ವೇದನೆ, ಪ್ರಸವ ಮತ್ತು ಶಿಶು ಜನಿಸಿದ ತಕ್ಷಣ ಮಹಿಳೆಯರನ್ನು ನಿರ್ಬಂಧಿಸುವಂತಹ ಹಾಗೂ ತಡೆಗಟ್ಟುವ ಯಾವುದೇ ಉಪಕರಣವನ್ನು ಉಪಯೋಗಿಸತಕ್ಕದಲ್ಲ.[84] ಗರ್ಭಿಣಿ ಸ್ತ್ರೀಯರನ್ನು ಒಂಟಿಯಾಗಿ ಬಂಧನದಲ್ಲಿಡುವ ಅಥವಾ ಪ್ರತ್ಯೇಕಿಸುವ ಶಿಕ್ಷೆಗೆ ಗುರಿಪಡಿಸಬಾರದು.[85]

**ಶಿಶು ಜನನ:** ಸಾಧ್ಯವಾದಷ್ಟು ಮಟ್ಟಿಗೆ ಬಂದಿಯನ್ನು ತಾತ್ಕಾಲಿಕವಾಗಿ ಬಿಡುಗಡೆ ಮಾಡಿ ಕಾರಾಗೃಹದಲ್ಲಿ ಜನ್ಮ ನೀಡುವುದನ್ನು ತಪ್ಪಿಸಬೇಕು.[86] ಒಂದು ವೇಳೆ ಶಿಶು ಕಾರಾಗೃಹದಲ್ಲೇ ಹುಟ್ಟಿದರೆ, ಆ ಮಗುವಿನ ಜನನ ಪ್ರಮಾಣ ಪತ್ರದಲ್ಲಿ ಈ ವಿಷಯವನ್ನು ಉಲ್ಲೇಖಿಸಬಾರದು.[87] ಸಾಧ್ಯವಾದಷ್ಟು ಮಟ್ಟಿಗೆ, ಪರಿಸ್ಥಿತಿಗೆ ಅನುಗುಣವಾಗಿ ಮಗುವಿಗೆ ಮಾಡಬೇಕಾದ ಧಾರ್ಮಿಕ ವಿಧಿವಿಧಾನ–ಶಾಸ್ತ್ರಗಳನ್ನು [ನಾಮಕರಣ ಇತ್ಯಾದಿ] ನೆರವೇರಿಸಲು ತಾಯಿಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ಒದಗಿಸಬೇಕು.[88]

### ಬಿ. ಕಾರಾಗೃಹದಲ್ಲಿ ಶಿಶುಪಾಲನೆ



ಮಕ್ಕಳಿಗೆ ಆರು ವರ್ಷ ತುಂಬುವ ತನಕ ತಾಯಂದಿರು ತಮ್ಮೊಡನೆ ತಮ್ಮ ಮಕ್ಕಳನ್ನು ಕಾರಾಗೃಹದಲ್ಲಿ ಇಟ್ಟುಕೊಳ್ಳಲು ಕಾರಾಗೃಹದ ಅಧಿಕಾರಿಗಳು ಅನುಮತಿಯನ್ನು ನೀಡಬೇಕು.[89] ಇನ್ಯಾವುದೇ ವ್ಯವಸ್ಥೆ ಮಾಡಲು ಆಗದಿದ್ದಲ್ಲಿ ಇದು ಅನ್ವಯಿಸುತ್ತದೆ.[90] ಕಾರಾಗೃಹದಲ್ಲಿ ಹುಟ್ಟದ ಮಗುವಾಗಿದ್ದಲ್ಲಿ ಈ ನಿಯಮಕ್ಕಾಗಿ, ಆ ಮಗುವಿನ ವಯಸ್ಸನ್ನು ವೈದ್ಯಾಧಿಕಾರಿಗಳು ನಿರ್ಧರಿಸುತ್ತಾರೆ.[91] ಮಹಿಳಾ ಬಂದಿಗಳ ಜೊತೆ ಕಾರಾಗೃಹಕ್ಕೆ ಬರುವ ಮಕ್ಕಳನ್ನು ವಿಚಾರಣಾಧೀನ/ಅಪರಾಧಿ ಎಂದು ಪರಿಗಣಿಸುವಂತಿಲ್ಲ.

ಮಕ್ಕಳ ಪಥ್ಯಾಹಾರದ ಪ್ರಮಾಣವನ್ನು ಅವರ ಬೆಳವಣಿಗೆಗೆ ಅನುಗುಣವಾಗಿ ಕ್ಯಾಲೋರಿಫಿಕ್ ಅಗತ್ಯತೆಗಳಿಗೆ ತಕ್ಕಂತೆ ಹಾಗೂ ವೈದ್ಯಕೀಯ ನಿಯಮ ಮತ್ತು ಹವಾಮಾನದ ಪರಿಸ್ಥಿತಿಗೆ ತಕ್ಕಂತೆ ನೀಡಬೇಕು. ತನ್ನ ಮಗುವಿಗೆ ಆಹಾರ ನೀಡಲು ಪ್ರತಿಯೊಬ್ಬ ತಾಯಿ ಬಂದಿಗೆ ಸೂಕ್ತ ಅಳತೆಯ ಮತ್ತು ಲೋಹದ ಪಾತ್ರೆಗಳನ್ನು ಒದಗಿಸಬೇಕು.[92] ಮಕ್ಕಳಿರುವ ತಾಯಿ ಬಂದಿಗೆ ಆಹಾರ ಮತ್ತು ಹಾಲು ಬಿಸಿ ಮಾಡಲು ವಿಶೇಷ ವ್ಯವಸ್ಥೆಯನ್ನು ಮಾಡಬೇಕು.[93] ಆಹಾರ ಮತ್ತು ಹಾಲು ಕೆಡದಂತೆ ಸುರಕ್ಷಿತವಾಗಿಡಲು ರೆಫ್ರಿಜರೇಟರ್ ವ್ಯವಸ್ಥೆಯನ್ನು ಮಾಡಬಹುದು. ಮಹಿಳಾ ಬಂದಿಯ ಮಕ್ಕಳಿಗೆ [ಸಮುದಾಯ ಆರೋಗ್ಯ ಸೇವೆಯ ಸಹಕಾರದೊಂದಿಗೆ] ಆರೋಗ್ಯ ಸೌಕರ್ಯಗಳನ್ನು ಒದಗಿಸಬೇಕು. ಮಹಿಳಾ ವೈದ್ಯಾಧಿಕಾರಿಗಳು ಮಕ್ಕಳನ್ನು ನಿಯಮಿತವಾಗಿ ಪರೀಕ್ಷಿಸಿ ಅವರ ದೈಹಿಕ ಬೆಳವಣಿಗೆಯ ಬಗ್ಗೆ ನಿಗಾವಹಿಸಬೇಕು. ಮಕ್ಕಳಿಗೆ ಸೂಕ್ತ ವಯಸ್ಸಿನಲ್ಲಿ ಪೋಲಿಯೋ, ದಢಾರ ಮತ್ತು ಇತರೆ ಕಾಯಿಲೆಗಳನ್ನು ತಡೆಗಟ್ಟಲು ಲಸಿಕೆಗಳನ್ನು ಕೊಡಿಸಬೇಕು. ಮಕ್ಕಳಿಗೆ ಹೆಚ್ಚಿನ ಬಟ್ಟೆ ಮತ್ತು ಪಥ್ಯಾಹಾರದ ಅಗತ್ಯವಿದ್ದಲ್ಲಿ, ವೈದ್ಯಾಧಿಕಾರಿಯ ಲಿಖಿತ ಶಿಫಾರಸ್ಸಿನ ಮೇಲೆ ಅದನ್ನು ಒದಗಿಸಬಹುದು.[94]

ಒಂದು ವೇಳೆ ಮಕ್ಕಳಿರುವ ಮಹಿಳಾ ಬಂದಿ ಅಸ್ವಸ್ಥಳಾದಲ್ಲಿ, ಕಾರಾಗೃಹ ಸಿಬ್ಬಂದಿಗಳು ಆಕೆಯ ಚಿಕಿತ್ಸೆಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕು.[95]

ಮಗುವಿಗೆ ಆರು ವರ್ಷ ತುಂಬಿದ ನಂತರ ಕಾರಾಗೃಹದ ಅಧೀಕ್ಷಕರು ಈ ವಿಷಯವನ್ನು ಸಮಾಜ ಕಲ್ಯಾಣ ನಿರ್ದೇಶನಾಲಯ, ಮಕ್ಕಳ ಹಕ್ಕುಗಳ ಇಲಾಖೆ, ಸಂಬಂಧಪಟ್ಟ ಮಕ್ಕಳ ಕಲ್ಯಾಣ ಸಮಿತಿ [ಸಿಡಬ್ಲ್ಯುಸಿ] ಅಥವಾ ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕಕ್ಕೆ ತಿಳಿಸಬೇಕು. ತಾಯಿಯು ಕಾರಾಗೃಹದಿಂದ ಬಿಡುಗಡೆಯಾಗುವವರೆಗೂ ಅಥವಾ ತನ್ನ ಜೀವನೋಪಾಯಕ್ಕೆ ಹಣಗಳಿಸುವವರೆಗೂ ಮಗುವನ್ನು ಒಂದು ನೋಂದಾಯಿತ ಸಂಸ್ಥೆಯ ಆಶ್ರಯದಲ್ಲಿರಿಸಬೇಕು.[96] ಈ ಸಂಸ್ಥೆಗಳಲ್ಲಿ ಮಕ್ಕಳು ತಮ್ಮ ತಾಯಿಯನ್ನು ಕನಿಷ್ಠ ವಾರಕ್ಕೊಮ್ಮೆ ಭೇಟಿ ಮಾಡುವ ಅವಕಾಶವನ್ನು ಅಧೀಕ್ಷಕರು ಕಲ್ಪಿಸಿಕೊಡಬೇಕು.[97]

ಕಾರಾಗೃಹದಲ್ಲಿ ಮಹಿಳೆಯರನ್ನು ಇಟ್ಟಿರುವ ಆವರಣದಲ್ಲಿ ಮಕ್ಕಳ ಪಾಲನಾ ಗೃಹ [ಕ್ರೆಷ್] ಮತ್ತು ನರ್ಸರಿ ಸೌಲಭ್ಯವಿದ್ದು, ಮೂರು ವರ್ಷಕ್ಕಿಂತ ಕಿರಿಯ ಮಕ್ಕಳನ್ನು ಪಾಲನಾ ಗೃಹದಲ್ಲಿ ಬಿಡುವ ವ್ಯವಸ್ಥೆಯನ್ನು ಮಾಡಬೇಕು. ಮೂರರಿಂದ ಆರು ವರ್ಷದ ಮಕ್ಕಳನ್ನು ನರ್ಸರಿಗೆ ಕಳುಹಿಸಬೇಕು[98]

ಈ ವಯೋಮಿತಿಯ ಮಕ್ಕಳಿದ್ದು ಅಥವಾ ಅವರು ಮಕ್ಕಳ ಪಾಲನಾ ಗೃಹ ಸ್ಥಾಪಿಸುವ ಅಗತ್ಯವಿಲ್ಲದಷ್ಟು ಕಡಿಮೆ ಅವಧಿ ಕಾರಾಗೃಹದಲ್ಲಿ ಕಳೆಯಬೇಕಾದಲ್ಲಿ ಸ್ಥಳೀಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಥವಾ ಸಮಾಜ ಕಲ್ಯಾಣ ಇಲಾಖೆಯ ನೆರವನ್ನು ಪಡೆದು ಮಕ್ಕಳನ್ನು ಸ್ಥಳೀಯ ಅಂಗನವಾಡಿ ಕೇಂದ್ರದ ಸೌಲಭ್ಯವನ್ನು ಒದಗಿಸಬೇಕು.

### ಸಿ. ವಿದೇಶಿ ಪೌರರು/ನಾಗರೀಕರು

ಮಹಿಳಾ ಬಂದಿಗಳು ವಿದೇಶಿ ಪೌರರಾಗಿದ್ದಲ್ಲಿ ಅವರು ತಮ್ಮ ರಾಷ್ಟ್ರದ ಡಿಪ್ಲೊಮೇಟಿಕ್ ಮತ್ತು ಕಾನ್ಸುಲರ್ಸ್ ಪ್ರತಿನಿಧಿಗಳನ್ನು ಸಂಪರ್ಕಿಸಲು ಅವಕಾಶ ಮಾಡಿಕೊಡಬೇಕು.[99] ನಿರಾಶ್ರಿತರಾಗಿದ್ದಲ್ಲಿ ಅವರ ಯೋಗಕ್ಷೇಮದ ಜವಾಬ್ದಾರಿ ಹೊತ್ತಿರುವ ಸಂಸ್ಥೆಯೊಂದಿಗೆ [ಉದಾ: ವಿಶ್ವಸಂಸ್ಥೆಯ ನಿರಾಶ್ರಿತರ ಆಯುಕ್ತರು– ಯುಎನ್‌ಎಚ್‌ಸಿಆರ್] ಸಂಪರ್ಕಿಸಲು ಇದೇ ರೀತಿಯ ಅವಕಾಶವನ್ನು ಮಾಡಿಕೊಡಬೇಕು.

# VII. ಬಿಡುಗಡೆ ಮತ್ತು ಪುನರ್‌ವಸತಿ



ಮಹಿಳಾ ಬಂದಿಗಳು ಬಿಡುಗಡೆಯಾದ ನಂತರ ಸಮಾಜದ ಮುಖ್ಯವಾಹಿನಿಯೊಂದಿಗೆ ಪುನಃ ಸೇರಿಕೊಳ್ಳುವ ವಿಷಯದಲ್ಲಿ ಎದುರಿಸಬೇಕಾದ ಸಮಸ್ಯೆಗಳ ನಿರ್ವಹಣೆಯನ್ನು ಅವರಿಗೆ ಕಲಿಸುವ ಉದ್ದೇಶಕ್ಕಾಗಿ ಕಾರಾಗೃಹದ ಸಿಬ್ಬಂದಿಗಳಿಗೆ ಸೂಕ್ತ ತರಬೇತಿಯನ್ನು ನೀಡಿರಬೇಕು. ಮಹಿಳೆಯರು ಕಾರಾಗೃಹಕ್ಕೆ ಬರುವುದರ ಕಾರಣ ಮತ್ತು ಪರಿಸ್ಥಿತಿಗಳಿಗೂ, ಪುರುಷರು ಕಾರಾಗೃಹಕ್ಕೆ ಬರುವುದರ ಕಾರಣ ಮತ್ತು ಪರಿಸ್ಥಿತಿಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿದ್ದು ಸಿಬ್ಬಂದಿವರ್ಗವರಿಗೆ ಅದರ ಕುರಿತಾದ ಅರಿವು ಇರಬೇಕು. ಆದ್ದರಿಂದ ಮಹಿಳಾ ಬಂದಿಗಳಿಗೆ ಸೂಕ್ತ ಸೌಲಭ್ಯ ಮತ್ತು ಸೇವೆಗಳನ್ನು ಅವರ ಕಾರಾಗೃಹವಾಸದ ಅವಧಿಯಲ್ಲಿಯೇ ನೀಡಬೇಕು. ಅವರು ಆರ್ಥಿಕವಾಗಿ ಸ್ವಾವಲಂಬಿಯಾಗಿ ಸಮಾಜದಲ್ಲಿ ಗೌರವಯುತವಾಗಿ ಬದುಕುವ ಮತ್ತು ಅವರಿಗೆ ನೌಕರಿ ದೊರೆಯುವ ಅವಕಾಶ ಹೆಚ್ಚಿಸುವ ಶೈಕ್ಷಣಿಕ ಮತ್ತು ಕೌಶಲ್ಯಾಧಾರಿತ ತರಬೇತಿಯನ್ನು ನೀಡಬೇಕು.[100]

ವಿವಿಧ ರೀತಿಯ ಮಹಿಳಾ ಬಂದಿಗಳು ಇರುವುದರಿಂದ ಅವರಿಗೆ ಬಿಡುಗಡೆಗೊಳ್ಳುವ ಸಂದರ್ಭದಲ್ಲಿ ಮತ್ತು ಬಿಡುಗಡೆಯ ನಂತರ ನೀಡುವ ಸಹಾಯವು ಕೂಡ ವಿಭಿನ್ನವಾಗಿರುತ್ತದೆ. ಕಾರಾಗೃಹದ ಅಧಿಕಾರಿಗಳು ಪ್ರತಿಯೊಬ್ಬ ಮಹಿಳಾ ಬಂದಿಯ ಅಗತ್ಯತೆಗಳನ್ನು ಅರ್ಥಮಾಡಿಕೊಂಡು ಅವರ ಪುನರ್‌ವಸತಿ ಮತ್ತು ಅವರು ಸಮಾಜದ ಮುಖ್ಯವಾಹಿನಿಯಲ್ಲಿ ಸೇರುವುದಕ್ಕೆ ಅನುಕೂಲವಾಗುವಂತಹ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ಪ್ರತಿಯೊಬ್ಬ ಮಹಿಳಾ ಬಂದಿಯ ಅಗತ್ಯತೆಗಳನ್ನು ಅರ್ಥಮಾಡಿಕೊಂಡು ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕಾರಾಗೃಹ ಸಿಬ್ಬಂದಿವರ್ಗದವರು, ಜಿಲ್ಲಾ ಪ್ರೊಬೇಷನರಿ ಅಥವಾ ಕಾರಾಗೃಹ ಕಲ್ಯಾಣ ಅಧಿಕಾರಿಗಳನ್ನು ಬಳಸಿಕೊಂಡು ಮಹಿಳಾ ಬಂದಿಗಳ ಬಿಡುಗಡೆಯವರೆಗೂ ಅದನ್ನು ಆಚರಣೆಗೆ ತರಬೇಕು.

## ಎ. ಶೈಕ್ಷಣಿಕ ಮತ್ತು ಕೌಶಲ್ಯಾಧಾರಿತ ತರಬೇತಿ

ಕಾರಾಗೃಹದಲ್ಲಿರುವ ಸಂದರ್ಭದಲ್ಲಿ ಶಿಕ್ಷಣ ಮತ್ತು ತರಬೇತಿ ಪಡೆದ ಬಂದಿಗಳು ಮತ್ತು ಪಡೆಯುವ ಅವಕಾಶವಿಲ್ಲದಿದ್ದ ಬಂದಿಗಳನ್ನು ಹೋಲಿಸಿದಾಗ, ಶಿಕ್ಷಣ ಮತ್ತು ತರಬೇತಿ ಪಡೆದ ಬಂದಿಗಳು ಮತ್ತೊಮ್ಮೆ ಅಪರಾಧ ಮಾಡುವುದಿಲ್ಲವೆಂಬುದು ಅಂತಾರಾಷ್ಟ್ರೀಯ ಅಧ್ಯಯನಗಳಿಂದ ತಿಳಿದುಬಂದಿದೆ. ಶಿಕ್ಷಣವನ್ನು ಪೂರೈಸಲಾಗದ ಮಹಿಳೆಯರಿಗೆ, ಅವರು ಕಾರಾಗೃಹದಲ್ಲಿರುವವರೆಗೂ ಅವರಿಗೆ ಸೂಕ್ತ ಅವಕಾಶವನ್ನು ಅಧಿಕಾರಿ/ಸಿಬ್ಬಂದಿವರ್ಗದವರು ಮಾಡಿಕೊಡಬೇಕು. ಇದರಿಂದ ಅವರು ಹೊಸ ಅರ್ಹತೆ ಪಡೆಯಲು ಹಾಗೂ ಅದರಿಂದ ಅವರ ಬಿಡುಗಡೆಯ ನಂತರವೂ ಸಹಾಯವಾಗುತ್ತದೆ.

ಮಹಿಳಾ ಬಂದಿಯು ಕಾರಾಗೃಹದಲ್ಲಿರುವಷ್ಟು ದಿನ ಅವರಿಗಾಗಿ ಸೂಕ್ತ ಶೈಕ್ಷಣಿಕ ಕಾರ್ಯಕ್ರಮವನ್ನು ಆಯೋಜಿಸಬೇಕು. ಒಂದು ದಿನಕ್ಕೆ ಕನಿಷ್ಠ ಒಂದು ಗಂಟೆಯ ಅವಧಿಯ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಬೇಕು[101] ಕಾರಾಗೃಹ ಅಧಿಕಾರಿಗಳು ವಯಸ್ಕರ ಶಿಕ್ಷಣ, ಸಾಮಾಜಿಕ ಮತ್ತು ನೈತಿಕ ಶಿಕ್ಷಣ, ಆರೋಗ್ಯ ಶಿಕ್ಷಣ, ಕುಟುಂಬ ಕಲ್ಯಾಣ ಯೋಜನೆ ಮತ್ತು ವಿವಿಧ ಕೌಶಲ್ಯಾಧಾರಿತ ತರಬೇತಿಯನ್ನು ನೀಡಬೇಕು. ಅವರಿಗೆ ಮನರಂಜನಾ ಸೌಲಭ್ಯಗಳನ್ನು ಒದಗಿಸಬೇಕು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ನಡೆಸಬೇಕು[102] ಮತ್ತು ಗ್ರಂಥಾಲಯ ವ್ಯವಸ್ಥೆಯನ್ನು ಕೂಡ ಕಲ್ಪಿಸಿಕೊಡಬೇಕು.[103]

ಮಹಿಳಾ ಬಂದಿಗಳಿಗೆ ನೀಡುವ ಕೌಶಲ್ಯಾಧಾರಿತ ತರಬೇತಿಯು ಅವರ ಆಸಕ್ತಿ ಮತ್ತು ಹಿನ್ನೆಲೆಗೆ ಸೂಕ್ತವಾದದ್ದಾಗಿರಬೇಕು ಮಾತ್ರವಲ್ಲದೆ ಅವರು ಬಿಡುಗಡೆ ಹೊಂದಿದ ನಂತರ ಅವರು ಆರ್ಥಿಕವಾಗಿ ಸ್ವಾವಲಂಬಿಯಾಗಲು ಅದು ಸಹಕಾರಿಯಾಗಿರಬೇಕು. ಆದ್ದರಿಂದ, ಬಂದಿಗಳಿಗೆ ತಮ್ಮ ಬಿಡುಗಡೆಯ ನಂತರ ಉದ್ಯೋಗಾವಕಾಶ ಮತ್ತು ಜೀವನೋಪಾಯಕ್ಕೆ ಅಗತ್ಯವಾದಷ್ಟು ಹಣ ಸಂಪಾದಿಸುವುದಕ್ಕೆ ಸಹಕಾರಿಯಾಗುವಂತಹ ಸೂಕ್ತವಾದ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.[104]

ಅನಾರೋಗ್ಯದ ಕಾರಣವನ್ನು ಹೊರತುಪಡಿಸಿ ಎಲ್ಲಾ ಬಂದಿಗಳು ಯಾವುದಾದರೂ ಕೆಲಸದಲ್ಲಿ ನಿರತರಾಗಿರಬೇಕು. ಅವರು ಮಾಡುವ ಕೆಲಸಕ್ಕೆ ತಕ್ಕಂತೆ ಮಜೂರಿಯನ್ನು [ಕೂಲಿ] ನೀಡಲಾಗುತ್ತದೆ. ಬಂದಿಗಳಲ್ಲಿ ಪುರುಷರು ಮತ್ತು ಮಹಿಳೆಯರು ಎಂಬ ಭೇದಭಾವವನ್ನು ಮಾಡದೆ ಸಮಾನವಾದ ಮಜೂರಿಯನ್ನು ನೀಡಬೇಕು. ಮಜೂರಿಯಲ್ಲಿ ಸ್ವಲ್ಪ ಪ್ರಮಾಣದ ಮೊತ್ತವನ್ನು ಮುರಿದುಕೊಂಡು ಅದನ್ನು ಉಳಿತಾಯ ನಿಧಿಯಲ್ಲಿ ಇಡುವ ವ್ಯವಸ್ಥೆಯನ್ನು ಕೂಡ ಮಾಡಬೇಕು. ಹೀಗೆ ಉಳಿತಾಯ ಮಾಡಿದ ಮೊತ್ತವನ್ನು ಬಂದಿಗಳು ಬಿಡುಗಡೆ ಹೊಂದಿದಾಗ ಅವರಿಗೆ ಹಸ್ತಾಂತರಿಸಬೇಕು. ಬಂದಿಗಳು ತಮ್ಮ ಸಂಪಾದನೆಯಲ್ಲಿ ಕನಿಷ್ಠ ಮೊತ್ತವನ್ನು ಅವರಿಗೆ ಇಷ್ಟವಾದ ವಸ್ತುಗಳನ್ನು ಕೊಳ್ಳುವುದಕ್ಕೆ ಅಥವಾ ತಮ್ಮ ಕುಟುಂಬಕ್ಕೆ ಕಳುಹಿಸುವ ಅವಕಾಶ ಇರಬೇಕು.[105]

## ಬಿ. ಬಿಡುಗಡೆಗೆ ಸಿದ್ಧತೆ ಮತ್ತು ಬಿಡುಗಡೆಯ ನಂತರದ ಸಹಾಯ



ಕಾರಾಗೃಹ ಅಧಿಕಾರಿಗಳು, ಪ್ರೊಬೇಷನ್ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಸ್ಥಳೀಯ ಸಮುದಾಯ ಗುಂಪುಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಸಹಕಾರದಲ್ಲಿ ಬಿಡುಗಡೆ ಪೂರ್ವ ಮತ್ತು ಬಿಡುಗಡೆಯ ನಂತರದ ಪುನರ್ ಒಗ್ಗೂಡುವಿಕೆಯ ಕಾರ್ಯಕ್ರಮವನ್ನು ರೂಪಿಸಬೇಕು. ಈ ಕಾರ್ಯಕ್ರಮವು ಮಹಿಳೆಯರ ಲಿಂಗಾಧಾರಿತ ಅಗತ್ಯತೆಗಳನ್ನು ಗಣನೆಗೆ ತೆಗೆದುಕೊಳ್ಳುವುದಲ್ಲದೇ, ಕಾರಾಗೃಹ ಬಂಧನದಿಂದ ಸ್ವಾತಂತ್ರ್ಯದೆಡೆಗೆ ಸಾಗುವ ಹಂತದಲ್ಲಿ ಮತ್ತು ಕುಟುಂಬಗಳೊಡನೆ ಮತ್ತೊಮ್ಮೆ ಬೆರೆಯುವಾಗ ಎದುರಾಗುವ ಕಳಂಕವನ್ನು/ಸಮಸ್ಯೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಶೀಘ್ರವಾಗಿ ಶಮನ ಮಾಡುವ ಅಂಶಗಳನ್ನು ಮೊದಲು ಗಣನೆಗೆ ತೆಗೆದುಕೊಳ್ಳಬೇಕು.[106]

ಸಮಾಜದೊಡನೆ ಪುನರ್ ಮಿಲನವಾಗುವುದನ್ನು ಸರಳೀಕರಿಸಲು ಕಾರಾಗೃಹ ಇಲಾಖೆಯು ಮಹಿಳಾ ಬಂದಿಗಳಿಗೆ ತೆರೆದ/ಮುಕ್ತ ಕಾರಾಗೃಹಗಳನ್ನು ತೆರೆಯಲು ಪ್ರಯತ್ನಿಸಬೇಕು. ಲಿಂಗ ಸೂಕ್ಷ್ಮತೆಯ ಹಿನ್ನೆಲೆಯಲ್ಲಿ ಮಹಿಳೆಯರನ್ನು ಅವಧಿಗೆ ಮುನ್ನ ಬಿಡುಗಡೆ ಮಾಡುವ ನಿಯಮಗಳನ್ನು ರೂಪಿಸಬೇಕು. ವಿಶೇಷವಾಗಿ, ಆಕೆಯು ಕುಟುಂಬಕ್ಕೆ ವರಮಾನ ತರುವ ಏಕೈಕ ವ್ಯಕ್ತಿಯಾಗಿದ್ದಲ್ಲಿ ಅಥವಾ ಆಕೆಯ ವರಮಾನವನ್ನೇ ಅವಲಂಬಿಸಿರುವವರಿಗೆ ಇನ್ಯಾವುದೇ ವರಮಾನ ಇಲ್ಲದಿದ್ದಾಗ ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಗರ್ಭಿಣಿಯರನ್ನು ಬಿಡುಗಡೆ ಮಾಡುವುದರಿಂದ ಕಾರಾಗೃಹದೊಳಗೆ ಮಗುವಿನ ಜನನವನ್ನು ತಪ್ಪಿಸಬಹುದು.[107] ಪೆರೋಲ್ ಮತ್ತು ಫರ್ಲೋಗಳಿಗೆ ಉದಾರ ನೀತಿಯನ್ನು ಅನುಸರಿಸಬಹುದು. ಅಲ್ಲದೆ ಮಹಿಳೆಯರ ವಿಷಯದಲ್ಲಿ ಅಪರಾಧಿಗಳ ಪರೀಕ್ಷಾ ಅಧಿನಿಯಮ [1958] ವನ್ನು ಯಥೇಚ್ಛವಾಗಿ ಉಪಯೋಗಿಸಿ ಅವರಿಗೆ ಸಾಂಸ್ಥಿಕವಲ್ಲದ ಚಿಕಿತ್ಸಕಾ ಸೌಲಭ್ಯಗಳನ್ನು ನೀಡಬೇಕು.[108] ಕಾರಾಗೃಹ ಅಧಿಕಾರಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದೊಂದಿಗೆ ಸಂಪರ್ಕಿಸಿ ಮಹಿಳಾ ಬಂದಿಗಳ ಪುನರ್‌ವಸತಿಗಾಗಿ ಇರುವ ಸ್ವಾಧಾರ್ ಗೃಹ ಯೋಜನೆಯ109 ಉಪಯೋಗ ಪಡೆದುಕೊಳ್ಳಬೇಕು. ಬಿಡುಗಡೆಹೊಂದಿದ ಬಂದಿಗಳಿಗೆ ಸಹಾಯ ಮಾಡಲು ಕಾರಾಗೃಹ ಅಧಿಕಾರಿಗಳು ಪ್ರತಿಯೊಂದು ಜಿಲ್ಲೆಯಲ್ಲಿರುವಂತಹ ಸ್ವಯಂ ಸೇವಾ ಸಂಸ್ಥೆಗಳನ್ನು ಗುರುತಿಸಬಹುದು.[110] ಈ ಸಂಸ್ಥೆಗಳು ಮಹಿಳಾ ಬಂದಿಗಳು ಮತ್ತು ಅವರ ಕುಟುಂಬದ ಸದಸ್ಯರೊಂದಿಗೆ ಸತತವಾಗಿ ಆಪ್ತಸಮಾಲೋಚನೆ ನಡೆಸಬೇಕು. ಸಮಾಜವು ಮಹಿಳಾ ಬಂದಿಗಳ ಬಗ್ಗೆ ಹೊಂದಿರುವ ಋಣಾತ್ಮಕ ಅಭಿಪ್ರಾಯವನ್ನು ಹೋಗಲಾಡಿಸಲು ಈ ಸಂಸ್ಥೆಗಳು

ಪ್ರಯತ್ನಿಸದಿದ್ದಲ್ಲಿ, ಕಾರಾಗೃಹದಲ್ಲಿರುವ ಮಹಿಳಾ ಬಂದಿಗಳಲ್ಲಿ ಪುನರ್‌ವಸತಿ ಬಗ್ಗೆ ವಿಶ್ವಾಸ ಮೂಡುವುದಿಲ್ಲ.[111]

ತಾನು ವಾಸಮಾಡುವ ಜಿಲ್ಲಾ ಕೇಂದ್ರವಲ್ಲದ ಕಾರಾಗೃಹದಲ್ಲಿರುವ ಪ್ರತಿಯೊಬ್ಬ ಮಹಿಳಾ ಬಂದಿಯನ್ನು ಬಿಡುಗಡೆ ಮಾಡುವ ಹತ್ತು ದಿನ ಮುಂಚಿತವಾಗಿ ಆಕೆಯನ್ನು ತಾನು ವಾಸಿಸುವ ಆಯಾ ಜಿಲ್ಲಾ ಕಾರಾಗೃಹಕ್ಕೆ ವರ್ಗಾಯಿಸಬೇಕು.[112] ಬಿಡುಗಡೆ ಮಾಡುವ ಮುನ್ನ ಮಹಿಳಾ ಬಂದಿಯ ಸಂಬಂಧಿಕರು ಅಥವಾ ಸ್ನೇಹಿತರಿಗೆ ಬಂದಿಯನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಕಾರಾಗೃಹದ ಬಳಿಯಲ್ಲಿರಬೇಕೆಂದು ಹಾಗೂ ಆಕೆಯನ್ನು ಬರಮಾಡಿಕೊಳ್ಳಬೇಕೆಂದು ನೋಟೀಸ್ ನೀಡಬೇಕು. ಒಂದು ವೇಳೆ ಬಿಡುಗಡೆಯ ದಿನ ಬಂದಿಯನ್ನು ಬರಮಾಡಿಕೊಳ್ಳಲು ಯಾವ ವ್ಯಕ್ತಿಯೂ ಬಾರದಿದ್ದಲ್ಲಿ, ಬಂದಿಯನ್ನು ಮಹಿಳಾ ಸಿಬ್ಬಂದಿಯೊಂದಿಗೆ ಮನೆಗೆ ಕಳುಹಿಸಿಕೊಡಬೇಕು. ಕಾರಾಗೃಹದ ಉಪ-ಅಧೀಕ್ಷಕರು ಬಂದಿಯ ವರದಿಯ ಪುಸ್ತಕದಲ್ಲಿ ಆಕೆಯ ಸುರಕ್ಷಿತ ಬಿಡುಗಡೆಗೆ ಮಾಡಿದ ಸಂಪೂರ್ಣವಾದ ವ್ಯವಸ್ಥೆಯನ್ನು ದಾಖಲಿಸಿ ಒಬ್ಬ ಮಹಿಳಾ ಸಿಬ್ಬಂದಿಯೊಂದಿಗೆ ಸದರಿ ಮಹಿಳಾ ಬಂದಿಯನ್ನು ಮನೆಗೆ ಕಳುಹಿಸಿಕೊಟ್ಟಿರುವುದಾಗಿ ನಮೂದಿಸಬೇಕು.[113]

## ಸಿ. ವಿಶೇಷ ಗುಂಪುಗಳಿಗೆ ಪುನರ್‌ವಸತಿ ಕಾರ್ಯಕ್ರಮ

ಯುವ ಮಹಿಳಾ ಬಂದಿಗಳು



ಪುರುಷ ಬಂದಿಗಳಿಗೆ ದೊರೆಯುವಂತಹ ಎಲ್ಲಾ ರೀತಿಯ ಶೈಕ್ಷಣಿಕ ಮತ್ತು ಕೌಶಲ್ಯಾಧಾರಿತ ತರಬೇತಿಯನ್ನು ಯುವ ಮಹಿಳಾ ಬಂದಿಗಳಿಗೆ ಒದಗಿಸಬೇಕು. ಲೈಂಗಿಕ ನಿಂದನೆ ಅಥವಾ ಹಿಂಸೆಯ ಕುರಿತಾದ ಲಿಂಗಾಧಾರಿತ ವಿಶೇಷ ಆಪ್ತಸಮಾಲೋಚನೆಯನ್ನು ಯುವ ಮಹಿಳಾ ಬಂದಿಗಳಿಗೆ ಒದಗಿಸಬೇಕು. ಅಲ್ಲದೆ ಸ್ತ್ರೀರೋಗ ತಜ್ಞರ ಸೌಲಭ್ಯವನ್ನೂ ಸಹ ನೀಡಬೇಕು. ಯುವ ಮಹಿಳಾ ಬಂದಿಗಳ ಪ್ರವೃತ್ತಿಯನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಪ್ರತ್ಯೇಕವಾದ ಆವರಣವನ್ನು ನಿಗದಿಪಡಿಸಬೇಕು. ಅವರ ಅಗತ್ಯತೆಗಳಿಗೆ ಸೂಕ್ತವಾದ ಮತ್ತು ಅವರ ಪುನರ್‌ವಸತಿಗೆ ತಕ್ಕಂತಹ ತರಬೇತಿಯನ್ನು ನೀಡಬೇಕು.[115]

ವಿದೇಶಿ ಬಂದಿಗಳು

ಹೊರದೇಶದ [ವಿದೇಶದ] ಮಹಿಳಾ ಬಂದಿಗಳ ಪುನರ್‌ವಸತಿಗೆ ವಿಶೇಷ ಗಮನ ಅಗತ್ಯ. ಅವರಿಗಾಗಿ ಕೈಗೊಳ್ಳುವ ಯೋಜನೆಗಳು, ಅವರ ವೈಯಕ್ತಿಕ ಸ್ಥಾನಮಾನ ಮತ್ತು ಅವರ ಬಂಧನದ ಹಿಂದಿರುವ ಕಾರಣಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ವಿದೇಶಿಯರನ್ನು ಒಳಗೊಂಡ ಸಮುದಾಯದ ಆಪ್ತಸಮಾಲೋಚಕರ ಸಹಾಯವನ್ನು ಪಡೆಯಬೇಕು. ವಿದ್ಯುನ್ಮಾನ ಕಲಿಕಾ [ಇ-ಲರ್ನಿಂಗ್] ಮಾದರಿಯ ಮೂಲಕ ವಿಷಯಗಳನ್ನು ಕಲಿಸುವ ಸಾಧ್ಯತೆಯನ್ನು ಪರಿಗಣಿಸಬೇಕು.

ಅಲ್ಪಸಂಖ್ಯಾತರ ಗುಂಪಿನ ಬಂದಿಗಳು

ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿಂದ ಬರುವ ಮಹಿಳಾ ಬಂದಿಗಳ ಅಗತ್ಯತೆಗಳು ವಿಭಿನ್ನವಾಗಿದ್ದು ಅವರು ಹಲವು ರೀತಿಯ ಭೇದಭಾವಗಳನ್ನು ಎದುರಿಸುತ್ತಿರುವುದನ್ನು ಕಾರಾಗೃಹದ ಅಧಿಕಾರಿಗಳು ಗುರುತಿಸಬೇಕು. ಆದ್ದರಿಂದ ಕಾರಾಗೃಹದ ಸಿಬ್ಬಂದಿವರ್ಗದವರು ಈ ಅಗತ್ಯತೆಗಳನ್ನು ಪೂರೈಸುವ ಕಾರ್ಯಕ್ರಮಗಳನ್ನು [ಬಿಡುಗಡೆಗೆ ಮುನ್ನ ಮತ್ತು ಬಿಡುಗಡೆಯ ನಂತರ] ಆಯೋಜಿಸಬೇಕು.

ಮಾನಸಿಕ ಆರೋಗ್ಯ ಪಾಲನೆ ಅಗತ್ಯವಿರುವ ಬಂದಿಗಳು

ನುರಿತ ಮಾನಸಿಕ ಆರೋಗ್ಯ ವೃತ್ತಿಪರರು ಕಾರಾಗೃಹಕ್ಕೆ ಭೇಟಿ ನೀಡುವ ವ್ಯವಸ್ಥೆಯು ಇರಬೇಕು. ಈ ವ್ಯವಸ್ಥೆ ಇಲ್ಲದಿದ್ದಲ್ಲಿ ಬಂದಿಗಳ ಭಾವನಾತ್ಮಕ ಅಥವಾ ಮಾನಸಿಕ ಸಂವೇದನೆಗಳನ್ನು ಗುರುತಿಸಿ ಅದಕ್ಕೆ ಸ್ಪಂದಿಸುವುದು ಹೇಗೆ ಎಂಬುದರ ಕುರಿತಾಗಿ ಕಾರಾಗೃಹದ ಸಿಬ್ಬಂದಿವರ್ಗದವರಿಗೆ ಸೂಕ್ತ ತರಬೇತಿಯನ್ನು ನೀಡಬೇಕು. ಬಂದಿಗಳ ಮರುಸಂಘಟನೆಗೆ ಕಾರಾಗೃಹದ ಅಧಿಕಾರಿಗಳು ಸಮುದಾಯದ ಮಾನಸಿಕ ಆರೋಗ್ಯ ಸೇವಾ ಕಾರ್ಯಕರ್ತರೊಂದಿಗೆ ಸತತವಾಗಿ ಕಾರ್ಯನಿರ್ವಹಿಸಬೇಕು.

ವಿಕಲಚೇತನ ಬಂದಿಗಳು

ನೆಲ್ಸನ್ ಮಂಡೇಲಾ ನಿಯಮದ ಅನುಸಾರ ಸಾಮಾನ್ಯ ಬಂದಿಗಳಿಗೆ ದೊರೆಯುವಂತಹ ಎಲ್ಲಾ ಸೌಲಭ್ಯಗಳು ವಿಕಲಚೇತನ ಬಂದಿಗಳಿಗೂ ದೊರೆಯುವಂತೆ ಕಾರಾಗೃಹದ ಅಧಿಕಾರಿಗಳು ಕ್ರಮಕೈಗೊಳ್ಳಬೇಕು.[116] ಈ ಹಿನ್ನೆಲೆಯಲ್ಲಿ ಕಾರಾಗೃಹದ ಅಧಿಕಾರಿಗಳು ಮಾಹಿತಿಯನ್ನು ಬ್ರೈಲ್ ಅಥವಾ ಶ್ರವಣ [ಆಡಿಯೋ] ಹಾಗೂ ಇತರೆ ಅವಶ್ಯಕ ಸಾಧನದ ಮೂಲಕ ನೀಡುವ ವ್ಯವಸ್ಥೆಯನ್ನು ಮಾಡಬೇಕು.

ಸಲಿಂಗಿಗಳು, ದ್ವಿಲಿಂಗಿಗಳು, ಮಂಗಳಮುಖಿಯರು ಮತ್ತು ಇಂಟರ್‌ಸೆಕ್ಸ್ ವ್ಯಕ್ತಿಗಳು

ಸಲಿಂಗಿಗಳು [Lesbian], ದ್ವಿಲಿಂಗಿಗಳು [Bisexual], ಮಂಗಳಮುಖಿಯರು [Transgender] ಮತ್ತು ಇಂಟರ್‌ಸೆಕ್ಸ್ [Intersex] ವ್ಯಕ್ತಿಗಳು ಭೇದಭಾವ ಮತ್ತು ನಿಂದನೆಗೆ ಒಳಗಾಗುವ ಸಾಧ್ಯತೆಗಳು ಹೆಚ್ಚು. ಕೆಲವೊಮ್ಮೆ ಹಿಂಸೆ ಮತ್ತು ಲೈಂಗಿಕ ಹಲ್ಲೆಗೂ ಒಳಗಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಈ ವರ್ಗಕ್ಕೆ ಸೇರಿದ ಬಂದಿಗಳಿಗೆ ಆ ರೀತಿಯ ತೊಂದರೆಗಳು ಆಗದಂತೆ ಕಾರಾಗೃಹ ಅಧಿಕಾರಿಗಳು ಕ್ರಮವನ್ನು ತೆಗೆದುಕೊಳ್ಳಬೇಕು. ಹಾಗೊಮ್ಮೆ ಈ ರೀತಿಯ ಪ್ರಕರಣಗಳು ನಡೆದಿದ್ದಲ್ಲಿ, ಕಾರಾಗೃಹದ ನಿಯಮವನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಿ ಮತ್ತೆ ಮರುಕಳಿಸದಂತೆ ನಿಗಾವಹಿಸಬೇಕು.

ಈ ವರ್ಗದ ಬಂದಿಗಳಿಗೆ ಅಂಟಿರುವ ಕಳಂಕ ಮತ್ತು ಅವರು ಎದುರಿಸುವ ಭೇದಭಾವದ ಕಾರಣ ಬಿಡುಗಡೆಯ ನಂತರ ಅವರಿಗೆ ವಸತಿ ಸೌಕರ್ಯ ಮತ್ತು ಉದ್ಯೋಗ ದೊರೆಯುವುದು ಕಷ್ಟವಾಗಬಹುದು. ಆದ್ದರಿಂದ ಈ ರೀತಿಯ ಬಂದಿಗಳು ಕಾರಾಗೃಹದಲ್ಲಿರುವಾಗ ಅವರಿಗೆ ಸೂಕ್ತ ಆಪ್ತಸಮಾಲೋಚನೆಯನ್ನು ನೀಡುವುದರ ಮೂಲಕ ಅವರ ಮಾನಸಿಕ ತೊಳಲಾಟವನ್ನು ಎದುರಿಸುವಂತಹ ಕ್ರಮಗಳನ್ನು ಕಾರಾಗೃಹದ ಅಧಿಕಾರಿವರ್ಗದವರು ಕೈಗೊಳ್ಳಬೇಕು.

ಹಿರಿಯ ಬಂದಿಗಳು

ಬಿಡುಗಡೆ ನಂತರ ಹಿರಿಯ ಮತ್ತು ವಯಸ್ಸಾದ ಮಹಿಳಾ ಬಂದಿಗಳಿಗೆ ಸಮುದಾಯದ ಸಹಾಯ ದೊರೆಯುವುದು ಕಷ್ಟವಾಗಬಹುದು. ಅವರ ವಯಸ್ಸಿಗೆ ಅನುಗುಣವಾಗಿ ಬೇಕಾಗುವ ಆರೋಗ್ಯದ ಅಗತ್ಯತೆಗಳ ಬಗ್ಗೆ ಕಾರಾಗೃಹದ ಕಲ್ಯಾಣ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ಹಿರಿಯ ನಾಗರಿಕರ ವಿಭಾಗದ ನೆರವು ಪಡೆದು ಹಿರಿಯ ಬಂದಿಗಳಿಗೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕು.

# VIII. ಕಾರಾಗೃಹದ ಸಿಬ್ಬಂದಿವರ್ಗದವರು ಮತ್ತು ತರಬೇತಿ

ಮಹಿಳಾ ಬಂದಿಗಳ ಅಗತ್ಯತೆಗಳನ್ನು ಕಾರಾಗೃಹದ ಮಹಿಳಾ ಸಿಬ್ಬಂದಿವರ್ಗದವರು ಮಾತ್ರ ಪೂರೈಸಬೇಕು. ಹಾಗೆಂದ ಮಾತ್ರಕ್ಕೆ ಪುರುಷ ಸಿಬ್ಬಂದಿವರ್ಗದವರು, ವಿಶೇಷವಾಗಿ ವೈದ್ಯರು ಮತ್ತು ಶಿಕ್ಷಕರು ಮಹಿಳೆಯರಿಗೆ ಮೀಸಲಾದ ಕಾರಾಗೃಹದಲ್ಲಿ ಅಥವಾ ಕಾರಾಗೃಹದಲ್ಲಿನ ಭಾಗಶಃ ಆವರಣದಲ್ಲಿ ತಮ್ಮ ವೃತ್ತಿಯನ್ನು ಮಾಡಬಾರದು ಎಂದು ಅರ್ಥವಲ್ಲ.[117] ಅಪರಾಧಿ ಎಂದು ನಿರ್ಧರಿಸಲ್ಪಟ್ಟ ಮಹಿಳಾ ಬಂದಿಗಳ ಕಾರಾಗೃಹದಲ್ಲಿ ಒಂದು ಹುದ್ದೆಯನ್ನು ಮಹಿಳಾ ಅಧೀಕ್ಷಕರಿಗಾಗಿಯೇ ಮೀಸಲಿಡಬೇಕು. ಉಪ–ಕಾರಾಗೃಹ ಮತ್ತು ಜಿಲ್ಲಾ ಕಾರಾಗೃಹದಲ್ಲಿ ಒಬ್ಬ ಮಹಿಳಾ ಉಪ/ಸಹಾಯಕ ಅಧೀಕ್ಷಕರ ಹುದ್ದೆ ಇರಬೇಕು. ಇವರ ಸಹಾಯಕ್ಕೆ ಮಹಿಳಾ ಪ್ರಧಾನ ವೀಕ್ಷಕರು, ಮುಖ್ಯ ವೀಕ್ಷಕರು ಮತ್ತು ಮಹಿಳಾ ವೀಕ್ಷಕರು/ಮೇಟ್ರನ್, ಶಿಕ್ಷಕರು, ತರಬೇತುದಾರರು, ಮನೋವಿಜ್ಞಾನ ತಜ್ಞರು, ವೈದ್ಯರು, ವಿಶೇಷವಾಗಿ ಸ್ತ್ರೀರೋಗ ತಜ್ಞರು, ಕಾರಕೂನ [ಕ್ಲರ್ಕ್] ಮತ್ತು ಆಫ್ಟರ್‌ಕೇರ್ [ಪಾಲನೋತ್ತರ] ಅಧಿಕಾರಿಗಳು ಇರಬೇಕು.[118]

ಕಾರಾಗೃಹದ ಮಹಿಳಾ ಆವರಣದಲ್ಲಿ ಕೆಲಸ ಮಾಡಲು ಸಾಕಷ್ಟು ಸಂಖ್ಯೆಯ ಮಹಿಳಾ ಸಿಬ್ಬಂದಿ [correctional staff] ಯನ್ನು ನೇಮಕ ಮಾಡಿ ಅವರಿಗೆ ಸೂಕ್ತ ಸಂಬಳ, ಔದ್ಯೋಗಿಕ ಸೌಲಭ್ಯ ಮತ್ತು ಸೇವಾ ಸೌಕರ್ಯಗಳನ್ನು ಒದಗಿಸಬೇಕು.[119] ಪ್ರತಿಯೊಂದು ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಒಂದು ಕಲ್ಯಾಣ ನಿಧಿಯನ್ನು ಸ್ಥಾಪಿಸಬೇಕು.[120] ಸಿಬ್ಬಂದಿಯು ತಮ್ಮ ಕುಂದುಕೊರತೆಗಳನ್ನು ವ್ಯಕ್ತಪಡಿಸಲು ಸಾಂಸ್ಥಿಕ ವ್ಯವಸ್ಥೆಯು ಇರಬೇಕು.[121] ದೇಶದ ವಿವಿಧ ರಾಜ್ಯಗಳ ಮತ್ತು ವಿದೇಶದ ಕಾರಾಗೃಹಗಳಿಗೆ ಭೇಟಿ ನೀಡಲು ಹಿರಿಯ ಮಹಿಳಾ ಅಧಿಕಾರಿಗಳನ್ನು ನೇಮಕ ಮಾಡಬೇಕು.[122] ಮಹಿಳಾ ಬಂದಿಗಳು, ಸಿಬ್ಬಂದಿವರ್ಗದವರು ಮತ್ತು ಮಹಿಳಾ ಕಾರಾಗೃಹಕ್ಕೆ ಸಂಬಂಧಪಟ್ಟ ವಿಚಾರಗಳನ್ನು ನೋಡಿಕೊಳ್ಳಲು ಕಾರಾಗೃಹದ ಕೇಂದ್ರ ಕಛೇರಿಗೆ ಹೊಂದಿಕೊಂಡಂತೆ ಒಬ್ಬ ಮಹಿಳಾ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ [ಡಿಐಜಿ] ಇರಬೇಕು.[123] ಮಹಿಳಾ ಬಂದಿಗಳಿಗೆ ಸಂಬಂಧಪಟ್ಟಂತೆ ಮಹಿಳಾ ಡಿಐಜಿ ವಿಚಾರಣೆಗಳನ್ನು ನಡೆಸಿ ಅವರಿಗೆ ಕಂಡುಬಂದ ಅಂಶಗಳನ್ನು ಹಾಗೂ ಶಿಫಾರಸ್ಸುಗಳನ್ನು ಕಾರಾಗೃಹದ ಮುಖ್ಯಸ್ಥರಿಗೆ ಸಲ್ಲಿಸಬೇಕು.[124]

ಮಹಿಳಾ ಸಿಬ್ಬಂದಿವರ್ಗದವರಿಗೆ ವಾರದಲ್ಲಿ ಒಂದು ದಿನ ರಜೆಯನ್ನು ನೀಡಬೇಕು.[125] ಅವರು ಕರ್ತವ್ಯನಿರತರಾಗಿದ್ದಾಗ ಅವರ ಮಕ್ಕಳ ಪಾಲನೆಗೆ ಶಿಶು ಪಾಲನಾ ಗೃಹದ ವ್ಯವಸ್ಥೆಯನ್ನು ಒದಗಿಸಬೇಕು.126 ಉಪಹಾರ ಗೃಹ[127] ಮತ್ತು ಅವರ ಕೆಲಸದ ವೇಳೆಯಲ್ಲಿ ಆಹಾರ ದೊರೆಯುವಂತಹ ವ್ಯವಸ್ಥೆಯನ್ನು ನೀಡಬೇಕು.[128]

ಕಾರಾಗೃಹ ಮತ್ತು ಇತರೆ ಸಂಸ್ಥೆಗಳಿಂದ ಬಿಡುಗಡೆಗೊಂಡ ನಂತರ ಮಹಿಳಾ ಬಂದಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುವುದು, ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಕಾನೂನಾತ್ಮಕ ಕರ್ತವ್ಯವಾಗಿರಬೇಕು. ಇದಕ್ಕಾಗಿ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಕೇಂದ್ರ ಕಛೇರಿಯಲ್ಲಿ ಒಬ್ಬ ಮಹಿಳಾ ಸಿಬ್ಬಂದಿ ಮತ್ತು ಪ್ರತಿಯೊಂದು ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಒಂದು ಘಟಕ ಇದಕ್ಕಾಗಿಯೇ ಇರಬೇಕು.[129]

ಕಾರಾಗೃಹದಲ್ಲಿರುವ ಮಹಿಳೆಯರ ಲಿಂಗಾಧಾರಿತ ಅಗತ್ಯತೆಗಳು ಮತ್ತು ಮಾನವ ಹಕ್ಕುಗಳ ಕುರಿತಾಗಿ ಮಹಿಳಾ ಬಂದಿಗಳನ್ನು ನಿರ್ವಹಿಸುವ ಮಹಿಳಾ ಸಿಬ್ಬಂದಿಗಳಿಗೆ ಸೂಕ್ತ ತರಬೇತಿಯನ್ನು ನೀಡಬೇಕು.[130] ಕಾರಾಗೃಹದಲ್ಲಿ ತಾಯಿಯೊಂದಿಗೆ ಮಕ್ಕಳು ಇರಲು ಅವಕಾಶವಿದ್ದಲ್ಲಿ,

ಸಿಬ್ಬಂದಿಯು ಅಗತ್ಯ ಒದಗಿದಾಗ ಅಥವಾ ತುರ್ತು ಸಮಯದಲ್ಲಿ ಸರಿಯಾಗಿ ಸ್ಪಂದಿಸಲು ಮಕ್ಕಳ ಪಾಲನೆ ಮತ್ತು ಪೋಷಣೆ, ಮಕ್ಕಳ ಆರೋಗ್ಯದ ಕುರಿತಾಗಿ ಅವರಿಗೆ ಬುನಾದಿ ತರಬೇತಿಯನ್ನು ನೀಡಬೇಕು.[131] ಸಿಬ್ಬಂದಿಯ ಸಬಲೀಕರಣ ಕಾರ್ಯಕ್ರಮಗಳಲ್ಲಿ ಮಹಿಳಾ ಬಂದಿಗಳ ಪಾಲನೆ, ನೀತಿ, ನಿಯಮ ಮತ್ತು ಕಾರ್ಯಯೋಜನೆಯ ಕುರಿತು ಹಿರಿಯ ಅಧಿಕಾರಿಗಳೊಡನೆ ಚರ್ಚಿಸಲು ಮುಕ್ತ ಅವಕಾಶ ಇರಬೇಕು.[132]

# IX. ಪ್ರಮುಖ ವರದಿಗಳು ಮತ್ತು ದಾಖಲೆಗಳು

## ವಾಲ್ಟರ್ ಸಿ. ರೆಕ್ಲೆಸ್ ಆಯೋಗದ ವರದಿ– 1951

ಭಾರತ ಸರ್ಕಾರವು 1951 ರಲ್ಲಿ ವಿಶ್ವ ಸಂಸ್ಥೆಯ ಅಪರಾಧಶಾಸ್ತ್ರ ಮತ್ತು ಸುಧಾರಣಾ ನಿರ್ವಹಣಾ ತಜ್ಞರಾದಂತಹ ಡಾ. ವಾಲ್ಟರ್ ಸಿ. ರೆಕ್ಲಸ್ ಅವರನ್ನು ಆಹ್ವಾನಿಸಿ ಕಾರಾಗೃಹದ ಆಡಳಿತದ ಬಗ್ಗೆ ಸೂಕ್ತ ಮಾರ್ಗದರ್ಶನ ಮತ್ತು ಶಿಫಾರಸ್ಸುಗಳನ್ನು ನೀಡುವಂತೆ ವಿನಂತಿಸಿತ್ತು.[133] ಅವರು ನೀಡಿದ ಶಿಫಾರಸ್ಸುಗಳಲ್ಲಿ ಮಹಿಳೆಯರಿಗಾಗಿಯೇ ಪ್ರತ್ಯೇಕವಾದ ಕಾರಾಗೃಹವು ಅಸ್ತಿತ್ವದಲ್ಲಿರಬೇಕೆಂಬ ಮಹತ್ವದ ಶಿಫಾರಸ್ಸನ್ನು ನೀಡಿದ್ದರು.

## ಅಖಿಲ ಭಾರತ ಕಾರಾಗೃಹ ಕೈಪಿಡಿ ಸಮಿತಿ– 1957

ಒಂದು ಮಾದರಿ ಕಾರಾಗೃಹ ಕೈಪಿಡಿಯನ್ನು ಸಿದ್ಧಪಡಿಸಲು ಭಾರತ ಸರ್ಕಾರವು 1957ರಲ್ಲಿ ಅಖಿಲ ಭಾರತ ಕಾರಾಗೃಹ ಕೈಪಿಡಿ ಸಮಿತಿಯನ್ನು ರಚಿಸಿತು. ಸಮಿತಿಯು 1960ರಲ್ಲಿ ಕೈಪಿಡಿಯ ಕರಡನ್ನು ಸಲ್ಲಿಸಿತು. ಆ ಸಂದರ್ಭದಲ್ಲಿ ಕೈಪಿಡಿಯು ಕಾರಾಗೃಹ ಆಡಳಿತಕ್ಕೆ ಒಂದು ಮಾರ್ಗಸೂಚಿಯಾಗಿತ್ತು.[134] ಈ ವರದಿಯು ಕಾರಾಗೃಹಗಳನ್ನು ವಿಚಾರಣಾಧೀನ, ಮಹಿಳಾ ಬಂದಿಗಳು, ಜೀವಾವಧಿ ಶಿಕ್ಷೆಗೆ ಗುರಿಯಾದವರು, ರೂಢಿಗತ ಅಪರಾಧಿಗಳು, ಮನೋವಿಕಲರು, ಬಾಲಾಪರಾಧಿಗಳು ಇತ್ಯಾದಿಯಾಗಿ ವಿಂಗಡಿಸುವಂತೆ ಶಿಫಾರಸ್ಸನ್ನು ನೀಡಿತ್ತು. ಮಹಿಳಾ ಅಪರಾಧಿಗಳ ಪಾಲನೆ, ಸುಧಾರಣೆ ಮತ್ತು ಪುನರ್‌ವಸತಿ, ಕೌಶಲ್ಯಾಧಾರಿತ ತರಬೇತಿ ಇತ್ಯಾದಿ ಬಗ್ಗೆ ವಿಶೇಷ ನಿಯಮಾವಳಿಗಳನ್ನು ಅನುಸರಿಸಬೇಕೆಂದು ಸೂಚಿಸಿತ್ತು.[135]

## ಮಹಿಳೆಯರ ವಿರುದ್ಧದ ಎಲ್ಲಾ ರೀತಿಯ ಭೇದಭಾವವನ್ನು ತಡೆಗಟ್ಟುವ ಸಮಾವೇಶ– 1979

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 1979ರಲ್ಲಿ ಮಹಿಳೆಯರ ವಿರುದ್ಧದ ಎಲ್ಲಾ ರೀತಿಯ ಭೇದಭಾವವನ್ನು ತಡೆಗಟ್ಟುವ ಅಂತಾರಾಷ್ಟ್ರೀಯ ಮಹಿಳಾ ಹಕ್ಕುಗಳ ವಿಧೇಯಕವನ್ನು ಅಂಗೀಕರಿಸಿತು. ಈ ವಿಧೇಯಕವು ಮಹಿಳೆಯರ ವಿರುದ್ಧದ ಭೇದಭಾವಗಳು ಯಾವುವು ಹಾಗೂ ಇದನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಎಲ್ಲಾ ಕ್ರಮಗಳನ್ನೂ ಒಳಗೊಂಡಿದೆ.[136]

## ಅಖಿಲ ಭಾರತ ಕಾರಾಗೃಹ ಸುಧಾರಣಾ ಸಮಿತಿ– 1980–83 [ಮುಲ್ಲಾ ಸಮಿತಿ]

ಮುಲ್ಲಾ ಸಮಿತಿಯ XIII ನೇ ಅಧ್ಯಾಯವು ಮಹಿಳಾ ಬಂದಿಗಳು ಎದುರಿಸುತ್ತಿರುವ ವಿಶೇಷ ಸಮಸ್ಯೆಗಳನ್ನು ಮತ್ತು ಅವುಗಳ ಸುಧಾರಣೆಗೆ ಕೆಲವು ಶಿಫಾರಸ್ಸುಗಳನ್ನು ಸೂಚಿಸುತ್ತದೆ.[137] ಮಹಿಳಾ ಬಂದಿಗಳಿಗೆ ಪ್ರತ್ಯೇಕ ಸಂಸ್ಥೆಗಳ/ಆವರಣದ ಅಗತ್ಯತೆಯನ್ನು ಹಾಗೂ ಮಹಿಳಾ ಸಿಬ್ಬಂದಿವರ್ಗದವರ ಅಗತ್ಯಕ್ಕೆ ಒತ್ತು ನೀಡುತ್ತದೆ. ಪ್ರಸವಪೂರ್ವ ಮತ್ತು ಪ್ರಸವ ನಂತರದ ವಿಷಯಗಳನ್ನು ಸಹ ಉಲ್ಲೇಖಿಸಿದೆ. ಬಿಡುಗಡೆಗೊಂಡ ನಂತರ ಮಹಿಳಾ ಬಂದಿಗಳ ಪುನರ್‌ವಸತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅದಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂಬುದಾಗಿ ಸದರಿ ಸಮಿತಿಯು ತಿಳಿಸುತ್ತದೆ. ಮಹಿಳಾ ಬಂದಿಗಳ ಸುಧಾರಣೆಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸುವಂತೆ ಮಹಿಳಾ ಸಿಬ್ಬಂದಿವರ್ಗದವರಿಗೆ ಅಗತ್ಯವಾದ ಸೂಕ್ತ ತರಬೇತಿಯನ್ನು ನೀಡಬೇಕೆಂದು ಸಹ ಸಮಿತಿಯು ಸೂಚಿಸಿದೆ.[138]

## ರಾಷ್ಟ್ರೀಯ ಮಹಿಳಾ ಬಂದಿಗಳ ತಜ್ಞರ ಸಮಿತಿ– 1987 [ಜಸ್ಟೀಸ್ ಕೃಷ್ಣ ಐಯ್ಯರ್ ಸಮಿತಿ]

ಮಹಿಳಾ ಬಂದಿಗಳಿಗೆ ಪ್ರಸ್ತುತ ಇರುವಂತಹ ಸೌಲಭ್ಯಗಳು ಮತ್ತು ಸೇವೆಗಳಲ್ಲಿರುವಂತಹ ಲೋಪದೋಷಗಳನ್ನು ಸರಿಪಡಿಸಿ, ಅವರ ಅಗತ್ಯತೆಗಳನ್ನು ಮಾನವೀಯ ದೃಷ್ಟಿಯಿಂದ ನೋಡುವುದಕ್ಕೆ ಬೇಕಾದ ಸುಧಾರಣಾ ಕ್ರಮಗಳನ್ನು ಸೂಚಿಸುವಂತೆ ರಾಷ್ಟ್ರೀಯ ಮಹಿಳಾ ಬಂದಿಗಳ ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯು ಮಹಿಳಾ ಅಪರಾಧಿಗಳ ಸುಧಾರಣೆಗೆ ಅಗತ್ಯವಾದ ಪ್ರಕ್ರಿಯೆಗಳ ಕುರಿತು ಅಗತ್ಯ ಸಲಹೆಗಳನ್ನು ನೀಡಿತು. ಮಹಿಳಾ ಬಂದಿಗಳ/ಅಪರಾಧಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಕರಡು ನೀತಿಯನ್ನು ರಚಿಸಬೇಕೆಂದು ಹಾಗೂ ಅದನ್ನು ಆಚರಣೆಗೆ ತರಲು ಒಂದು ಕಾನೂನಾತ್ಮಕ ಪ್ರಾಧಿಕಾರವನ್ನು ಸ್ಥಾಪಿಸಬೇಕೆಂದು ಈ ಸಮಿತಿಯು ಶಿಫಾರಸ್ಸನ್ನು ನೀಡಿತು. ಕಾರಾಗೃಹದಲ್ಲಿ ಮಹಿಳಾ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಹಾಗೂ ಮಹಿಳೆಯರಿಗೆ ಸಂಬಂಧಿಸಿದಂತಹ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಬೇಕೆಂದು ಸದರಿ ಸಮಿತಿಯು ಶಿಫಾರಸ್ಸನ್ನು ನೀಡಿತು.

- ಅಭಿರಕ್ಷೆಯಲ್ಲಿರುವ ಮಹಿಳೆಯರನ್ನು ಕುರಿತಾದ ಭಾರತೀಯ ಕಾನೂನು ಆಯೋಗದ 135 ನೇ ವರದಿ– 1989

ಅಭಿರಕ್ಷೆ [ಕಸ್ಟಡಿ] ಯ ಸಮಯದಲ್ಲಿ ಮಹಿಳೆಯರಿಗೆ ಆಗುವಂತಹ ಕಿರುಕುಳದಿಂದ ಅವರನ್ನು ರಕ್ಷಿಸುವುದಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಈ ವರದಿಯು ತನ್ನ ಗಮನವನ್ನು ಪ್ರಧಾನವಾಗಿ ಕೇಂದ್ರಿಕರಿಸಿತ್ತು. ಈ ಉದ್ದೇಶಕ್ಕಾಗಿ ಸಮಿತಿಯು ಮಹಿಳೆಯರು ಮತ್ತು ಮಕ್ಕಳ ಬಂಧನ, ವಿಚಾರಣೆ ಮತ್ತು ಅಭಿರಕ್ಷೆಯ ವಿಷಯದಲ್ಲಿ ವಿವಿಧ ತಿದ್ದುಪಡಿಗಳನ್ನು ಮಾಡಬೇಕೆಂಬುದಾಗಿ ಸಲಹೆಯನ್ನು ನೀಡಿತು. ಕಾರಾಗೃಹದಲ್ಲಿ ಮಹಿಳಾ ಬಂದಿಗಳ ನಿರ್ವಹಣೆಯ ಬಗ್ಗೆಯೂ ಅಗತ್ಯ ಸೂಚನೆಗಳನ್ನು ನೀಡಿತು. ಇದರೊಂದಿಗೆ ಮಹಿಳೆಯರಿಗೆ ಜಾಮೀನು ನೀಡುವ ಮತ್ತು ಅವರನ್ನು ಬಂಧನಕ್ಕೆ ಒಳಪಡಿಸುವ ವಿಷಯದಲ್ಲಿ ರಿಯಾಯಿತಿಯನ್ನು ತೋರಬೇಕೆಂಬುದಾಗಿಯೂ ಕೂಡ ಸಮಿತಿಯು ಸೂಚನೆಯನ್ನು ನೀಡಿತು.

- ಬಂಧಿತ ಮಹಿಳೆಯರ ಸಬಲೀಕರಣ ಸಮಿತಿಯ ಮೂರನೇ ವರದಿ [13ನೇ ಲೋಕಸಭೆ]– 2001

ಲೋಕಸಭೆಯ 13ನೇ ವರದಿಯು ಕಾರಾಗೃಹದಲ್ಲಿರುವ ಮಹಿಳೆಯರ ಸ್ಥಿತಿಗತಿ, ಹಳೆಯದಾದ ಕಾರಾಗೃಹ ಕೈಪಿಡಿ ಮತ್ತು ಕಾರಾಗೃಹದ ಅಧಿಕಾರಿಗಳ ಸಂವೇದನಾರಹಿತ ವರ್ತನೆಯ ಬಗ್ಗೆ ತನ್ನ ಅಭಿಪ್ರಾಯವನ್ನು ಸೂಚಿಸಿತು.[140] ಕಾರಾಗೃಹದಲ್ಲಿರುವ ಮಹಿಳೆಯರಲ್ಲಿ ಶೇಕಡಾ 80 ರಷ್ಟು ಮಹಿಳಾ ಬಂದಿಗಳು, ವಿಚಾರಣಾಧೀನ ಬಂದಿಗಳಾಗಿದ್ದು ಇವರುಗಳ ಪರಿಹಾರಕ್ಕೆ ರಾಜ್ಯ ಸರ್ಕಾರಗಳು ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂಬುದಾಗಿಯೂ ಸದರಿ ವರದಿಯು ಸೂಚಿಸಿತು. ಮಹಿಳಾ ಬಂದಿಗಳ ಸುಧಾರಣೆ ಮತ್ತು ಪುನರ್‌ವಸತಿಯ ವಿಷಯದಲ್ಲಿ ಕಾರಾಗೃಹದ ಸಿಬ್ಬಂದಿವರ್ಗದವರ ಪಾತ್ರವನ್ನು ವಿವರಿಸಿದ ಈ ವರದಿಯು ಇದಕ್ಕೆ ಸಂಬಂಧಪಟ್ಟಂತೆ 21 ಸಲಹೆಗಳನ್ನು ನೀಡಿತು. ಅವುಗಳಲ್ಲಿ ಮುಖ್ಯವಾದವು ಕಾನೂನು ನೆರವು, ಮಹಿಳಾ ಬಂದಿಗಳ ಮಕ್ಕಳ ಪಾಲನೆ ಮತ್ತು ಪೋಷಣೆ, ಪೆರೋಲ್ [Parole] ಮೇಲೆ ಮಹಿಳಾ ಬಂದಿಗಳನ್ನು ಬಿಡುಗಡೆ ಮಾಡುವಾಗ ರಿಯಾಯಿತಿ ಇತ್ಯಾದಿಗಳು.

- **ಆರ್.ಡಿ.ಉಪಾಧ್ಯಾಯ v/s ಸ್ಟೇಟ್ ಆಫ್ ಆಂಧ್ರಪ್ರದೇಶ್– 2006**

ವಿಚಾರಣಾಧೀನ ಬಂದಿಗಳ ಸ್ಥಿತಿಗತಿಗಳ ಸುಧಾರಣೆಗಾಗಿ ವಕೀಲ ಶ್ರೀ. ಆರ್. ಡಿ. ಉಪಾಧ್ಯಾಯ ಅವರು ಸುಪ್ರೀಂ ಕೋರ್ಟ್‌ನಲ್ಲಿ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿದರು. ನ್ಯಾಯಾಲಯವು ದಿನಾಂಕ 13.04.2006 ರಂದು ತೀರ್ಪು ನೀಡಿ ಮಹಿಳಾ ಬಂದಿಗಳೊಡನೆ ಕಾರಾಗೃಹದಲ್ಲಿರುವ ಅವರ ಮಕ್ಕಳ ಅಭಿವೃದ್ಧಿಯ ಬಗ್ಗೆ ತನ್ನ ಗಮನವನ್ನು ಹರಿಸಿತು. ಮಹಿಳಾ ಬಂದಿಗಳು ಮತ್ತು ಮಕ್ಕಳಿಗೆ ತಮ್ಮ ವ್ಯಾಪ್ತಿಯಲ್ಲಿನ ಕಾರಾಗೃಹಗಳಲ್ಲಿ ನೀಡಲಾಗುತ್ತಿರುವ ಸೌಲಭ್ಯಗಳ ಮಾಹಿತಿಗಳನ್ನು ನೀಡಬೇಕೆಂಬುದಾಗಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಗೌರವಾನ್ವಿತ ನ್ಯಾಯಾಲಯವು ಆದೇಶವನ್ನು ನೀಡಿತು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿರುವಂತಹ ನಿಯಮಗಳಿಗೆ ತಕ್ಕಂತೆ ಮಕ್ಕಳು ಮತ್ತು ಮಹಿಳಾ ಬಂದಿಗಳ ಅಭಿವೃದ್ಧಿಗೆ ಕ್ರಮಗಳನ್ನು ಕೈಗೊಳ್ಳುವಂತೆ ಗೌರವಾನ್ವಿತ ನ್ಯಾಯಾಲಯವು ಆದೇಶವನ್ನು ನೀಡಿತು.

- ವಿಶ್ವಸಂಸ್ಥೆಯು ಅಂಗೀಕರಿಸಿರುವ ಮಹಿಳಾ ಬಂದಿಗಳ ಪಾಲನೆ ಮತ್ತು ಮಹಿಳಾ ಅಪರಾಧಿಗಳ ಅಭಿರಕ್ಷೆ ರಹಿತ [ನಾನ್–ಕಸ್ಟೋಡಿಯಲ್] ಪಾಲನಾ ಕ್ರಮ [ಬ್ಯಾಂಕಾಕ್ ನಿಯಮ– 2010]

ಬ್ಯಾಂಕಾಕ್ ನಿಯಮ ಎಂದು ಕರೆಯಲ್ಪಡುವ ಈ ನಿಯಮವನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಅಂಗೀಕರಿಸಿದ್ದು, ಇದು 70 ಮಾನಕಗಳನ್ನು/ಸೂಚನೆಗಳನ್ನು ಒಳಗೊಂಡಿದೆ. ಎಲ್ಲಾ ರೀತಿಯ ಮಹಿಳಾ ಬಂದಿಗಳಿಗೆ ಏಕರೂಪ ನಿಯಮಾವಳಿಗಳನ್ನು ಅಳವಡಿಸಲು ಸಾಧ್ಯವಿಲ್ಲದ ಕಾರಣ ಈ ಮಾನಕಗಳನ್ನು/ ಸೂಚನೆಗಳನ್ನು ರೂಪಿಸಲಾಗಿದೆ.

- ವಿಶ್ವಸಂಸ್ಥೆಯು ಅಂಗೀಕರಿಸಿರುವ ಬಂದಿಗಳ ಪಾಲನಾ ಕನಿಷ್ಠ ಗುಣಮಟ್ಟದ ನಿಯಮ [ನೆಲ್ಸನ್ ಮಂಡೇಲಾ ನಿಯಮ– 2015]

ಬಂದಿಗಳ ಪಾಲನೆಗೆ ಅನುಸರಿಸಬೇಕಾದ ಕನಿಷ್ಠ ಗುಣಮಟ್ಟದ ನಿಯಮವನ್ನು ಮೊದಲ ಬಾರಿ 1955ರಲ್ಲಿ ಅಂಗೀಕರಿಸಿದ್ದರೂ, ಅದನ್ನು 2010ರಲ್ಲಿ ನವೀಕರಿಸಿ 2015ರಲ್ಲಿ ನೆಲ್ಸನ್ ಮಂಡೇಲಾ ನಿಯಮ ಎಂದು ಮರುನಾಮಕರಣ ಮಾಡಲಾಯಿತು. ಈ ನಿಯಮವು ಒಟ್ಟು ಎಂಟು ಮುಖ್ಯ ವಿಷಯಾಂಶಗಳನ್ನು ಒಳಗೊಂಡಿದ್ದು ಅದರಲ್ಲಿ ಬಂದಿಗಳ ಘನತೆ, ಆರೋಗ್ಯ, ವೈದ್ಯಕೀಯ ಸೇವೆ, ರಕ್ಷಣೆ ಮತ್ತು ದುರ್ಬಲ ಗುಂಪುಗಳ ರಕ್ಷಣೆ ಮೊದಲಾದ ಮುಖ್ಯಾಂಶಗಳನ್ನು ಒಳಗೊಂಡಿದೆ.[141]

- ಮಾದರಿ ಕಾರಾಗೃಹ ಕೈಪಿಡಿ– 2016

ಈ ಕೈಪಿಡಿಯಲ್ಲಿ 32 ಅಧ್ಯಾಯಗಳಿದ್ದು ಗೃಹ ಸಚಿವಾಲಯದಿಂದ ಅಂಗೀಕರಿಸಲ್ಪಟ್ಟಿದೆ. ಕಾರಾಗೃಹದ ನಿರ್ವಹಣೆಗೆ ದೇಶದಾದ್ಯಂತ ಇರುವ ಕಾನೂನು, ನಿಯಮ ಮತ್ತು ನಿಬಂಧನೆಗಳು ಏಕರೂಪವಾಗಿರಲಿ ಎಂಬುದು ಈ ಕೈಪಿಡಿಯ ಉದ್ದೇಶ. ಹೊಸ ಕೈಪಿಡಿಯ [XXVI] 26ನೇ ಅಧ್ಯಾಯವು ಮಹಿಳಾ ಬಂದಿಗಳ ಮತ್ತು ಅವರ ಮಕ್ಕಳ ವಿಶೇಷ ಅಗತ್ಯತೆಗಳ ಬಗ್ಗೆ ಗಮನವನ್ನು ಹರಿಸುತ್ತದೆ.

- **ಬಂಧಿತ ಮಹಿಳೆ ಮತ್ತು ನ್ಯಾಯಕ್ಕೆ ಅವಕಾಶ– ಮಹಿಳೆಯರ ಸಬಲೀಕರಣ ಸಮಿತಿಯ 10ನೇ ವರದಿ [10ನೇ ಲೋಕಸಭೆ]– ಆಗಸ್ಟ್ 2017**

ಈ ವರದಿಯು ಬಂಧಿತ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಕಾರಾಗೃಹದಲ್ಲಿ ಅವರ ಸ್ಥಿತಿಗತಿಯನ್ನು ಸುಧಾರಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಗಮನವನ್ನು ಹರಿಸುತ್ತದೆ. ಕಾರಾಗೃಹದಲ್ಲಿ ಬಂದಿಗಳ ದಟ್ಟನೆಯ ಸಮಸ್ಯೆಗಳನ್ನು ಬಗೆಹರಿಸಲು ಕ್ರಿಮಿನಲ್ ಅಪರಾಧಿಗಳು ಮತ್ತು ಇತರೆ ಸಣ್ಣಮಟ್ಟ ಅಪರಾಧಿಗಳನ್ನು ನಿರ್ವಹಿಸಲು ಪರ್ಯಾಯ ವ್ಯವಸ್ಥೆ ಇರಬೇಕೆಂದು ಸೂಚಿಸಿದೆ. ಬಂಧನದಲ್ಲಿರುವಾಗ ನಡೆಯುವ ಅತ್ಯಾಚಾರ ತಡೆಗಟ್ಟಲು ಸಿಸಿಟಿವಿ ಅಳವಡಿಸಬೇಕೆಂದು ಹಾಗೂ ಬಂಧಿತರು, ನಾಗರಿಕ ಹಕ್ಕುಗಳ ಕಾರ್ಯಕರ್ತರೊಡನೆ ಸಮಾಲೋಚನೆಯನ್ನು ನಡೆಸಲು ಕ್ರಮಕೈಗೊಳ್ಳಬೇಕೆಂದು ಸಲಹೆ ಮಾಡಿದೆ. ಪುನರ್‌ವಸತಿ ವಿಷಯದಲ್ಲಿ ಗೃಹ ಸಚಿವಾಲಯಕ್ಕೆ ನಿರ್ದೇಶನ ನೀಡಿ ಕೌಶಲ್ಯಾಭಿವೃದ್ಧಿ ಸಚಿವಾಲಯದೊಡನೆ ಸೇರಿ ಬಿಡುಗಡೆ ನಂತರ ಮಹಿಳಾ ಬಂದಿಗಳಿಗೆ ಸೂಕ್ತ ಉದ್ಯೋಗ ದೊರೆಯುವಂತೆ ಮಾಡಬೇಕೆಂದು ವರದಿಯಲ್ಲಿ ಸೂಚಿಸಲಾಗಿದೆ. ಕಾರಾಗೃಹದಲ್ಲಿ ಮಹಿಳಾ ಸಿಬ್ಬಂದಿಯ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಹಾಗೂ ಮಹಿಳಾ ಸಿಬ್ಬಂದಿವರ್ಗದವರಿಗೆ ಲಿಂಗಸೂಕ್ಷ್ಮತೆಯ ಕುರಿತಾದ ತರಬೇತಿಯನ್ನು ನೀಡಬೇಕೆಂದು ವರದಿಯು ಹೇಳಿದೆ. ವಿದೇಶಿ ಬಂದಿಗಳು ಎದುರಿಸುವ ಸಮಸ್ಯೆಗಳು, ವಿಶೇಷವಾಗಿ ನ್ಯಾಯದ ಅವಕಾಶದ ಬಗ್ಗೆಯೂ ವರದಿಯು ತನ್ನ ಗಮನವನ್ನು ಕೇಂದ್ರಿಕರಿಸಿದೆ. ಮಹಿಳಾ ಬಂದಿಗಳಿಗೆ ಕಾನೂನು ನೆರವು ನೀಡುವಂತೆ ಕಾನೂನು ಸೇವಾ ಪ್ರಾಧಿಕಾರಕ್ಕೆ ಅಗತ್ಯ ಸಲಹೆಗಳನ್ನು ನೀಡಿದೆ.

- ಬಂಧಿತ ಮಹಿಳೆ ಮತ್ತು ನ್ಯಾಯಕ್ಕೆ ಅವಕಾಶ– ಮಹಿಳೆಯರ ಸಬಲೀಕರಣ ಸಮಿತಿಯ 13ನೇ ವರದಿ [16ನೇ ಲೋಕಸಭೆ]– ಆಗಸ್ಟ್ 2018 [ಸರ್ಕಾರ ಕೈಗೊಂಡ ಕ್ರಮ]

ಈ ವರದಿಯು, ಸಮಿತಿಯ 10ನೇ ವರದಿಯ ಆಧಾರದ ಮೇಲೆ ಗೃಹಸಚಿವಾಲಯವು ಕೈಗೊಂಡ ಕ್ರಮವನ್ನು ಕುರಿತಾದದ್ದಾಗಿದೆ. ತನ್ನ ಶಿಫಾರಸ್ಸುಗಳ ಬಗ್ಗೆ ಗೃಹ ಸಚಿವಾಲಯ ನೀಡಿದ ಜವಾಬು ಸದರಿ ಸಮಿತಿಗೆ ಸಮಾಧಾನವನ್ನು ಉಂಟುಮಾಡಿದ್ದರೂ, ಎರಡು ವಿಷಯಗಳನ್ನು ಒಳಗೊಂಡಂತೆ ಇದನ್ನು 'ಮಧ್ಯಂತರ ಜವಾಬು' ಎಂದು ಪರಿಗಣಿಸಲಾಗಿತ್ತು. ಅದರಲ್ಲಿ ಮೊದಲನೆಯದು ಕಾರಾಗೃಹದ ಸಿಬ್ಬಂದಿವರ್ಗದವರಿಗೆ ಕಡ್ಡಾಯವಾಗಿ ತರಬೇತಿ ನೀಡುವ ವಿಷಯಕ್ಕೆ ಸಂಬಂಧಿಸಿದ್ದು. ಮಾತ್ರವಲ್ಲದೆ, ಕಾರಾಗೃಹವನ್ನು ಸುಧಾರಿಸಲು ಸರ್ಕಾರೇತರ ಸಂಸ್ಥೆಗಳೊಂದಿಗೆ ಕೆಲಸ ಮಾಡುವುದು. ಎರಡನೆಯದು ಮಾದರಿ ಕಾರಾಗೃಹ ಕೈಪಿಡಿಯಲ್ಲಿ ಮಹಿಳೆಯರ ಸುರಕ್ಷತೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ನಿಯಮಗಳನ್ನು ಜಾರಿಗೊಳಿಸುವುದು.

- ಕಾರಾಗೃಹದಲ್ಲಿ ಮಹಿಳೆ– ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಭಾರತ– 2018 [ಎಮ್‌ಡಬ್ಲ್ಯೂಸಿಡಿ]

ಕಾರಾಗೃಹದಲ್ಲಿರುವ ಮಹಿಳೆಯರಿಗೆ ಲಭ್ಯವಿರುವ ಸೌಕರ್ಯಗಳು, ಅವರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳು ಮತ್ತು ಅದರ ಪರಿಹಾರೋಪಾಯವನ್ನು ಅರ್ಥಮಾಡಿಕೊಳ್ಳುವುದು ಈ ವರದಿಯ ಉದ್ದೇಶ.[142] ಈ ವರದಿಯು ಮಹಿಳಾ ಬಂದಿಗಳ ಸುಧಾರಣೆಗೆ ಸಂಬಂಧಿಸಿದಂತೆ 134 ಸಮಗ್ರ ಸಲಹೆಗಳನ್ನು ಒಳಗೊಂಡಿದೆ. ವರದಿಯಲ್ಲಿ ಗರ್ಭಿಣಿಯರು, ಮಾನಸಿಕ ಆರೋಗ್ಯ, ಕಾನೂನು ನೆರವು ಮತ್ತು ಸಮಾಜದೊಂದಿಗೆ ಪುನರ್ ಸಂಘಟನೆ ಬಗ್ಗೆ ವಿಶೇಷವಾಗಿ ಚರ್ಚಿಸಲಾಗಿದೆ.

- ಎನ್‌ಎಎಲ್‌ಎಸ್‌ಎ ಅವರ ಮಹಿಳಾ ಬಂದಿಗಳು ಮತ್ತು ಕಾರಾಗೃಹದಲ್ಲಿ ಅವರೊಡನೆ ಇರುವ ಅವರ ಮಕ್ಕಳಿಗೆ ಕಾನೂನು ಸೇವೆಯನ್ನು ಹೆಚ್ಚಿಸುವ ಬಗ್ಗೆ ಪ್ರಚಾರ/ಅಭಿಯಾನ್

ರಾಷ್ಟ್ರೀಯ ಕಾನೂನು ನೆರವು ಪ್ರಾಧಿಕಾರವು [ಎನ್‌ಎಎಲ್‌ಎಸ್‌ಎ] 2018ರ ಮೇ ತಿಂಗಳಲ್ಲಿ 10 ದಿನದ ಪ್ರಚಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿತು. ಮಹಿಳಾ ಬಂದಿಗಳು ಮತ್ತು ಕಾರಾಗೃಹದಲ್ಲಿ ಅವರೊಡನೆ ಇರುವ ಮಕ್ಕಳಿಗೆ ಹೆಚ್ಚಿನ ಕಾನೂನು ನೆರವು ನೀಡುವುದು ಅದರ ಉದ್ದೇಶವಾಗಿತ್ತು. ಈ ಪ್ರಚಾರ ಕಾರ್ಯದ ಜವಾಬ್ದಾರಿಯನ್ನು ರಾಜ್ಯ ಕಾನೂನು ಸೇವಾ ಪ್ರಾಧಿಕಾರ [ಎಸ್‌ಎಲ್‌ಎಸ್‌ಎ] ಕ್ಕೆ ನೀಡಿ ಕಾರಾಗೃಹ ಇಲಾಖೆಯೂ ಸೇರಿದಂತೆ ಆರೋಗ್ಯ, ಶಿಕ್ಷಣ ಮತ್ತು ಮಹಿಳೆ ಹಾಗೂ ಮಕ್ಕಳು ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ನಡೆಸುವಂತೆ ಸೂಚಿಸಲಾಗಿತ್ತು. ಮಹಿಳಾ ಬಂದಿಗಳಲ್ಲಿ ತಮ್ಮ ಹಕ್ಕುಗಳ ಬಗ್ಗೆ ಮತ್ತು ಕಾನೂನು ಸೇವಾ ಸಂಸ್ಥೆಗಳಿಂದ ದೊರೆಯಬಹುದಾದಂತಹ ಸಹಕಾರದ ಬಗ್ಗೆ ಅರಿವು ಉಂಟುಮಾಡುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಮಹಿಳಾ ಬಂದಿಗಳು ಮತ್ತು ಅವರ ಮಕ್ಕಳ ಕಾನೂನು ಅಗತ್ಯತೆಗಳು, ಆರೋಗ್ಯದ ಹಕ್ಕುಗಳು, ಶಿಕ್ಷಣ, ಕೌಶಲ್ಯಾಧಾರಿತ ತರಬೇತಿ ಮತ್ತು ಮನರಂಜನಾತ್ಮಕ ಸೌಲಭ್ಯಗಳ ಬಗ್ಗೆ ಈ ಕಾರ್ಯಕ್ರಮವು ಹೆಚ್ಚಿನ ಗಮನವನ್ನು ಹರಿಸಿತು. ಕಾರ್ಯಕ್ರಮದ ಪ್ರಚಾರ ವರದಿಯನ್ನು ಎನ್‌ಎಎಲ್‌ಎಸ್‌ಎ ಪ್ರಕಟಿಸಿತು.



# ಸಂದರ್ಭ ಸೂಚಿ


1. ನೆಲ್ಸನ್ ಮಂಡೇಲಾ ನಿಯಮ, ನಿಯಮ 11[ಎ]
2. ಬ್ಯಾಂಕಾಕ್ ರೂಲ್ಸ್, ನಿಯಮ 4
3. ಮಾದರಿ ಕಾರಾಗೃಹ ಕೈಪಿಡಿ, 2016, 26.01
4. ಮಾದರಿ ಕಾರಾಗೃಹ ಕೈಪಿಡಿ, 2016, 26.75
5. ಮಾದರಿ ಕಾರಾಗೃಹ ಕೈಪಿಡಿ, 2016, 26.80
6. ಮಾದರಿ ಕಾರಾಗೃಹ ಕೈಪಿಡಿ, 2016, 26.02
7. ನೆಲ್ಸನ್ ಮಂಡೇಲಾ ನಿಯಮ, ನಿಯಮ 28
8. ಮಾದರಿ ಕಾರಾಗೃಹ ಕೈಪಿಡಿ, 2016, 26.01
9. ಮಾದರಿ ಕಾರಾಗೃಹ ಕೈಪಿಡಿ, 2016, 26.101
10. ಮಾದರಿ ಕಾರಾಗೃಹ ಕೈಪಿಡಿ, 2016, 26.74
11. ಕಾರಾಗೃಹದಲ್ಲಿ ಮಹಿಳೆ– ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಭಾರತ, 2018 [ಜೂನ್ 2018, ಪ್ಯಾರಾ 5.6.3]
12. ಮಾದರಿ ಕಾರಾಗೃಹ ಕೈಪಿಡಿ, 2016, 26.04
13. ಬ್ಯಾಂಕಾಕ್ ರೂಲ್ಸ್, ನಿಯಮ 2[1]
14. ಬ್ಯಾಂಕಾಕ್ ರೂಲ್ಸ್, ನಿಯಮ 2[2]
15. ಮಾದರಿ ಕಾರಾಗೃಹ ಕೈಪಿಡಿ, 2016, 26.05
16. ಬ್ಯಾಂಕಾಕ್ ರೂಲ್ಸ್, ನಿಯಮ 3[2]
17. ಕಾರಾಗೃಹದಲ್ಲಿ ಮಹಿಳೆ– ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಭಾರತ, 2018 [ಜೂನ್ 2018, ಪ್ಯಾರಾ 5.7.8]
18. ಒಂದು ಅಂಚೆ ಕಾರ್ಡ್‌ನಲ್ಲಿ ಮಹಿಳಾ ಬಂದಿಯ ಪ್ರವೇಶದ ದಿನಾಂಕ, ಸಂಬಂಧಪಟ್ಟ ಪೊಲೀಸ್ ಠಾಣೆಯ ವಿವರ, ಬಂಧನಕ್ಕೆ ಆದೇಶ ನೀಡಿದ ನ್ಯಾಯಾಂಗ ಪ್ರಾಧಿಕಾರದ ವಿವರ, ಎಫ್ಐಆರ್ ಸಂಖ್ಯೆ, ಕಾರಾಗೃಹ, ಉಪ–ಕಾರಾಗೃಹದ ವಿವರ, ವೈಯಕ್ತಿಕ ಭೇಟಿಯ ದಿನಗಳು, ಹೊಸದಾಗಿ ಕಾರಾಗೃಹ ಪ್ರವೇಶಿಸಿದ ಮಹಿಳಾ ಬಂದಿಯು ಅಥವಾ ಆಕೆಯೊಂದಿಗೆ ಬಂದಿದ್ದವರು ನೀಡಿರುವ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಬಹುದು.
19. ಮಾದರಿ ಕಾರಾಗೃಹ ಕೈಪಿಡಿ, 2016, 26.32
20. ಮಾದರಿ ಕಾರಾಗೃಹ ಕೈಪಿಡಿ, 2016, 26.33
21. ಬ್ಯಾಂಕಾಕ್ ರೂಲ್ಸ್, ನಿಯಮ 19
22. ಮಾದರಿ ಕಾರಾಗೃಹ ಕೈಪಿಡಿ, 2016, 26.22
23. ಮಾದರಿ ಕಾರಾಗೃಹ ಕೈಪಿಡಿ, 2016, 26.16
24. ಬ್ಯಾಂಕಾಕ್ ರೂಲ್ಸ್, ನಿಯಮ 20
25. ಬ್ಯಾಂಕಾಕ್ ರೂಲ್ಸ್, ನಿಯಮ 21
26. Marty Drapkin, Strip Search Policies in Jail, CorrectionsOne (Jan 27, 2011) - https://www.correctionsone.com/corrections-training/articles/strip-search-policies-in-jails-sKIq8Sv3p5mvucSZ/ (last accessed on 07.03.2020).
27. ಮಾದರಿ ಕಾರಾಗೃಹ ಕೈಪಿಡಿ, 2016, 26.23
28. ಮಾದರಿ ಕಾರಾಗೃಹ ಕೈಪಿಡಿ, 2016, 26.25
29. ಬ್ಯಾಂಕಾಕ್ ರೂಲ್ಸ್, ನಿಯಮ 6
30. ಬ್ಯಾಂಕಾಕ್ ರೂಲ್ಸ್, ನಿಯಮ 7
31. ಮಾದರಿ ಕಾರಾಗೃಹ ಕೈಪಿಡಿ, 2016, 26.27
32. ಅದೇ
33. ಬ್ಯಾಂಕಾಕ್ ರೂಲ್ಸ್, ನಿಯಮ 9
34. ಮಾದರಿ ಕಾರಾಗೃಹ ಕೈಪಿಡಿ, 2016, 26.99
35. ಮಾದರಿ ಕಾರಾಗೃಹ ಕೈಪಿಡಿ, 2016, 26.62, 26.63
36. ಮಾದರಿ ಕಾರಾಗೃಹ ಕೈಪಿಡಿ, 2016, 26.64
37. ಮಾದರಿ ಕಾರಾಗೃಹ ಕೈಪಿಡಿ, 2016, 26.88, 26.90
38. ಮಾದರಿ ಕಾರಾಗೃಹ ಕೈಪಿಡಿ, 2016, 26.65
39. ಮಾದರಿ ಕಾರಾಗೃಹ ಕೈಪಿಡಿ, 2016, 26.70
40. ಮಾದರಿ ಕಾರಾಗೃಹ ಕೈಪಿಡಿ, 2016, 26.71

41. ಮಾದರಿ ಕಾರಾಗೃಹ ಕೈಪಿಡಿ, 2016, 26.73
42. ಮಾದರಿ ಕಾರಾಗೃಹ ಕೈಪಿಡಿ, 2016, 26.56
43. ಬ್ಯಾಂಕಾಕ್ ರೂಲ್ಸ್, ನಿಯಮ 5
44. ಮಾದರಿ ಕಾರಾಗೃಹ ಕೈಪಿಡಿ, 2016, 26.81
45. ಮಾದರಿ ಕಾರಾಗೃಹ ಕೈಪಿಡಿ, 2016, 26.68
46. ಮಾದರಿ ಕಾರಾಗೃಹ ಕೈಪಿಡಿ, 2016, 26.83
47. ಮಾದರಿ ಕಾರಾಗೃಹ ಕೈಪಿಡಿ, 2016, 26.84
48. ಮಾದರಿ ಕಾರಾಗೃಹ ಕೈಪಿಡಿ, 2016, 26.69
49. ಬ್ಯಾಂಕಾಕ್ ರೂಲ್ಸ್, ನಿಯಮ 5
50. ಮಾದರಿ ಕಾರಾಗೃಹ ಕೈಪಿಡಿ, 2016, 6.05
51. Women in prison: mental health and well-being; A guide for prison staff, Penal Reforms International, February 2020 - https://cdn.penalreform.org/wp-content/uploads/2020/02/PRI-Women-in-prison-and-mental-well-being.pdf. (last accessed on 03.03.2020)
52. ಮಾದರಿ ಕಾರಾಗೃಹ ಕೈಪಿಡಿ, 2016, 26.92, 26.98
53. ಮಾದರಿ ಕಾರಾಗೃಹ ಕೈಪಿಡಿ, 2016, 26.100
54. ಮಾದರಿ ಕಾರಾಗೃಹ ಕೈಪಿಡಿ, 2016, 26.8.08
55. ಮಾದರಿ ಕಾರಾಗೃಹ ಕೈಪಿಡಿ, 2016, 26.104
56. ಮಾದರಿ ಕಾರಾಗೃಹ ಕೈಪಿಡಿ, 2016, 26.152
57. ಮಾದರಿ ಕಾರಾಗೃಹ ಕೈಪಿಡಿ, 2016, 26.153
58. ಮಾದರಿ ಕಾರಾಗೃಹ ಕೈಪಿಡಿ, 2016, 26.154
59. ಮಾದರಿ ಕಾರಾಗೃಹ ಕೈಪಿಡಿ, 2016, 26.110
60. ಅಖಿಲ ಭಾರತ ಕಾರಾಗೃಹ ಸುಧಾರಣಾ ಸಮಿತಿ [ಜಸ್ಟೀಸ್ ಮುಲ್ಲಾ ಸಮಿತಿ ವರದಿ] 1980–83, ಪ್ಯಾರಾ 13.11.20
61. ಅಖಿಲ ಭಾರತ ಕಾರಾಗೃಹ ಸುಧಾರಣಾ ಸಮಿತಿ [ಜಸ್ಟೀಸ್ ಮುಲ್ಲಾ ಸಮಿತಿ ವರದಿ] 1980–83, ಪ್ಯಾರಾ 7.13.34
62. ಬ್ಯಾಂಕಾಕ್ ರೂಲ್ಸ್, ನಿಯಮ 10[1]
63. ಮಾದರಿ ಕಾರಾಗೃಹ ಕೈಪಿಡಿ, 2016, 26.25
64. ಬ್ಯಾಂಕಾಕ್ ರೂಲ್ಸ್, ನಿಯಮ 10[2]
65. ಬ್ಯಾಂಕಾಕ್ ರೂಲ್ಸ್, ನಿಯಮ 10[15]
66. ಮಾದರಿ ಕಾರಾಗೃಹ ಕೈಪಿಡಿ, 2016, 26.112
67. ಬ್ಯಾಂಕಾಕ್ ರೂಲ್ಸ್, ನಿಯಮ 13
68. Women in prison: mental health and well-being; A guide for prison staff, Penal Reforms International, February 2020 - https://cdn.penalreform.org/wp-content/uploads/2020/02/PRI-Women-in-prison-and-mental-well-being.pdf, pgs 19-20. (last accessed on 03.03.2020)
69. ಬ್ಯಾಂಕಾಕ್ ರೂಲ್ಸ್, ನಿಯಮ 12
70. Women in prison: mental health and well-being; A guide for prison staff, Penal Reforms International, February 2020 - https://cdn.penalreform.org/wp-content/uploads/2020/02/PRI-Women-in-prison-and-mental-well-being.pdf, pgs 25-26 (last accessed on 03.03.3020).
71. ಮಾದರಿ ಕಾರಾಗೃಹ ಕೈಪಿಡಿ, 2016, 26.19
72. Women in prison: mental health and well-being; A guide for prison staff, Penal Reforms International, February 2020 - https://cdn.penalreform.org/wp-content/uploads/2020/02/PRI-Women-in-prison-and-mental-well-being.pdf, pgs 25-26 (last accessed on 03.03.3020
73. ಬ್ಯಾಂಕಾಕ್ ರೂಲ್ಸ್, ನಿಯಮ 16
74. ಬ್ಯಾಂಕಾಕ್ ರೂಲ್ಸ್, ನಿಯಮ 17 &18
75. ಕಾರಾಗೃಹದಲ್ಲಿರುವ ವ್ಯಕ್ತಿಗಳಲ್ಲಿ ಕಾನೂನು ಅರಿವನ್ನು ಹೆಚ್ಚಿಸುವ ಉದ್ದೇಶದಿಂದ ಸಿಹೆಚ್‌ಆರ್‌ಐ ಎರಡು ಪೋಸ್ಟರ್‌ಗಳನ್ನು ರಚಿಸಿದೆ. ಕಾನೂನು ನೆರವು ಮತ್ತು ನೀವು ಹಾಗೂ ಬಂಧನದಿಂದ ಅಪೀಲ್‌ವರೆಗಿನ ಹಂತಗಳು. ಈ ಪೋಸ್ಟರ್‌ಗಳು ಬೆಂಗಾಳಿ, ಬರ್ಮೀಸ್, ಇಂಗ್ಲೀಷ್, ಹಿಂದಿ, ಕನ್ನಡ, ಮರಾಠಿ, ಮಲಯಾಳಂ, ಪಂಜಾಬಿ ಮತ್ತು ಉರ್ದು ಭಾಷೆಗಳಲ್ಲಿ ಲಭ್ಯವಿದೆ.
76. ಮಾದರಿ ಕಾರಾಗೃಹ ಕೈಪಿಡಿ, 2016, 26.118
77. ಮಾದರಿ ಕಾರಾಗೃಹ ಕೈಪಿಡಿ, 2016, 26.115
78. ಯುಟಿಆರ್‌ಸಿಗಳನ್ನು '1382 ಕಾರಾಗೃಹದಲ್ಲಿ ಅಮಾನವೀಯ ಪರಿಸ್ಥಿತಿ' ಎಂಬ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಏಪ್ರಿಲ್

2015ರಲ್ಲಿ ನೀಡಿದ ಆದೇಶದ ಮೇರೆಗೆ ಸ್ಥಾಪಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ ನೀಡಿರುವ ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್ಸ್ ಅನ್ನು ನೋಡಬಹುದು.

79. ಆರ್.ಡಿ.ಉಪಾಧ್ಯಾಯ v/s ಸ್ಟೇಟ್ ಆಫ್ ಆಂಧ್ರಪ್ರದೇಶ್, ಎಐಆರ್ 2006 ಎಸ್‌ಸಿ 1946
80. ಮಾದರಿ ಕಾರಾಗೃಹ ಕೈಪಿಡಿ, 2016, 26.18. ನೆಲ್ಸನ್ ಮಂಡೇಲಾ ನಿಯಮ, ನಿಯಮ 28
81. ಮಾದರಿ ಕಾರಾಗೃಹ ಕೈಪಿಡಿ, 2016, 26.29.
82. ಮಾದರಿ ಕಾರಾಗೃಹ ಕೈಪಿಡಿ, 2016, 26.48.
83. ಮಾದರಿ ಕಾರಾಗೃಹ ಕೈಪಿಡಿ, 2016, 6.02
84. ನೆಲ್ಸನ್ ಮಂಡೇಲಾ ನಿಯಮ, ನಿಯಮ 48 [2]
85. ಬ್ಯಾಂಕಾಕ್ ರೂಲ್ಸ್, ನಿಯಮ 22
86. ಮಾದರಿ ಕಾರಾಗೃಹ ಕೈಪಿಡಿ, 2016, 26.30. ನೆಲ್ಸನ್ ಮಂಡೇಲಾ ನಿಯಮ, ನಿಯಮ 28
87. ಮಾದರಿ ಕಾರಾಗೃಹ ಕೈಪಿಡಿ, 2016, 26.31. ನೆಲ್ಸನ್ ಮಂಡೇಲಾ ನಿಯಮ, ನಿಯಮ 28
88. ಅದೇ
89. ಮಾದರಿ ಕಾರಾಗೃಹ ಕೈಪಿಡಿ, 2016, 26.35, ಆರ್.ಡಿ.ಉಪಾಧ್ಯಾಯ v/s ಸ್ಟೇಟ್ ಆಫ್ ಆಂಧ್ರಪ್ರದೇಶ್, ಎಐಆರ್ 2006 ಎಸ್‌ಸಿ 1946
90. ಮಾದರಿ ಕಾರಾಗೃಹ ಕೈಪಿಡಿ, 2016, 26.34
91. ಅದೇ
92. ಮಾದರಿ ಕಾರಾಗೃಹ ಕೈಪಿಡಿ, 2016, 26.42
93. ಮಾದರಿ ಕಾರಾಗೃಹ ಕೈಪಿಡಿ, 2016, 26.52
94. ಮಾದರಿ ಕಾರಾಗೃಹ ಕೈಪಿಡಿ, 2016, 26.44
95. ಮಾದರಿ ಕಾರಾಗೃಹ ಕೈಪಿಡಿ, 2016, 26.43
96. ಮಾದರಿ ಕಾರಾಗೃಹ ಕೈಪಿಡಿ, 2016, 26.35
97. ಮಾದರಿ ಕಾರಾಗೃಹ ಕೈಪಿಡಿ, 2016, 26.36, ಬ್ಯಾಂಕಾಕ್ ರೂಲ್ಸ್, ನಿಯಮ 52[3]
98. ಮಾದರಿ ಕಾರಾಗೃಹ ಕೈಪಿಡಿ, 2016, 26.38
99. ಮಾದರಿ ಕಾರಾಗೃಹ ಕೈಪಿಡಿ, 2016, 26.121
100. ಬ್ಯಾಂಕಾಕ್ ರೂಲ್ಸ್, ನಿಯಮ 60
101. ಮಾದರಿ ಕಾರಾಗೃಹ ಕೈಪಿಡಿ, 2016, 26.103
102. ಮಾದರಿ ಕಾರಾಗೃಹ ಕೈಪಿಡಿ, 2016, 26.104
103. ಮಾದರಿ ಕಾರಾಗೃಹ ಕೈಪಿಡಿ, 2016, 26.101
104. ಮಾದರಿ ಕಾರಾಗೃಹ ಕೈಪಿಡಿ, 2016, 26.105
105. ಮಾದರಿ ಕಾರಾಗೃಹ ಕೈಪಿಡಿ, 2016, 26.106, 26.109
106. ಮಾದರಿ ಕಾರಾಗೃಹ ಕೈಪಿಡಿ, 2016, 26.128,
107. ಮಾದರಿ ಕಾರಾಗೃಹ ಕೈಪಿಡಿ, 2016, 26.122
108. ಮಾದರಿ ಕಾರಾಗೃಹ ಕೈಪಿಡಿ, 2016, 26.122, ಬ್ಯಾಂಕಾಕ್ ರೂಲ್ಸ್, ನಿಯಮ 59
109. Swadhar Greh, Ministry of Women and Child Development - https://www.india.gov.in/spotlight/swadhar- greh-scheme (last accessed on 31.01.2020).
110. ಮಾದರಿ ಕಾರಾಗೃಹ ಕೈಪಿಡಿ, 2016, 26.128
111. ಮಾದರಿ ಕಾರಾಗೃಹ ಕೈಪಿಡಿ, 2016, 26.140
112. ಮಾದರಿ ಕಾರಾಗೃಹ ಕೈಪಿಡಿ, 2016, 26.125
113. ಮಾದರಿ ಕಾರಾಗೃಹ ಕೈಪಿಡಿ, 2016, 26.126
114. The Rehabilitation and Social Reintegration of women prisoners: Implementation of the Bangkok Rules, Penal Reforms International - https://cdn.penalreform.org/wp- content/uploads/2019/05/PRI_Rehabilitation-of-women-prisoners_WEB.pdf. (last accessed on 31.01.2020)
115. ಮಾದರಿ ಕಾರಾಗೃಹ ಕೈಪಿಡಿ, 2016, 26.04[(೨೩)]
116. ನೆಲ್ಸನ್ ಮಂಡೇಲಾ ನಿಯಮ, ನಿಯಮ 5
117. ನೆಲ್ಸನ್ ಮಂಡೇಲಾ ನಿಯಮ, ನಿಯಮ 81
118. ಮಾದರಿ ಕಾರಾಗೃಹ ಕೈಪಿಡಿ, 2016, 26.115–117
119. ನೆಲ್ಸನ್ ಮಂಡೇಲಾ ನಿಯಮ, ನಿಯಮ 74
120. ಮಾದರಿ ಕಾರಾಗೃಹ ಕೈಪಿಡಿ, 2016, 26.168

121. ಮಾದರಿ ಕಾರಾಗೃಹ ಕೈಪಿಡಿ, 2016, 26.169
122. ಮಾದರಿ ಕಾರಾಗೃಹ ಕೈಪಿಡಿ, 2016, 26.166
123. ಮಾದರಿ ಕಾರಾಗೃಹ ಕೈಪಿಡಿ, 2016, 26.158
124. ಅದೇ
125. ಮಾದರಿ ಕಾರಾಗೃಹ ಕೈಪಿಡಿ, 2016, 26.174
126. ಮಾದರಿ ಕಾರಾಗೃಹ ಕೈಪಿಡಿ, 2016, 26.179
127. ಮಾದರಿ ಕಾರಾಗೃಹ ಕೈಪಿಡಿ, 2016, 26.180
128. ಮಾದರಿ ಕಾರಾಗೃಹ ಕೈಪಿಡಿ, 2016, 26.181
129. ಮಾದರಿ ಕಾರಾಗೃಹ ಕೈಪಿಡಿ, 2016, 26.133–134
130. ಮಾದರಿ ಕಾರಾಗೃಹ ಕೈಪಿಡಿ, 2016, 26.12, ಬ್ಯಾಂಕಾಕ್ ರೂಲ್ಸ್, ನಿಯಮ 33
131. ಮಾದರಿ ಕಾರಾಗೃಹ ಕೈಪಿಡಿ, 2016, 26.13
132. ಬ್ಯಾಂಕಾಕ್ ರೂಲ್ಸ್, ನಿಯಮ 29
133. Prison Reforms in India, Members' Reference Service – Lok Sabha Secretariat, New Delhi - http://parliamentlibraryindia.nic.in/writereaddata/Library/Reference%20Notes/Prison_reforms_in_India.pdf (last accessed on 20.01.2020).
134. ಅದೇ
135. ಮಹಿಳೆಯರ ಸಬಲೀಕರಣ ಸಮಿತಿಯ ಮೂರನೇ ವರದಿ [13ನೇ ಲೋಕಸಭೆ] ಆಗಸ್ಟ್ 2001
136. Convention on the Elimination of All Forms of Discrimination against Women, UN Women - https://www. un.org/womenwatch/daw/cedaw/cedaw.htm (last accessed on 20.01.2020).
137. XIII ನೇ ಅಧ್ಯಾಯ ಮಹಿಳಾ ಬಂದಿಗಳು– ಮುಲ್ಲಾ ಸಮಿತಿ ವರದಿ, https://mha.gov.in/MHA1/PrisonReforms/ NewPDF/PRV1_210TO240.pdf (last accessed on ¸À20.01.2020).
138. ಮಹಿಳೆಯರ ಸಬಲೀಕರಣ ಸಮಿತಿಯ ಮೂರನೇ ವರದಿ [13ನೇ ಲೋಕಸಭೆ] ಆಗಸ್ಟ್ 2001
139. ಭಾರತೀಯ ಕಾನೂನು ಆಯೋಗ 135ನೇ ವರದಿ, ಬಂಧನದಲ್ಲಿ ಮಹಿಳೆ– https://www.penalreform.org/issues/prison-conditions/standard-minimum-rules/ (last accessed on 20.01.2020).
140. ಮಹಿಳೆಯರ ಸಬಲೀಕರಣ ಸಮಿತಿಯ ಮೂರನೇ ವರದಿ [13ನೇ ಲೋಕಸಭೆ] ಆಗಸ್ಟ್ 2001
141. Nelson Mandela Rules (revised SMR), Penal Reform International - https://www.penalreform.org/issues/prison-conditions/standard-minimum-rules/ (last accessed on 20.01.2020).
142. Report on 'Women in Prisons' launched by the Ministry of Women and Child Development - https://pib.gov.in/newsite/PrintRelease.aspx?relid=180173 (last accessed on 20.01.2020).

# CHRI ಕಾರ್ಯಕ್ರಮಗಳು (ಕಾಮನ್‌ವೆಲ್ತ್ ಮಾನವ ಹಕ್ಕುಗಳ ಉಪಕ್ರಮ)

CHRI ನ ನಂಬಿಕೆ ಎಂದರೆ, ಕಾಮನ್‌ವೆಲ್ತ್ ಮತ್ತು ಅದರ ಸದಸ್ಯ ದೇಶಗಳು ತಮ್ಮ ಜವಾಬ್ದಾರಿ, ಕಾರ್ಯನಿರ್ವಹಣೆ ಮುಂತಾದವುಗಳಲ್ಲಿ ಉತ್ತಮ ಗುಣಮಟ್ಟವನ್ನು ಕಾಪಾಡಿಕೊಳ್ಳುವುದೇ ಅಲ್ಲದೆ ಅವುಗಳಿಗೆ ಜವಾಬ್ದಾರಿಯುತವಾಗಿರಬೇಕು. ಇದು ಮಾನವ ಹಕ್ಕುಗಳಿಗೆ, ಪಾರದರ್ಶಕತೆಗೆ, ಪ್ರಜಾಪ್ರಭುತ್ವಕ್ಕೆ ಹಾಗೂ ಸಾಧಿತವಾಗುವಂತಹ/ ಊರ್ಜಿತವಾಗಿಸುವಂತಹ/ ಸಮರ್ಥನೆಯ ವಿಕಾಸ ಗುರಿಗಳಿಗೆ (SDGs) ಅವಶ್ಯಕ. CHRI ವಿಶೇಷವಾಗಿ ಮಾನವ ಹಕ್ಕುಗಳಿಗೆ ಸಂಬಂಧಿಸಿದ ಉಪಕ್ರಮ ಮತ್ತು ವಕಾಲತ್ತುಗಳ ವ್ಯೂಹ/ತಂತ್ರದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ. ಮಾನವ ಹಕ್ಕುಗಳು ನ್ಯಾಯವನ್ನು ಪಡೆಯುವ ಅವಕಾಶ, ಮಾಹಿತಿಯನ್ನು ಪಡೆಯವ ಅವಕಾಶ ಮುಂತಾದವುಗಳನ್ನು ತನ್ನ ಗುರಿಯಾಗಿಸಿಕೊಂಡಿವೆ. CHRI ಈ ಕೆಳಗಿನ ಪ್ರಾಥಮಿಕ ಕಾರ್ಯಕ್ರಮಗಳ ಸಂಶೋಧನೆ, ಪ್ರಚಾರ, ಪ್ರಕಾಶನ ಕಾರ್ಯಗಾರ, ವಿಶ್ಲೇಷಣೆ, ಚಾಲನೆಗೊಳಿಸುವಿಕೆ, ಪ್ರಸರಣ (ಪ್ರಸಾರ) ಮತ್ತು ಮಾಹಿತಿಗಳ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿದೆ.

## 1. ನ್ಯಾಯವನ್ನು ಪಡೆಯುವ ಅವಕಾಶ (ATJ):*

**ಪೊಲೀಸ್ ಸುಧಾರಣೆ:** ಅನೇಕ ದೇಶಗಳಲ್ಲಿ ಪೊಲಿಸರನ್ನು ದಬ್ಬಾಳಿಕೆ ನಡೆಸುವ, ಪೀಡಿಸುವ ಸರ್ಕಾರಿ ವ್ಯವಸ್ಥೆಯೆಂದೇ ಪರಿಗಣಿಸಿದ್ದಾರೆಯೇ ವಿನಃ ನಾಗರಿಕರ ಹಕ್ಕುಗಳನ್ನು ಕಾಪಾಡುವ ಜವಾಬ್ದಾರಿಯುತ ವ್ಯಕ್ತಿಗಳೆಂದು ಪರಿಗಣಿಸಿಲ್ಲ. ಇವರಿಂದಲೇ ಬಹುವ್ಯಾಪಕವಾದ ಮಾನವಹಕ್ಕುಗಳ ಉಲ್ಲಂಘನೆ, ನ್ಯಾಯದ ನಿರಾಕರಣೆ ಆಗುತ್ತವೆ ಎಂದೇ ತಿಳಿದಿದ್ದಾರೆ. CHRI ಪೊಲೀಸರನ್ನು, ಕಾನೂನಿನ ನಿಯಮಗಳನ್ನು ಹೇರುವಂತಹ ವರ್ಗ ಎಂದು ಬಿಂಬಿಸುವ ಬದಲು, ಅದನ್ನು ಎತ್ತಿ ಹಿಡಿಯುವಂತಹ ಸುಧಾರಿತ ವ್ಯವಸ್ಥೆ ಎಂದು ಬಿಂಬಿಸುವ ಪ್ರಯತ್ನವನ್ನು ಮಾಡುತ್ತಿದೆ. ಈ ನಿಟ್ಟಿನಲ್ಲಿ CHRI ನ ಕಾರ್ಯಕ್ರಮಗಳು, ಪೊಲೀಸ್ ಸುಧಾರಣೆಗೆ ಮತ್ತು ನಾಗರಿಕ ಸಮಾಜದ ಪರಿಹಾರ ಕಾರ್ಯಕ್ರಮಗಳನ್ನು ಬಲಪಡಿಸಲು ಈ ಮೂಲಕ ಸಾರ್ವಜನಿಕರ ನೆರವು ಪಡೆಯುವಿಕೆಯನ್ನು ತನ್ನ ಗುರಿಯಾಗಿಸಿಕೊಂಡಿದೆ. ಪೂರ್ವ ಆಫ್ರಿಕಾ ಮತ್ತು ಘಾನಾಗಳಲ್ಲಿ ಪೊಲೀಸ್ ಹೊಣೆಗಾರಿಕೆಗಳು ಮತ್ತು ರಾಜಕೀಯ ಹಸ್ತಕ್ಷೇಪಗಳನ್ನು ನಿರಂತರವಾಗಿ ಪರೀಕ್ಷಿಸುತ್ತಿದೆ.

* ಲಿಂಗಾಧಾರಿತ, ದೈಹಿಕ ಲಕ್ಷಣ, ಬಣ್ಣದ ಆಧಾರದ ಮೇಲೆ ಭೇದಭಾವಗಳ ವಿರುದ್ಧದ ಒಂದು ಇಲಾಖೆಯನ್ನು ಸ್ಥಾಪಿಸಲು ಪ್ರಯತ್ನಿಸಿದೆ.

*** ಕಾರಾಗೃಹಗಳ ಸುಧಾರಣೆ:** ಔಪಚಾರಿಕವಾಗಿ ಮುಚ್ಚಿದ ವ್ಯವಸ್ಥೆಯನ್ನು ಹೆಚ್ಚು ಪಾರದರ್ಶಕವಾಗಿಸುವ ಹಾಗೂ ಭ್ರಷ್ಟಾಚಾರ ಮುಂತಾದವುಗಳನ್ನು ಕಾರಾಗೃಹದಿಂದ ಮುಕ್ತಗೊಳಿಸಲು ಉದ್ದೇಶಿಸಿದೆ. ಕಾನೂನು ವ್ಯವಸ್ಥೆಯ ವೈಫಲ್ಯದ ಕಾರಣದಿಂದಾಗಿ ಕಾರಾಗೃಹಗಳಲ್ಲಿ ಬಂದಿಗಳ ಸಂಖ್ಯೆ ಅಧಿಕವಾಗಿದೆ. ಒಪ್ಪಲು ಸಾಧ್ಯವೇ ಇಲ್ಲದಂತಹ ವಿಚಾರಣಾ ಪೂರ್ವ ದೀರ್ಘ ಬಂಧನ ಮತ್ತು ಕಾರಾಗೃಹಗಳಲ್ಲಿ ಅನಗತ್ಯವಾಗಿ ಹೆಚ್ಚು ಕಾಲ ಉಳಿಸಿಕೊಳ್ಳುವಿಕೆ ಮುಂತಾದವುಗಳನ್ನು ವಿಶೇಷವಾಗಿ ಗಮನಿಸಿ ಅದಕ್ಕನುಗುಣವಾದ ಕಾನೂನಿನ ಹಸ್ತಕ್ಷೇಪ, ನೀತಿ ನಿಯಮಗಳಲ್ಲಿ ಬದಲಾವಣೆ ಹಾಗೂ ಕಾರಾಗೃಹಗಳಲ್ಲಾಗುವ ಅಚಾತುರ್ಯ ಮತ್ತು ಋಣಾತ್ಮಕ ವ್ಯವಸ್ಥೆಗಳ ತಿದ್ದುಪಡಿ ಮುಂತಾದವುಗಳನ್ನು ಗುರಿಯಾಗಿಸಿಕೊಂಡಿದೆ. ಈ ಕ್ಷೇತ್ರಗಳಿಗೆ ವಿಶೇಷ ಗಮನ ನೀಡುವುದರಿಂದ ಕಾರಾಗೃಹದ ಆಡಳಿತದಲ್ಲಿ, ನ್ಯಾಯದ ನಿಬಂಧನೆಗಳಲ್ಲಿ ಯುಕ್ತ ಸುಧಾರಣೆಗಳನ್ನು ತರಲು ಸಾಧ್ಯ.

## 2. ಮಾಹಿತಿಯನ್ನು ಪಡೆಯುವ ಅವಕಾಶ:

ಮಾಹಿತಿಯನ್ನು ಪಡೆಯುವ ಅವಕಾಶಗಳನ್ನು ಪ್ರಚಾರ ಮಾಡುವ ಕಾರ್ಯದಲ್ಲಿ CHRI ಯನ್ನು ಒಂದು ಮುಖ್ಯ ಸಂಘಟನೆ ಎಂದೇ ಗುರುತಿಸಲಾಗಿದೆ. CHRI ಯು ನಿಯಮಾನುಸಾರ ಮಾಹಿತಿ ಪಡೆಯುವ ಅವಕಾಶಗಳ ಪರಿಣಾಮಕಾರಿ ಹಕ್ಕುಗಳ ಆಚರಣೆಯನ್ನು ಮತ್ತು ಅವುಗಳ ಪ್ರಚಾರವನ್ನು ಮಾಡಲು ಎಲ್ಲಾ ದೇಶಗಳನ್ನು ಉತ್ತೇಜಿಸುತ್ತದೆ. ನಿಯತಕಾಲಿಕವಾಗಿ ಕಾನೂನುಬದ್ಧವಾಗಿಸುವಿಕೆಯನ್ನು ಉತ್ತೇಜಿಸುವುದೇ ಅಲ್ಲದೆ ಭಾರತ, ಶ್ರೀಲಂಕಾ, ಆಫ್ಘಾನಿಸ್ತಾನ, ಬಾಂಗ್ಲಾದೇಶ ಮತ್ತು ಇತ್ತೀಚೆಗೆ ಕೀನ್ಯಾದಲ್ಲಿ ಮಾಹಿತಿ ಪಡೆಯುವ ನಿಯಮ ಮತ್ತು ಆಚರಣೆಗಳನ್ನು ಪ್ರಚಾರ ಮಾಡುವಲ್ಲಿ CHRI ಬಹಳ ಯಶಸ್ವಿಯಾಗಿದೆ. CHRI ಯು ಘಾನಾದಲ್ಲಿ ಮಾಹಿತಿ ಹಕ್ಕಿಗಾಗಿ ನಾಗರೀಕ ಸಮಾಜ ಸಂಯೋಜನೆಯಲ್ಲಿ ಒಂದು ಸಚಿವಾಲಯವನ್ನೇ ಸ್ಥಾಪಿಸಿದೆ. ನಿಯತಕಾಲಿಕವಾಗಿ ನಾವು ಹೊಸ ಶಾಸನಗಳನ್ನು ವಿಮರ್ಶಿಸಿ ಸರ್ಕಾರದಲ್ಲಿ ಉತ್ತಮ ಆಚರಣೆಗಳನ್ನು ತರುವಲ್ಲಿ ಹಸ್ತಕ್ಷೇಪ ಮಾಡಿ ಹಲವಾರು ಬದಲಾವಣೆಗಳನ್ನು ತರುತ್ತಿದ್ದೇವೆ. ಇದನ್ನು ಸರ್ಕಾರಿ ಮತ್ತು ನಾಗರೀಕ ಸಮಾಜಕ್ಕೆ ಸಂಬಂಧಪಟ್ಟ ನಿಯಮಗಳನ್ನು ರಚಿಸುವ ಮತ್ತು ಅವುಗಳನ್ನು ಅಚರಣೆಗೆ ತರುವ ಕಾಲದಲ್ಲಿ ಇಂತಹ ಹಸ್ತಕ್ಷೇಪ ಪರಿಣಾಮಕಾರಿಯಾಗಿದೆ. ನಮಗೆ ಉದ್ರಿಕ್ತ ವಾತಾವರಣಗಳಲ್ಲಿ ಹಾಗೂ ಸಾಂಸ್ಕೃತಿಕವಾಗಿ ವ್ಯತ್ಯಾಸವಾದಂತಹ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಅನುಭವವಿದೆ. ಈ ಅನುಭವಗಳು ಮಾಹಿತಿ ಹಕ್ಕುಗಳಿಗೆ ಸಂಬಂಧಿಸಿದಂತಹ ಹೊಸ ನಿಯಮಗಳನ್ನು ರೂಪಿಸುವಲ್ಲಿ ಉತ್ತಮ ಒಳನೋಟವನ್ನು ಕೊಡುತ್ತದೆ. ಉದಾಹರಣೆಗೆ– ಘಾನಾದಲ್ಲಿ ಮಾಹಿತಿಯನ್ನು ಪಡೆಯುವ ಮೌಲ್ಯಗಳ ತಿಳುವಳಿಕೆಗಳನ್ನು ಪ್ರಚಾರ ಮಾಡುವಲ್ಲಿ ಹಾಗೂ ಪರಿಣಾಮಕಾರಿಯಾದ ಹೊಸ ನಿಯಮಗಳನ್ನು ಪರಿಚಯಿಸುವಲ್ಲಿ ಬಹಳ ಯಶಸ್ವಿಯಾಗಿದ್ದೇವೆ.

### * ದಕ್ಷಿಣ ಏಷ್ಯಾದ ಮಾಧ್ಯಮ ರಕ್ಷಕರ ಜಾಲಕಾರ್ಯ (South Asia Media Defender's Network- SAMDEN):

ದಕ್ಷಿಣ ಏಷ್ಯಾದಲ್ಲಿ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಕ್ಷೇತ್ರಗಳಲ್ಲಿ ಅಭಿವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯದ ಮೇಲೆ ಒತ್ತಡ ಹೇರಿರುವ ಮಾಧ್ಯಮ ಕಾರ್ಯಕರ್ತರ ಮೇಲೆ ಹೆಚ್ಚುತ್ತಿರುವ ಹಲ್ಲೆಗಳ ಸಮಸ್ಯೆಗಳನ್ನು ಪರಿಹರಿಸಲು ಮಾಧ್ಯಮದ ವೃತ್ತಿಪರ ವಲಯ ಜಾಲಕಾರ್ಯಗಳನ್ನು CHRI ರಚಿಸಿದೆ. CHRI ಸ್ಥಾಪಿಸಿರುವಂತಹ ದಕ್ಷಿಣ ಏಷ್ಯಾದ ಮಾಧ್ಯಮ ರಕ್ಷಕರ ಜಾಲಕಾರ್ಯದ ಸ್ವಾತಂತ್ರ್ಯವು ಅವಿಭಾಜ್ಯವಾಗಿರುವುದೇ ಅಲ್ಲದೆ ಯಾವ ರಾಜಕೀಯ ಎಲ್ಲೆಗಳನ್ನು ತಿಳಿದಿರುವುದಿಲ್ಲ ಎಂಬುದನ್ನು ಗುರುತಿಸಿದೆ. ಭೇದಭಾವಗಳನ್ನು ಮತ್ತು ಬೆದರಿಕೆಗಳನ್ನು ಅನುಭವಿಸಿದಂತಹ ಮಾಧ್ಯಮದ ವೃತ್ತಿಪರರ ಒಂದು ಸಮೂಹ ಈ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದೆ. ಮಾಧ್ಯಮದ ಮೇಲೆ ಒತ್ತಡಗಳು, ಮಾಧ್ಯಮದ ಸ್ವಾತಂತ್ರ್ಯಹರಣ ಮತ್ತು ಅವಕಾಶಗಳ ಸಂಕುಚಿತತೆ ಮುಂತಾದ ಸಮಸ್ಯೆಗಳನ್ನು ಎತ್ತಿಹಿಡಿಯಲು ಈ ವೇದಿಕೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದೆ. ಶಕ್ತಿ, ಸಹಕಾರ, ಸಂಯೋಜನೆ ಮೂಲಕ ಧನಾತ್ಮಕವಾಗಿ ಬೆಳೆಯಬಹುದು ಎಂಬುದನ್ನು ಮಾಧ್ಯಮಕ್ಕೆ ತಿಳಿಸುವ ಪ್ರಯತ್ನವನ್ನು ಮಾಡುತ್ತಿವೆ. ಸಮಷ್ಠಿಯ (ಸಮೂಹ) ಮುಖ್ಯ ಕಾರ್ಯಕ್ಷೇತ್ರವೆಂದರೆ, ಮಾಹಿತಿ ಚಳುವಳಿಯ ಹಕ್ಕುಗಳೊಂದಿಗೆ ದಕ್ಷಿಣ ಏಷ್ಯಾದ ಮಾಧ್ಯಮ ರಕ್ಷಕರ ಜಾಲಕಾರ್ಯ (South Asia Media Defenders Network- SAMDEN) ವನ್ನು ಬೆಸೆಯುವುದು.

## 3. ಅಂತಾರಾಷ್ಟ್ರೀಯ ವಕಾಲತ್ತು ಮತ್ತು ಕಾರ್ಯಯೋಜನೆ:

ಕಾಮನ್‌ವೆಲ್ತ್ ರಾಷ್ಟ್ರಗಳು ಮಾನವ ಹಕ್ಕುಗಳಿಗೆ ಸಂಬಂಧಪಟ್ಟ ಬಾಧ್ಯತೆಗಳನ್ನು ಅನುಷ್ಠಾನಗೊಳಿಸುತ್ತಿದೆಯೇ ಎಂಬುದರ ಬಗ್ಗೆ ಸಿಹೆಚ್‌ಆರ್‌ಐ ನಿಗಾವಹಿಸುತ್ತದೆ. ಯಾವ ರಾಷ್ಟ್ರದಲ್ಲಿ ಅದರ ಉಲ್ಲಂಘನೆ ಆಗುತ್ತಿದೆಯೋ ಅಲ್ಲಿ ಮಾನವ ಹಕ್ಕುಗಳ ಅಗತ್ಯದ ಬಗ್ಗೆ ವಕಾಲತ್ತು ನಡೆಸುತ್ತದೆ. ಕಾಮನ್‌ವೆಲ್ತ್ ಸಚಿವಾಲಯ, ಮಂತ್ರಿಮಂಡಲದ ಕ್ರಿಯಾ ಗುಂಪು, ವಿಶ್ವಸಂಸ್ಥೆ ಮತ್ತು ಆಫ್ರಿಕಾ, ಮಾನವ ಮತ್ತು ನಾಗರಿಕರ ಹಕ್ಕುಗಳ ಆಯೋಗ ಒಳಗೊಂಡಂತೆ ಸ್ಥಳೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಿಹೆಚ್‌ಆರ್‌ಐ ಕಾರ್ಯನಿರತವಾಗಿದೆ. ಕಾಮನ್‌ವೆಲ್ತ್ ಮಾನವ ಹಕ್ಕುಗಳ ಉಪಕ್ರಮವು, ಕಾಮನ್‌ವೆಲ್ತ್ ರಾಷ್ಟ್ರಗಳ ಸುಧಾರಣೆ, ಅದರ ಸದಸ್ಯ ರಾಷ್ಟ್ರಗಳು ವಿಶ್ವಸಂಸ್ಥೆಯ ಮಾನವ ಹಕ್ಕು ಪರಿಷತ್ತಿನಲ್ಲಿ ನೀಡಿದ ವಾಗ್ದಾನದ ಅನುಷ್ಠಾನದ ಪರಿಶೀಲನೆ, ವಿಶ್ವ ನಿಯತಕಾಲಿಕ ಪರಿಶೀಲನೆ ಹಾಗೂ ಸದ್ಯದ ಕಾರ್ಯಯೋಜನೆಗಳ ಅನುಷ್ಠಾನದ ಕಾರ್ಯನಿರ್ವಹಣೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಮಾನವ ಹಕ್ಕುಗಳ ಕಾರ್ಯಕರ್ತರನ್ನು ರಕ್ಷಿಸುವುದು, ನಾಗರಿಕ ಸಮಾಜದ ರಕ್ಷಣೆ ಮತ್ತು ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಮಾನವ ಹಕ್ಕು ಸಂಸ್ಥೆಗಳ ಕಾರ್ಯಾಚರಣೆಗಳನ್ನು ಪರಿಶೀಲಿಸಿ ಅದನ್ನು ಸಬಲೀಕರಣಗೊಳಿಸಲು ವಕಾಲತ್ತನ್ನು ಸಹ ನಡೆಸುತ್ತೇವೆ.

Activity supported by the
Canada Fund for Local Initiatives

Activité réalisée avec l'appui du
Fonds canadien d'initiatives locales

Canada

*"The journey of gender justice is long; the battle for equity and equality for the weaker sex, amidst feudalist inhibitions, is on... Still there is hope that some action will happen... Many police and prison officers, men and women, are unbelievably humanist. The negative thought that nothing will succeed must be dissolved and positive hope that reforms will work must be kindled."*

*- Justice V.R. Krishna Iyer*

CHRI
Commonwealth Human Rights Initiative
working for the *practical* realisation of human rights in the Commonwealth

55A, Third Floor, Siddhartha Chambers - I,
Kalu Sarai, New Delhi 110 016, India
Tel: +91 11 4318 0200 Fax: +91 11 2686 4688
E-mail: info@humanrightsinitiative.org
Website: www.humanrightsinitiative.org
Twitter: @CHRI_INT